ಬಸವರಾಜ ಬಳಿಗಾರ ಸಂಪಾದಕತ್ವದಲ್ಲಿ..

KARKAN/2021/27600

# ಕರುನಾಡ ಕಂದ

ಸಂಪುಟ-1 । ಸಂಚಿಕೆ-2 । ದಿನಾಂಕ: 15-11-2021 । ಪುಟಗಳು: 16

ಪಾಕ್ಷಿಕ

ಬೆಲೆ 20 ರೂ



## ಮಿಣುಕಿ ಮರೆಯಾದ ನಕ್ಷತ್ರ

ಕಾಣದಂತೆ ಮಾಯವಾದನೋ!

## ರಾಜಕುಮಾರ ಅಪ್ಪು

ಕಲ್ಯಾಣ ಕರ್ನಾಟಕದಲ್ಲಿ ಕನ್ನಡ ಬೀಜ ಬಿತ್ತಿದ ಡಾ॥ಚನ್ನಬಸವ ಪಟ್ಟದೇವರು

ಮರಾಠಿ ನೆಲದಲ್ಲಿ ಕನ್ನಡ ಶಾಲೆಗಳು

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16

## ಕರಾಟೆ ಕಾರ್ಯಕ್ರಮ ಪುನ ಚಾಲನೆಗೆ ಬರಬೇಕು. ದಶರತ್ ಧೂಮ್ನಸೂರ್.

ಕಲಬುರ್ಗಿ: ಕಲ್ಯಾಣ ಕರ್ನಾಟಕದಲ್ಲಿ 18 ನೂರಕ್ಕೂ ಹೆಚ್ಚು ಕರಾಟೆ ಬೋಧಕರು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಯೋಜನೆಯಡಿಯಲ್ಲಿ ಸ್ವಯಂ ರಕ್ಷಣೆ (ಕರಾಟೆ) ಕೌಶಲ್ಯ ಕಾರ್ಯಕ್ರಮವನ್ನು ಕಲ್ಯಾಣ ಕರ್ನಾಟಕದ ಪ್ರತಿಯೊಂದು ಪ್ರೌಢಶಾಲೆಯಲ್ಲಿ 2013ರಿಂದ 2017ರವರೆಗೆ ಸತತವಾಗಿ ಕಾರ್ಯನಿರ್ವಹಿಸಿ ಈ ಕಾ ಂ ು ್ ಂ ್ ಕ ್ರ ವ ್ ು ವ ್ ನ ್ ು ್ ಯಶಸ್ವಿಗೊಳಿಸಿದ್ದಾರೆ.



ಆ ದ ರ ' ಕಾರಣಾಂತರಗಳಿಂದ ಈ ಕಾರ್ಯಕ್ರಮ ಸರ್ಕಾರ ಸ್ಥಗಿತಗೊಳಿಸಿದ್ದು ಅಲ್ಲದೆ (ಕೆ.ಎಸ್.ಆರ್.ಪಿ) ಪೊಲೀಸ್ ಇಲಾಖೆಗೆ ವಹಿಸಿದ್ದು ಯಾವ ನ್ಯಾಯ ಎಂದು ಕಲ್ಯಾಣ ಕರ್ನಾಟಕದ ಜನ್ ಸೀಟು ರಿಯೋ ಕರಾಟೆ ಅಸೋಸಿಯೇಷನ್ ಪ್ರಸಿಡೆಂಟ್ ದಶರತ್ ದೂಮ್ಮನೂರ್ ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಹಾಗೂ ಬ್ಲಾಕ್ ಬೆಲ್ಟ್ ಪದವೀಧರರಿಗೆ ತರಬೇತಿ ನೀಡಲು ಸರ್ಕಾರ ಪುನಃ ಈ ಕಾರ್ಯಕ್ರಮ ಕರಾಟೆ ತರಬೇತಿ ದಾರರಿಗೆ ನೀಡಬೇಕು ಕೋವಿಡ್ ಸಮಯದಲ್ಲಿ ಕರಾಟೆ ಬೋಧಕರಿಗೆ ಯಾವುದೇ ರೀತಿಯ ಸರ್ಕಾರ ಅನುದಾನ ನೀಡಿಲ್ಲ ಎಂದು ಹೇಳಿದ್ದಾರೆ ಅಲ್ಲದೆ ಮೂರು ವರ್ಷದಿಂದ ಕರಾಟೆ ಕಾರ್ಯಕ್ರಮ ತರಬೇತಿ ನಿಲ್ಲಿಸಲಾಗಿತ್ತು ಇದನ್ನು ಪುನಃ ಕಾರ್ಯಕ್ರಮ ಚಾಲನೆಗೆ ತರಬೇಕು ಕರಾಟೆ ಬೋಧಕರಿಗೆ ನ್ಯಾಯ ಒದಗಿಸಿಕೊಡಬೇಕು ಎಂದು ಕಲ್ಯಾಣ ಕರ್ನಾಟಕ ಝೆನ್ ಶಿಟುರೀಯೋ ಕರಾಟೆ ಅಸೋಸಿಯೇಷನ್ ಪ್ರೆಸಿಡೆಂಟ್ ದಶರತ್ ಧೂಮ್ಮನಸುರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**–ಜೆಟ್ಟಪ್ಪ ಎಸ್ ಪೂಜಾರಿ**

## ಕನ್ನಡ ನಾಡು




ಎಂತಹ ಚೆಂದವೋ ನಮ್ಮ ಕನ್ನಡ ನಾಡು
ಸುಂದರ ಸೂಬಗಿನ ಚೆಲುವಿನ ಬೀಡು
ಸರ್ವಧರ್ಮಗಳ ಸೆಲೆಯು
ಸಾಧು ಸಂತರ ನೆಲೆಯು
ಶಿಲ್ಪ ಕಲೆಗಳ ಬಲೆಯು
ಕುಂಚ ಕಾವ್ಯಗಳ ಕಲೆಯು
ಜನಪದ ಸೊಗಡಿನ ಮಾಲೆ
ಸಪ್ತ ಸ್ವರಗಳ ಶಾಲೆ
ಶಾಂತಿ ಕ್ರಾಂತಿಗಳ ಕಹಳೆ
ರಮ್ಯ ತಾಣಗಳ ಸೆಳೆ
ಬಾಂಧವ್ಯ ಬೆಸೆಯುವ ಮಮಕಾಂ
ಗತ ಇತಿಹಾಸದ ಚಮತ್ಕಾರ
ವಿಜ್ಞಾನ ತಂತ್ರಜ್ಞಾನದ ಆವಿಷ್ಕಾರ
ಜೋಗ ಜಲಪಾತದ ಝೇಂಕಾರ
ಏಲಕ್ಕಿಯ ಕಸ್ತೂರಿಯ ಕಂಪನ
ವನ್ಯ ಮೃಗಗಳ ತಾಣ
ತೀರಿಸಲಾಗದು ನಾಡಿನ ಋಣ
ಪಾವನವಾಯಿತು ನನ್ನ ಜೀವನ

**–ಶ್ರೀಮತಿ ಭಾಗ್ಯ ಶ್ರೀ ಗವಿಶಿದ್ಧಯ್ಯ ಹಳ್ಳಿಕೇರಿಮಠ**
ಹೆಮ್ಮೆಯ ಕನ್ನಡತಿ ಪ್ರಶಸ್ತಿ ಪುರಸ್ಕೃತರು (ಗದಗ)

### ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ
## ಉಸ್ತುವಾರಿ ಸಚಿವ ಮುರುಗೇಶ ನಿರಾಣಿಯವರಿಗೆ ಮನವಿ



ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿಯಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಭೆ ನಡೆಸುವಂತೆ ಹಾಗೂ ಭೂಕಂಪನವಾಗುತ್ತಿರುವ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವರ ಗ್ರಾಮ, ತೆಗಲತಿಪ್ಪಿ ಇನ್ನೂ ಅನೇಕ ಗ್ರಾಮಗಳಿಗೆ ಶಿಫ್ರವೇ ಪರಿಹಾರ ಹಾಗೂ ಮುಂತಾದ ಬೇಡಿಕೆಗಳು ಈಡೇರಿಸುವಂತೆ ಒತ್ತಾಯಿಸಿ ನವೆಂಬರ್ 02 ಮಂಗಳವಾರ ಚಿಂಚೋಳಿ ತಾಲೂಕಿನ ಬಸವೇಶ್ವರ ವೃತ್ತದ ಬಳಿ ಕಲಬುರಗಿ ಉಸ್ತುವಾರಿ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಯಿತು

ಈ ಸಂದರ್ಭದಲ್ಲಿ ಪ್ರದೀಪ್ ಮಾಳಗಿ, ಮಾರುತಿ ಗಂಜಗಿರಿ, ಗೋಪಾಲ್ ಗಾರಂಪಳ್ಳಿ, ಮಾರುತಿ ಜಾದವ್, ಮೌನೇಶ್ ಗಾರಂಪಳ್ಳಿ, ಸಿದ್ದು ರಂಗನೂರ್, ಅಣ್ಣಾರಾವ್ ಛಿದ್ರಿ ನಾವದಗಿ ಅಜರೋದ್ದಿನ್, ಶರಣು ಟಿ.ಟಿ ಸುಭಾಷ್ ತಾಡಪಳ್ಳಿ, ಅನೀಲ್ ತಾಡಪಳ್ಳಿ ಜೈಬೀಮ್ ತಾಡಪಳ್ಳಿ ಶ್ರೀನಿವಾಸ ತಾಜಲಪೂರ ನಾಗೇಶ ಅಣವಾರ ರೇವಣಸಿದ್ದ ಮೃತ್ಯುಂಜಯ ಸ್ವಾಮಿ ಸಿದ್ದು ಸತೀಶ್ ನವೀನ್ ನಾಗೇಶ್ ಗುರು ಮಲ್ಲು ರಮೇಶ್ ಮಲ್ಲು ಸಿದ್ದು "ವಿಷ್ಣುವರ್ಧನ ಚಿಮ್ಮನಕಟ್ಟಿ" ಮೌನೇಶ್ ಬೇಡಕಪಳ್ಳಿ ಇವರು ಉಪಸ್ಥಿತರಿದ್ದರು.

## ಕೆ.ಕೆ.ಜಿ.ಬಿ.ವಿ ದಾಸನಾಳ ಶಾಲೆಯ ಮುಖ್ಯೋಪಾಧ್ಯಾಯರನ್ನು ಮುಂದುವರೆಸಲು ಒತ್ತಾಯ



ಗಂಗಾವತಿ: ತಾಲೂಕಿನ ದಾಸನಾಳ ಗ್ರಾಮದ ಕಸೂರಬಾ ಶಾಲೆಯ ಮುಖ್ಯ ಶಿಕ್ಷಕರು ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪುರಸ್ಕೃತರಾಗಿದ್ದು, ಶಾಲೆಯನ್ನು ಮತ್ತು ಗ್ರಾಮವನ್ನು ರಾಜ್ಯ ಮೆಟ್ಟದಲ್ಲಿ ಗುರುತಿಸಿದ್ದಾರೆ. ದಂಪತಿಗಳಿಬ್ಬರೂ ಹಲವು ವರ್ಷಗಳಿಂದ ಈ ಶಾಲೆಯಲ್ಲಿ ಹಗಲಿರುಳು ಶಾಲೆಯ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಆದರೆ ಕೆಲವು ಕಿಡಿಗೇಡಿಗಳು ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಅವರ ವರ್ಗಾವಣೆಗೆ ಪ್ರಯತ್ನಿಸಿದ್ದಾರೆ ಇದು ತೀವ್ರ ಖಂಡನೀಯ ಎಂದು ದಾಸನಾಳ ಗ್ರಾಮದ ಮುಖಂಡ ವಿರುಪಾಕ್ಷಿಗೌಡ ಖೇದ ವ್ಯಕ್ತಪಡಿಸಿದರು.

ಅವರು ಇಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸದರಿ ಮುಖ್ಯೋಪಾಧ್ಯಾಯರನ್ನೇ ಮುಂದುವರೆಸಲು ಗ್ರಾಮಸ್ಥರ ಪರವಾಗಿ, ದೇವದಾಸಿಯರ ಸಂಘದಿಂದ, ಅಂಬೇಡ್ಕರ್ ಯುವಸೇನೆಯಿಂದ ಮನವಿ ಪತ್ರ ಸಲ್ಲಿಸುವ ಸಂದರ್ಭದಲ್ಲಿ ಮಾತನಾಡುತ್ತಿದ್ದರು. ಈ ಶಾಲೆಯಲ್ಲಿ ಓದುತ್ತಿರುವ ಮಕ್ಕಳಲ್ಲಿ ಕೆಲವು ಅನಾಥ ಮಕ್ಕಳು, ಕೆಲವು ತಂದೆಯನ್ನು ಕಳೆದುಕೊಂಡಿರುವವರು, ಕೆಲವು ತಾಯಿಯನ್ನು ಕಳೆದುಕೊಂಡಿರುವವರು, ಹಲವಾರು ಮಕ್ಕಳು ತಂದೆ-ತಾಯಿಗಳು ಗೋವಾ, ಮಂಗಳೂರು, ಬೆಂಗಳೂರು, ಮಂಡ್ಯದ ಕಡೆ ದುಡಿಯಲು ಹೋಗಿದ್ದಾರೆ. ಅಂತಹ ಮಕ್ಕಳಿಗೆ ದಂಪತಿಗಳು ತಂದೆ ತಾಯಿಯ ಸ್ಥಾನ ನೀಡಿದ್ದಾರೆ. ಮಕ್ಕಳು ಶಿಕ್ಷಕರಲ್ಲಿ ತಂದೆ ತಾಯಿಯ ಪ್ರೀತಿ ಕಂಡಿದ್ದಾರೆ. ಅಲ್ಲದೇ ವರ್ಷದ ಉತ್ತಮ ಶಾಲೆ ಎಂದು ಹಲವಾರು ಸಂಘ-ಸಂಸ್ಥೆಗಳಿಂದ ಪ್ರಶಸ್ತಿಗಳು ಲಭಿಸಿವೆ. ಬೇರೆ ಜಿಲ್ಲೆಗಳಿಂದ ಅಧಿಕಾರಿಗಳಿಂದ, ಶಿಕ್ಷಕರಿಂದ ಶಾಲೆ ಪ್ರಶಂಸೆಗೆ ಪಾತ್ರವಾಗಿದೆ. ಶಾಲೆಯನ್ನು ಇಷ್ಟು ಉತ್ತುಂಗಕ್ಕೆ ಏರಿಸಿದ ಶಿಕ್ಷಕರ ವಿರುದ್ಧ ಸ್ಥಳೀಯರಲ್ಲದ ಕೆಲವು ಕಿಡಿಗೇಡಿಗಳು ಆರೋಪ ಮಾಡಿರುವುದು ಸತ್ಯಕ್ಕೆ ದೂರವಾಗಿದೆ ಎಂದು ತಿಳಿಸಿದರು.

ಇನ್ನೋರ್ವ ಗ್ರಾಮದ ಮುಖಂಡರಾದ ಶಿವಾನಂದಯ್ಯಸ್ವಾಮಿ ಹಿರೇಮಠ ಮಾತನಾಡಿ, ನಮ್ಮ ಗ್ರಾಮದ ಕೆ.ಕೆ.ಜಿ.ಬಿ.ವಿ ಶಾಲೆ ಹಾಗೂ ಶಿಕ್ಷಕರ ಮೇಲೆ ನಮಗೆ ಅಪಾರ ಗೌರವವಿದೆ. ಅವರು ಉತ್ತಮ ಕೆಲಸ ಮಾಡಿ ಶಾಲೆಗೆ ಒಳ್ಳೆಯ ಹೆಸರನ್ನು ತಂದಿದ್ದಾರೆ. ಇಂತಹ ಶಿಕ್ಷಕರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಶಾಲೆಯ ಘನತೆಗೆ ಚ್ಯುತಿ ಬರುವಂತೆ ಮಾಡಿದ ಕೆಲವು ಕಿಡಿಗೇಡಿಗಳು ಶಿಕ್ಷಕರ ಹೆಸರನ್ನು ಕೆಡಿಸುತ್ತಿರುವವರನ್ನು ನಾವು ಸುಮ್ಮನೆ ಬಿಡುವುದಿಲ್ಲ. ಈ ಶಾಲೆಯ ಮಕ್ಕಳು ಸಾಹಿತ್ಯ ಸಮ್ಮೇಳನ ಹಾಗೂ ಹಲವಾರು ಸಮ್ಮೇಳನ, ಉತ್ತವಗಳಲ್ಲಿ ವಸ್ತುಪ್ರದರ್ಶನ ಮಾಡಿ, ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಈ ಶಾಲೆಯ ಶಿಕ್ಷಕರು ಮಕ್ಕಳಿಗೆ ಕರಕುಶಲ ವಸ್ತುಗಳ ತಯಾರಿಕೆಯ ತರಬೇತಿಯನ್ನು ನೀಡಿ, ಕೆಲವು ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ಬದುಕಲು ಪ್ರೇರೇಪಿಸಿದ್ದಾರೆ. ಶಾಲೆಯ ಮಕ್ಕಳಿಗೆ ಕರಾಟೆ ತರಬೇತಿ, ಹಲವಾರು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆದು ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತರುವಲ್ಲಿ ಶಿಕ್ಷಕರ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಈ ರೀತಿ ಶಾಲೆಯನ್ನು ಉತ್ತುಂಗಕ್ಕೆ ತರುವಲ್ಲಿ ಶ್ರಮಿಸುತ್ತಿರುವ ಮುಖ್ಯೋಪಾಧ್ಯಾಯರನ್ನು ಇದೇ ಶಾಲೆಯಲ್ಲಿ ಸೇವೆ ಸಲ್ಲಿಸುವಂತೆ ಅವಕಾಶ ಮಾಡಿಕೊಡಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಿನಂತಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ವೀರನಗೌಡ, ಹುಸೇನಪ್ಪ ಕುಣಿಕೇರಿ, ವಿರುಪನಗೌಡ, ಬಿ. ವಿನೋದಕುಮಾರ, ಲಿಂಗಪ್ಪ ಬಂಡಿ, ಹನುಮಂತಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಲ್ಯಾಬ್ ಟೆಕ್ನಿಷಿಯನ್ ಮುಂಚೂಣಿ ಯೋಧರು
### ತಾಲ್ಲೂಕು ಆರೋಗ್ಯಾಧಿಕಾರಿ ಅಶೋಕ್



ಭದ್ರಾವತಿ: ದೇಶದೆಲ್ಲೆಡೆ ಕೊರೋನ ಮಹಾಮಾರಿ ಅಬ್ಬರಿಸಿದ ಸಂದರ್ಭದಲ್ಲಿ ತಮ್ಮ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸಿರುವ ಲ್ಯಾಬ್ ಟೆಕ್ನಿಷಿಯನ್ ಗಳೂ ಸಹ ಮುಂಚೂಣಿ ಯೋಧರು ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಅಶೋಕ್ ಹೇಳಿದರು.

ನಗರದ ಯುವ ಚೈತನ್ಯ ವೇದಿಕೆ ವತಿಯಿಂದ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ಕೊರೋನ ವಾರಿಯರ್ಸ್ ಲ್ಯಾಬ್ ಟೆಕ್ನಿಷಿಯನ್ ಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಸಸಿಗಳಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ, ವಾರಿಯರ್ಸ್ ಗಳನ್ನು ಸನ್ಮಾನಿಸಿ ಮಾತನಾಡಿದರು.ಸರ್ಕಾರಿ ಆಸ್ಪತ್ರೆಯ ಪ್ರಯೋಗಶಾಲೆಗಳಲ್ಲಿ ತಂತ್ರಜ್ಞರಿಗೆ ಸಹಾಯಕ ಸಿಬ್ಬಂದಿಗಳ ಕೊರತೆಯಿದ್ದು ಸರ್ಕಾರ ಸಿಬ್ಬಂದಿಗಳ ಕೊರತೆ ನೀಗಿಸಬೇಕೆಂದು ಮನವಿ ಮಾಡಿದರು.ನಾವು ದುಡಿಯುವುದು ಹೆಂಡತಿ, ಮಕ್ಕಳಿಗಾಗಿ. ನಮ್ಮ ಆರೋಗ್ಯ ರಕ್ಷಣೆ ನಮ್ಮದೇ ಹೊಣೆ. ಆದ್ದರಿಂದ ಲ್ಯಾಬ್ ಟೆಕ್ನಿಷಿಯನ್ ಗಳು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕೆಂದು ತಿಳಿಸಿದರು.



ಕೊರೋನ ಮಹಾಮಾರಿ ರೂಪಾಂತರ ಹೊಂದಿ ಕಾಲಿಡುತ್ತಿರುವ ಕಾರಣ ಆರೋಗ್ಯ ಸಿಬ್ಬಂದಿ ಸೇರಿದಂತೆ ಎಲ್ಲಾ ವರ್ಗದ ಜನರು ಮೈಮರೆಯದೆ ಸಾಮಾಜಿಕ ಅಂತರ ಕಾಪಾಡಿಕೊಂಡು, ಮಾಸ್ಕ್ ಧರಿಸಬೇಕು. ಲಸಿಕೆ ಹಾಕಿಸಿಕೊಳ್ಳದಿರುವವರು ನಿಗದಿತ ಕೇಂದ್ರಗಳಲ್ಲಿ ಕೂಡಲೇ ಲಸಿಕೆ ಹಾಕಿಸಿಕೊಳ್ಳಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಯುವ ಚೈತನ್ಯ ವೇದಿಕೆಯ ಪ್ರಮುಖರಾದ ಮಧು ಲ್ಯಾಬ್ ನ ಎಸ್.ಆರ್.ಜಗದೀಶ್ ರವರು ತಮ್ಮ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಾಮಾಜಿಕ ಕಳಕಳಿಯಿಂದ ನಗರದ ಯುವಕರ ಸಹಕಾರ, ಪ್ರಯತ್ನದಿಂದ ವೇದಿಕೆ ಹುಟ್ಟು ಹಾಕಿದ್ದೇವೆ. ಪ್ರಮುಖವಾಗಿ ವೃಷಬ್, ದೀಪು, ಹೇಮಂತ್ ಸೇರಿದಂತೆ ಅನೇಕ ಯುವಕರ ಮುಂದಾಳತ್ವದಲ್ಲಿ ಬಸ್ ನಿಲ್ದಾಣ ಒಳಗೊಂಡಂತೆ ನಗರದ ಹಲವೆಡೆ ಸ್ವಚ್ಛತಾ ಕಾರ್ಯ ಹಾಗೂ ಸಸಿ ನೆಡುವ ಕಾರ್ಯಕ್ರಮ ನಡೆಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ವೇದಿಕೆಯ ಉದ್ದೇಶ ಹಾಗೂ ಯೋಜನೆಗಳನ್ನು ವಿವರಿಸಿದರು.

ಕೋವಿಡ್ 19 ಆರಂಭದ ಹಂತದಿಂದ ಇಲ್ಲಿಯವರೆಗೂ ತಮ್ಮ ಪ್ರಾಣದ ಹಂಗು ತೊರೆದು ಕರ್ತವ್ಯ ನಿರ್ವಹಿಸುತ್ತಿರುವ ಲ್ಯಾಬ್ ಟೆಕ್ನಿಷಿಯನ್ ಗಳೇ ದೇಶದೊಳಗಿರುವ ನಿಜವಾದ ವೀರಯೋಧರು. ಇವರನ್ನು ಇದುವರೆಗೂ ಮಾಧ್ಯಮಗಳೂ ಸೇರಿದಂತೆ ಯಾರೂ ಗುರುತಿಸದೇ ಇರುವುದು ಅತ್ಯಂತ ಬೇಸರದ ವಿಚಾರ.

ಲ್ಯಾಬ್ ಟೆಕ್ನಿಷಿಯನ್ ಗಳು ಕೆಲಸದ ಒತ್ತಡದಲ್ಲಿ ತಮ್ಮ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಮಾಡದೇ, ವಾಕಿಂಗ್, ಪ್ರಾಣಾಯಾಮ ಹಾಗೂ ಯೋಗ ಅಭ್ಯಾಸಗಳ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಮಾರಂಭದ ವೇದಿಕೆಯಲ್ಲಿ ಪ್ರಯೋಗಶಾಲಾ ತಂತ್ರಜ್ಞರ ಸಂಘದ ಜಿಲ್ಲಾ ಉಪಾಧ್ಯಕ್ಷ ಖಾನ್, ಸರ್ಕಾರಿ ಆಸ್ಪತ್ರೆಯ ಜಿ.ಐ ಗಣಪತಿ, ಸೀನಿಯರ್ ಟೆಕ್ನಿಷಿಯನ್ ಮೋಹನ್, ಯುವ ಚೈತನ್ಯ ವೇದಿಕೆಯ ವೃಷಭ್ ಉಪಸ್ಥಿತರಿದ್ದರು. 35 ಮಂದಿ ಲ್ಯಾಬ್ ಟೆಕ್ನಿಷಿಯನ್ ಗಳನ್ನು ಅಭಿನಂದಿಸಲಾಯಿತು. ಶ್ರೀಮತಿ ನಿರ್ಮಲ ಪ್ರಾರ್ಥಿಸಿದರು. ಎಸ್.ಆರ್.ಜಗದೀಶ್ ಸ್ವಾಗತಿಸಿ, ಸರ್ಕಾರಿ ಆಸ್ಪತ್ರೆಯ ಲ್ಯಾಬ್ ಟೆಕ್ನಿಷಿಯನ್ ಶಮಾ ಬಾನು ವಂದಿಸಿದರು.

## ಈರುಳ್ಳಿ ಬೆಂಬಲ ಬೆಲೆ
### ರೈತ ಸಂಘದ ಗದಗ ಜಿಲ್ಲಾ ಸಮಿತಿ ಅಧ್ಯಕ್ಷ
## ಯಲ್ಲಪ್ಪ ಎಚ್ ಬಾಬರಿ ಆಗ್ರಹ

ಜಿಲ್ಲಾದ್ಯಂತ ಈ ಬಾರಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ಬೆಳೆದಿದ್ದು ಕಳೆದ ವರ್ಷ ಬಂಪರ್ ಬೆಲೆ ಸಿಕ್ಕ



ಖುಷಿಯಲ್ಲಿದ ರೈತರು ಈ ಬಾರಿ ಅಧಿಕ ಪ್ರಮಾಣದಲ್ಲಿ ಈರುಳ್ಳಿ ಬೆಳೆದು ಮಾರಾಟ ಮಾಡಲು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಬೆಲೆ ಕುಸಿತದಿಂದ ಗಾಯದ ಮೇಲೆ ಬರೆ ಹಾಕಿದಂತಾಗಿದೆ.

ಸದ್ಯ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲಗೆ 500 ರಿಂದ 2000 ರೂಪಾಯಿ ದರವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಗರಿಷ್ಠ 6000 ರೂಪಾಯಿ ದರ ಇತ್ತು ಆದರೆ ಈ ವರ್ಷ ಇಷ್ಟು ಬೆಲೆ ಸಿಗುತ್ತಿಲ್ಲ ಇದರಿಂದ ರೈತರು ಕಂಗಾಲಾಗಿ ಹೋಗಿದ್ದಾರೆ.

1 ಎಕರೆ ಜಮೀನಿನಲ್ಲಿ ಈರುಳ್ಳಿ ಬೆಳೆಯಬೇಕಾದರೆ 1 ಕೆ ಜಿ ಈರುಳ್ಳಿ ಬೀಜಕ್ಕೆ 1200 ಸುರಿದಿದ್ದಾರೆ ಹಾಗೂ ಗೊಬ್ಬರ, ಕ್ರಿಮಿನಾಶಕ, ಬೀತನೆಯ ಬಾಡಿಗೆ, ಕಳೆ ತೆಗೆಯುವುದು, ಕೂಲಿ ನಾಲಿ ಎಲ್ಲಾ ಸೇರಿ ಸುಮಾರು 15 ರಿಂದ 20 ಸಾವಿರ ರೂಪಾಯಿ ವೆಚ್ಚವಾಗಿದೆ.

ಇದರಿಂದ ರೈತರು ಖರ್ಚು ಮಾಡಿದ ಹಣ ಬರುತ್ತಿಲ್ಲ ಹೀಗಾಗಿ ಸರ್ಕಾರ ಬೇಗನೆ ಎಚ್ಚೆತ್ತು ಕನಿಷ್ಠ 8 ಸಾವಿರ ರೂಪಾಯಿ ಬೆಂಬಲ ಬೆಲೆಗೆ ಖರಿದಿಸಬೇಕು ಅಥವಾ ಬೇರೆ ದೇಶಗಳಿಗೆ ಈರುಳ್ಳಿ ಪಾಸ್ಪೋರ್ಟ್ ನೀಡಿ ರಫ್ತು ಮಾಡುವ ಮೂಲಕ ದೇಶದ ರೈತರನ್ನು ಆರ್ಥಿಕವಾಗಿ ಹಿಂದುಳಿಯದಂತೆ ನೋಡಿಕೊಳ್ಳಬೇಕು. ಈ ವರ್ಷ ಅಷ್ಟೇನೂ ನಿರೀಕ್ಷಿತ ಮಟ್ಟದಲ್ಲಿ ಬೆಳೆ ಅಧಿಕವಾಗಿಲ್ಲ

ಆದರೆ ಮಾರುಕಟ್ಟೆಯಲ್ಲಿ ನೆರೆಯ ರಾಜ್ಯಗಳ ಈರುಳ್ಳಿ ಮಾರುಕಟ್ಟೆಗೆ ಬಂದಿದ್ದು ನಮ್ಮ ರಾಜ್ಯದ ರೈತ ಈರುಳ್ಳಿ ಕೇಳುವವರಿಲ್ಲದಂತಾಗಿದೆ. ಅದಕ್ಕೆ ಸರ್ಕಾರ ಬೇಗನೆ ಎಚ್ಚೆತ್ತು ಬೆಂಬಲ ಬೆಲೆ ಯೋಜನೆಯಡಿ ಈರುಳ್ಳಿಯನ್ನು ಖರೀದಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಿ ಆರ್ ನಾರಾಯಣರೆಡ್ಡಿ ಬಣದ ಗದಗ ಜಿಲ್ಲಾ ರೈತ ಸಂಘದ ಜಿಲ್ಲಾ ಅಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾಗೋಷ್ಠಿಗೆ ಹೇಳಿಕೆ ನೀಡಿರುವ ಅವರು ಮುಂದಿನ ದಿನಗಳಲ್ಲಿ ಜಿಲ್ಲಾದ್ಯಂತ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷರಾದ ಹುಚ್ಚೀರಪ್ಪ ಜೋಗಿನ ಬಾಳಪ್ಪ ಗಂಗರಾತ್ರಿ ಗಿರೀಶ್ ಗುಡ್ಲಾನೂರ ರಾಮಣ್ಣ ಖಂಡ್ರಿ ಶರಣಪ್ಪ ಜೋಗಿನ ಕೊಪ್ಪಳ ರೈತ ಸಂಘದ ಜಿಲ್ಲಾ ಅಧ್ಯಕ್ಷ ಅಂದಪ್ಪ ಕೋಳುರ ಹಾಗೂ ಅನೇಕ ರೈತ ಮುಖಂಡರು ಆಗ್ರಹಿಸಿದ್ದಾರೆ.

## ಕಸದಿಂದ ರೋಗಗಳು ಉಗಮ

**ಡಾ.ಮಹಿಬೂಬ್ ಮದ್ಲಾಪುರ**

ಮಾನ್ವಿ: ಕೆಲಸ ಮಾಡು, ಕೆಲಸ ಮಾಡು, ಮತ್ತೆ ಕಲಸ



ಮಾಡು ಎಂಬ ನಿಲುವಿನಡೆ ಕಸದಿಂದ ಸಾಂಕ್ರಾಮಿಕ ರೋಗಗಳು ಹುಟ್ಟಲು ಕಾರಣವಾಗುತ್ತವೆ. ಯುವಕರು ಸಮಯವನ್ನು ವ್ಯರ್ಥ ಮಾಡದೇ ಸಾಮಾಜಿ ಸೇವೆಗಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು, ನಾವುಗಳು ಯಾರಿಗೂ ವಿರುದ್ಧ ಇಲ್ಲ ನಮ್ಮ ತಂಡದ ಎಲ್ಲಾರು ಪ್ಲಾಸ್ಟಿಕ್ ವಿರುದ್ಧ ಇದ್ದೇವೆ. ಪ್ಲಾಸ್ಟಿಕ್ ಯಿಂದ ಚರಂಡಿ ತುಂಬುತ್ತವೆ, ಚರಂಡಿಯಿಂದ ಸೊಳ್ಳೆಗಳು ಹುಟ್ಟಿ ಸಾಂಕ್ರಾಮಿಕ ರೋಗಕ್ಕೆ ಹೆಡೆಮಾಡಿಕೊಡುತ್ತವೆ ಎಂದು ವಂದೇ ಮಾತರಂ ಯುವ ಸಂಘದ ಅಧ್ಯಕ್ಷ ಡಾ. ಮಹಿಬೂಬ್ ಮದ್ಲಾಪುರ ಹೇಳಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ವಂದೇ ಮಾತರಂ ಯುವ ಸಂಘ (ರಿ) ಮದ್ಲಾಪುರ, ಬಡವರ ಬಂಧುಗಳ ಯುವ ಸಂಘ ಮಾನವಿ ಮತ್ತು ವಾಲ್ಮೀಕಿ ಸಮುದಾಯ ತಂಡ ಸಹಯೋಗದಲ್ಲಿ "ಸ್ವಚ್ಛ ಮದ್ಲಾಪುರ" ಎಂಬ ಶ್ರಮದಾನದ ಮೊದಲವಾರ ಶಂಕರಲಿಂಗ ಗುಡಿ, ಪೀರಲದೇವರ ಮಸೀದಿ, ಮಹೆಬೂಬ್ ಸುಬಾನಿ ಕಟ್ಟೆ, ಶಾಲಾವರಣ, ವಾಲ್ಮೀಕಿ ವೃತ್ತ, ಅಗಸೆ ಕಟ್ಟೆ, ಸಾರ್ವಜನಿಕ ರಸ್ತೆಗಳಲ್ಲಿ ಸ್ವಚ್ಛತೆ ಮಾಡಲಾಯಿತು.

ಗ್ರಾಮ ಪಂಚಾಯತ್ ಸದಸ್ಯ ಬಸವರಾಜ್ ದೊಡ್ಮನೆ, ಪಂಚಾಯತ ಅಭಿವೃದ್ಧಿ ಅಧಿಕಾರಿ ಮಹಾಂತೇಶ್, ವೆಂಕಟೇಶ್, ಭರತೇಶ್, ಅಶೋಕ, ರಮೇಶ್, ಮಂಜುನಾಥ, ರವಿಭೋವಿಕರ್, ವೀರೇಂದ್ರ ಪಾಟೀಲ್, ಶಶಿಕುಮಾರ್, ಲತೀಪ್ ಕುರೇಶ್, ಶಿವುಕುಮಾರ್, ಭಿಮೇಶ್, ಮುತ್ತಣ್ಣ ಭಜಂತ್ರಿ, ಬಡವರ ಬಂಧುಗಳ ಸಂಘದ ಅಧ್ಯಕ್ಷ ದೇವಣ್ಣ ಭಜಂತ್ರಿ, ಸಂಗಮೇಶ ಎನ್ ಟಿ ಆರ್, ಅಮರೇಶ್ ಆಟೋ, ರಫೀ ರಂಗದಾಳ್, ಜಹಾಂಗೀರ್ ಪಾಷ, ಸಿದ್ದು, ಯಂಕೋಬ ಶ್ರೀನಿವಾಸ್, ಸಮುದ್ರ, ವಿನೋದ್, ರಮೇಶ್, ಸಾಗರ್ ರೈಡರ್ ಸೇರಿ ಮಾಡಿದರು.

ಕರುನಾಡ ಕಂದ
ಸಂಪುಟ-1 । ಸಂಚಿಕೆ-2
ದಿನಾಂಕ: 15-11-2021 । ಪುಟಗಳು: 16

# ಒಂದಾನೊಂದು ಕಾಲದಲ್ಲಿ ...

ಒಂದಾನೊಂದು ಕಾಲದಲ್ಲಿ ದೊಡ್ಡಕುಟುಂಬವಿತು ಅದರಲ್ಲಿ ಒಂಬತ್ತು ಜನ ಅಣ್ಣ ತಮ್ಮಂದಿರು ಮೊದಲು ಐವತ್ತು ಕಂಬಗಳ, ಹತ್ತು ಕೆಟ್ಟೆ ,ಎಂಟು ಅಂಕಣದ ಮನೆ ,ಇದರಲ್ಲಿ ಸುಮಾರು ಅಣ್ಣ ,ತಮ್ಮಂದಿರು, ಹೆಂಡತಿ, ಮಕ್ಕಳು ,ಮೊಮ್ಮಕ್ಕಳು , ತಾತ ,ಅಜ್ಜಿಯಂದಿರು , ಸೇರಿ ಆ ಮನೆಯಲ್ಲಿ ವಾಸವಾಗಿದ್ದರು.


ಇದರ ಜೊತೆಗೆ ಒಂದೇ ದೇಹ ಹಲವಾರು ಮನಸ್ಸುಗಳು ಅಲ್ಲದೆ ಹಬ್ಬ ಹರಿದಿನಗಳ ,ಮದುವೆ ಮುಂಜಿಯ , ದೇವಸ್ಥಾನ ಮತ್ತು ಪೂಜೆ ,ಹೊಲ ಗದ್ದೆಗಳ ಉಳುವಿಕೆ ,ಮತ್ತೆ ಎಲ್ಲರೂ ಒಟ್ಟಾಗುವ ಕೋಡಿ ಕೆಲಸ ಮಾಡುವರು , ಒಂದೇ ಸಮಯದಲ್ಲಿ ಅಡುಗೆಯನ್ನು ಮಾಡಲಿ ಒಬ್ಬರು ಕೋಡಿ ಇನ್ನೊಂದು ಕೆಲಸವನ್ನು ಹಂಚಿಕೆ ಮಾಡಿಕೊಂಡು ಸಂತೋಷದಿಂದ ಇರುವವರು ಒಬ್ಬರು ರೊಟ್ಟಿ ಬಡಿಯುವುದು , ಮತ್ತೊಬ್ಬರು ರೊಟ್ಟಿ ಸುಡುವುದು , ಕಾಯಿ ಪಲ್ಲೇ ಮಾಡುವುದು ,ಮತ್ತೊಬ್ಬರು ಊಟಕ್ಕೆ ಬಡಿಸುವುದು,ಮಕ್ಕಳಿಗೆ , ಮತ್ತೊಬ್ಬರು ಶಾಲೆಗೆ ಕಳಿಸುವುದು ,

ಅವರ ವರದಿಯಾದ ಕೆಲಸಗಳನ್ನು ಮಾಡಿಕೊಂಡು ಇಡೀ ಊರಿಗೆ ಅಲ್ಲದೆ ರಾಜ್ಯಕ್ಕೆ ಹೆಸರುವಾಸಿಯಾಗಿದ ಶಿಷ್ಟಾಚಾರದ , ಸಂಪ್ರದಾಯದ , ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಬೊಮ್ಮನಗೌಡರ ಕುಟುಂಬ ಎಂದೇಹೆಸರು ವಾಸಿಯಾಗಿದೆ .ಯಾರಾದರೂ ಈ ಕುಟುಂಬಕ್ಕೆ ಒಂದೊಮ್ಮೆ ಬಂದರೆ ಪರಿಚಯಿಸಲು ಬೇಕಾದರೂ ಬಹಳಷ್ಟು ಸಮಯ ತೆಗೆದುಕೊಳ್ಳುವ ಸನ್ನಿವೇಶ ಮತ್ತೆ ಸ್ನೇಹಿತರಾಗಿ ಅವರ ಮಕ್ಕಳು ಆಗಲಿ ಒಂದೊಮ್ಮೆ ಆ ಮನೆಯಲ್ಲೆ ಓಡಾಡಿದರು ಯಾರ ಮಕ್ಕಳು ಯಾರಿಗೂ ತಿಳಿಯುವುದಿಲ್ಲ,

ಒಂದು ಕಡೆ ಈ ಮನೆಗೆ ಸನ್ನಿವೇಶವನ್ನು ನೋಡಿದಾಗ ಯಾರೂ ಹೆಣ್ಣು ಕೊಡುವುದಾಗಿ ,ಹೆಣ್ಣು ತರುವುದು ಆಗಲಿ ಬೊಮ್ಮನಗೌಡರ ಸಮಯದಲ್ಲಿ ಯಾರೂ ಯೋಚಿಸುತ್ತಿಲ್ಲ ,ಈಗ ಮಕ್ಕಳು ಮತ್ತು ಮೊಮ್ಮಕ್ಕಳ ಸಂದರ್ಭದಲ್ಲಿ ಕಾಲ ಬದಲಾದಂತೆ ,ಸನ್ನಿವೇಶಗಳು ಬದಲಾವಣೆ ಆದ ಮೇಲೆ ಇಂತಹ ದೊಡ್ಡ ಕುಟುಂಬಕ್ಕೆ ಹೆಣ್ಣು ಮಕ್ಕಳನ್ನು ಕೊಡುವುದು ,ಹೆಣ್ಣು ಮಕ್ಕಳನ್ನು ತರುವುದು ಬಹಳ ಕಷ್ಟಕರ ವಾಗಿದೆ ಅವತ್ತಿನ ದಿನಮಾನಗಳ ಸಮಯ, ಸಂದರ್ಭ ,ಸನ್ನಿವೇಶ, ಕುತೂಹಲ , ಆ ಕಾಲದಲ್ಲಿ ಜನಸಂಖ್ಯೆ ಬಹಳಷ್ಟು ಕಡಿಮೆ ಜೊತೆಗೆ ಕೂಡು ಕುಟುಂಬಗಳು ಜೀವನದಲ್ಲಿ ಒಗ್ಗಟ್ಟಾಗಿ ಇರುವುದು ಹೆಚ್ಚಾಗಿ ಕಂಡುಬರುತಿತ್ತು . ಏಕೆಂದರೆ ಸಮಾಜದಲ್ಲಿ ಇರುವವರು ಎಲ್ಲರೂ ನಮ್ಮವರೇ ಮೊದಲು, ಹಾಗೆಯೇ ನಮ್ಮ ಹಳ್ಳಿಗಳಲ್ಲಿ ಇರುವ ಅಕ್ಕಪಕ್ಕದಲ್ಲಿರುವ ಜನರು ನಮ್ಮವರೇ ಎಂದು ಭಾಸುತ್ತಿದ್ದವು.

ಮನೆಯಲ್ಲಿ ಎಲ್ಲರೂ ಒಟ್ಟುಗೂಡಿ ಸಹಬಾಳ್ವೆ ಇರುತ್ತಿದ್ದವು ಈಗಿನ ಪರಿಸ್ಥಿತಿಯಲ್ಲಿ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ,ಅದರಲ್ಲಿ ಈಗಿನ ಕುಟುಂಬದಲ್ಲಿ ಹೆಚ್ಚು ತಂದೆ ,ತಾಯಿ , ಮಗ ಅಥವಾ ಮಗಳು ,ಇನ್ನು ನೋಡಬೇಕಾದರೆ ಎಲ್ಲೋ ಅಲ್ಲಲ್ಲಿ ಕುಟುಂಬಗಳು ಅದರ ಜೊತೆಗೆ ತಾತ ಮತ್ತು ಅಜ್ಜಿ ಕಂಡು ಬರುವುದು ಕಾಣುತ್ತೆವೆ.ಈ ಸಮಯದಲ್ಲಿ ಇಂತಹ ಕುಟುಂಬಗಳೆ ಹೆಚ್ಚು ಒಂದು ಕಡೆ ಈ ರೀತಿಯಾಗಿ ಕಂಡು ಬಂದರೆ ಇನ್ನೊಂದು ರೀತಿ ಹೊಸದಾಗಿ ಬಂದ ಅಂತಹ ಮನೆಗೆ ಸೊಸೆ ಮೊದ ಮೊದಲು ಮನೆಯಲ್ಲಿ ಎಲ್ಲರ ಜೊತೆಗೂಡಿ ಹೊಂದಿಕೊಂಡು ಹಳೆಯ ಸಂಪ್ರದಾಯಸ್ಥರ ಮನೆಯಲ್ಲಿ ಅಕ್ಕ ತಂಗಿಯರು ಎಂದು ಕೋಡಿ ಬಾಳುತ್ತಿದರು .

ಅದರಲ್ಲಿ ಈಗಿನ ಸೊಸೆಯಂದಿರು ಹೊಸದಾಗಿ ಬಂದ ತಕ್ಷಣ ಸ್ವಲ್ಪ ದಿನಗಳು ಹೊಟ್ಟೆ ಒಟ್ಟಿಗೆ ಇದ್ದು ಎಲ್ಲವನ್ನೂ ಅರ್ಥ ಮಾಡಿಕೋ0ಡು ನಂತರದಲ್ಲಿ ಅಂತಹ ಕುಟುಂಬಗಳು ಹೊಡೆದು ಹೋಗ್ಲಿಕ್ಕೆ ಇವರೇ ಕಾರಣ ಕರ್ತರು ಆಗುತ್ತಾರೆ .ಒಂದು ಉದಾಹರಣೆಗೆ ಹೇಳಬೇಕಾದರೆ "ಮನೆಯೊಂದು ಮೂರು ಬಾಗಿಲು " ಬದಲು ಅಂತಹ ಮನೆಗೆ ಹನುಮಕ್ಕ ಇನ್ನು ಸೊಸೆಯಾಗಿ ಬಂದರೆ "ಮನೆಯೊಂದು ಆರು ಬಾಗಿಲು ಆಗಬಹುದು". ಅಷ್ಟೇ ಅಲ್ಲದೆ ತಲೆ ತಲಾ ಅಂತರದಿಂದ ಬಂದ ಮನೆಯಲ್ಲಿರುವ ವಸ್ತುಗಳನ್ನು,



ಆಸ್ತಿಯನ್ನು, ಎಲ್ಲವೂ ಹೊಡೆಯುತ್ತಾರೆ.

ಮತ್ತೆ ಇವರಿಗೆ ಏನೂ ತಿಳಿಯುವುದಿಲ್ಲ ಇವೆಲ್ಲದರ ಜೊತೆಗೆ ಮನಸು ಮನಸ್ಸುಗಳ ಮಧ್ಯೆಯೂ ಸಿಟ್ಟು, ವಿರಹ, ಕಲಹಗಳು, ವೈರಿಗಳೆ, ಹಾಗೆಯೇ ಮಾಡಿಬಿಡುತ್ತೆರೆ. ಊರಿನ ಜನರೆಲ್ಲರೂ ಒಂದು ಕಾಲದಲ್ಲಿ ಬೊಮ್ಮನಗೌಡರ ಕುಟುಂಬವನ್ನು ನೋಡಿ ಕಲಿಯಿರಿ ಎಂದು ಇತರರು ತಿಳಿಸುತ್ತಿದರು ಎಲ್ಲೇ ಹೋಗಿದ್ದರು ಇವರ ಕುಟುಂಬವೆ ಮಾದರಿಯಾಗಿದೆ ಅಂದುಕೊಳ್ಳುತ್ತಿದ್ದರು

ಜನರು ಈಗ ಈ ಪರಿಸ್ಥಿತಿಯನ್ನು ಕಂಡ ಇಂತಹ ಕುಟುಂಬದಲ್ಲಿ ಇಂತಹ ಹೆಣ್ಣು ಮಗಳು ಸೊಸೆಯಾಗಿ ಬರಬಾರದು.ಇಂದಿನ ಕಾಲದಲ್ಲಿ ಸೊಸೆಯನ್ನು ಮಗಳಂತೆ ಕಾಣುವುದು ನೋಡುತ್ತಿದೆವು, ಆದರೆ ಈ ಸಮಯದಲ್ಲಿ ಕೂಡ ಸೊಸೆಯನ್ನು ಗಳನ್ನಾಗಿ ಕಾಣುವುದು ನೋಡುತ್ತೇವೆ ಆದರೆ ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳು ಏನೋ ತಿಳಿಯೆದು ಅವರು ಕೂಡ ನನ್ನ ತಂದೆ ತಾಯಿಯು, ಮನೆಯಲ್ಲಿರುವರು ಅವರು ಕೂಡ ಅಣ್ಣ ತಮ್ಮಂದಿರು ಹಾಗೆಯೇ ಎಂದು ತಿಳಿದುಕೊಳ್ಳಲು ಅರ್ಥೈಸಿಕೊಳ್ಳ ಬೇಕು, ಅದು ಬಿಟ್ಟು ಆ ಕುಟುಂಬದಿಂದ ಬೇರೆಯಾಗುವುದುನು ಬಿಡಬೇಕು.

"ನಾರಿ ಮುನಿದರೆ ಮಾರಿ" ಎಂದ ಹಾಗೆಯೇ ನಾರಿ ಮುನಿದರೆ ಆ ಮನೆಗೆ ಕಟ್ಟಿಟ್ಟ ಬುತ್ತಿ, ನಾರಿ ಮುನಿಯದಿದ್ದರೆ ಆ ಮನೆಗೆ ಯಾವ ಗಂಡಾಂತರವೂ ಇರುವುದಿಲ್ಲ ಇಲ್ಲಿ ಎಂದು ಅರ್ಥೈಸಿಕೊಳ್ಳಲು ನಿಜಾಂಶ. ಒಡೆದ ಮನೆ ಮನೆಯನ್ನು , ಒಡೆದ ಮನಸ್ಸನ್ನು, ಒಡೆದ ಕುಟುಂಬವನ್ನು, ನಾರಿ ಮನಸ್ಸು ಮಾಡಿದರೆ ಎಷ್ಟೇ ಕಷ್ಟದರು ಒಗ್ಗೂಡಿಸ ಬಲ್ಲಾಳು .ಅದಕ್ಕೆ ಹೆಣ್ಣು ಮಕ್ಕಳನ್ನು ಭೂತಾಯಿ, ದೇವತೆ, ಗಂಗೆ, ಲಕ್ಷ್ಮಿ, ಪಾರ್ವತಿ, ಸರಸ್ವತಿ, ಅನ್ನಪೂರ್ಣೇಶ್ವರಿ, ಕರೆಯುವರು.

ಅದಕ್ಕೆ ಇತಿಹಾಸದಲ್ಲಿ ಹೆಣ್ಣನ್ನು ಕೆಣಕಿದವರು ಸೀತೆಯನ್ನು ಅಪಹರಿಸಿದ ರಾವಣನನ್ನು ಆ ವಿಧಿ ಮಾಯೆ ಬಿಟ್ಟಿಲ್ಲ .ಮತ್ತೆ ಪಾಂಡವರು ಮತ್ತು ಕೌರವರು ಜೂಜಾಟದಲ್ಲಿ ಪಣಕ್ಕಿಟ್ಟ ದ್ರೌಪದಿಯ ವಸ್ತ್ರಭಾರಣ ಮಾಡಿದ್ದ ಕೌರವರನ್ನು ಅಂತಹ ವಿಧಿ ಮಾಯವು ಬಿಟ್ಟಿಲ್ಲ .ಕ್ಷಮಾ ದೇವತೆ ಅಂತಹ ಕರೆಯಲ್ಪಡುವ ಸ್ತ್ರೀ, ನಾರಿ, ಈಗ ಮಾಡಬಹುದಾದ ಒಂದು ಮಹತ್ವದ ಕೆಲಸ

ಹಿಂದಿನ ಕಾಲದಲ್ಲಿ ಬೊಮ್ಮನ ಗೌಡರ ಕುಟುಂಬ ಹೇಗೆ ಅದೇ ರೀತಿ ಹಿಂದಿನ ಹೆಣ್ಣು ಮಕ್ಕಳು ಮೊದಲು "ಮನೆಯೊಂದು ಮೂರು ಬಾಗಿಲನ್ನು " ಬಿಟ್ಟು ತುಂಬಿದ ಕುಟುಂಬ ಹಾಗೆಯೇ ಎಲ್ಲರೂ ಸೇರಿ ಒಟ್ಟುಗೂಡಿಸಿ ಸುಖ ,ಸಂತೋಷದಿಂದ , ಬೇಳಾಬೇಕು ಆಗ ಈದಿನ ಯುಗ ಮುಂದೆ ಬರುವ ಪೀಳಿಗೆಗೆ ಮಾದರಿಯಾಗುತ್ತದೆ,

ಇಷ್ಟೇ ಅಲ್ಲದೆ ಮುಂದೆ ಬರುವ ಹೆಣ್ಣು ಮಕ್ಕಳಿಗೆ ದೊಡ್ಡ ಕುಟುಂಬ ಸಂತೋಷದ , ಅದರ ಮಹತ್ವ , ತಿಳಿಯಬೇಕು ,ಆಗ ಮಾತ್ರ ಯಾರು ಕೂಡ ಮತ್ತೊಮ್ಮೆ ಮಗದ ಮಗದೊಮ್ಮೆ ದೊಡ್ಡ ಕುಟುಂಬಗಳಿಗೆ ಹಾನಿ ಉಂಟುಮಾಡುವುದಿಲ್ಲ ಸುರಕ್ಷಿತವಾಗಿ ಆ ಕುಟುಂಬವನ್ನು ಕಾಯುವರು.

**– ಕೆ ಮಹೇಂದ್ರ ಶಿಕ್ಷಕರು**

# ಶೌಚಾಲಯ ಕೊಡ್ರಿ! ಇಲ್ಲಾ ಕುರ್ಚಿ ಖಾಲಿ ಮಾಡ್ರಿ! ನಾಚಿಕೆ ಆಗಲ್ವಾ?



ಯಡ್ರಾಮಿ: ತಾಲೂಕಿನ ಅರಳಗುಂಡಗಿ ಗ್ರಾಮದ ಮಹಿಳೆಯರು ಶೌಚಾಲಯ ಸಮಸ್ಯೆಯನ್ನು ಪರಿಹರಿಸಿಕೊಡುವಂತೆ ಆಗ್ರಹಿಸಿ ಗ್ರಾಮ ಪಂಚಾಯತಿಯ ಮುಂದೆ ತಮಟೆ ಬಾರಿಸಿ ಪ್ರತಿಭಟಿಸಿದರು. ನಮ್ಮ ದೇಶಕ್ಕೆ ಸ್ವತಂತ್ರ ಬಂದು ಇಷ್ಟು ವರ್ಷಗಳಾದರೂ ಸಹಿತ ಇನ್ನೂ ನಮ್ಮ ಊರುಗಳಲ್ಲಿ ಸರಿಯಾದ ಶೌಚಾಲಯ ನಿರ್ಮಾಣವಾಗಿಲ್ಲ. ಈ ಸರಕಾರ ಇದ್ದೂ ಇಲ್ಲದಂತಾಗಿದೆ,ನಮಗೆ ಶೌಚಾಲಯ ವ್ಯವಸ್ಥೆ ಮಾಡಿ ಇಲ್ಲವಾದರೆ ನಿಮ್ಮ ಕುರ್ಚಿ ಖಾಲಿಮಾಡಿ! ಎಂದು ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿ ಗ್ರಾಮ ಪಂಚಾಯತಿಯ ಆಡಳಿತ ವೈಖರಿಗೆ ಚೆ...ಛೀ..ಥೂಎಂದು ಉಗಿದು ಹಿಡಿಶಾಪ ಹಾಕಿದರು.

ಯಡ್ರಾಮಿ ಮುಖ್ಯರಸ್ತೆಯ ಶೌಚಾಲಯ ಕೇಂದ್ರಷ

ಗ್ರಾಮದ ಶೌಚಕ್ಕಾಗಿ ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಮರ್ಯಾದಸ್ಥ ಹೆಣ್ಣುಮಕ್ಕಳು ಹಾಗೂ ಪ್ರಾಪ್ತ ವಯಸ್ಸಿನ ಕಿಶೋರಿಯರಿಗೆ ಇದು ನುಂಗಲಾರದ ತುತ್ತಾಗಿ ಪರಿಣಮಿಸಿದ್ದು, ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಮೌನವಹಿಸಿದ ಕಾರ್ಯವೈಖರಿಗೆ ಮಹಿಳೆಯರು ಗ್ರಾಮಸ್ಥರು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮದಿಂದ ಯಡ್ರಾಮಿಗೆ ಹೋಗುವ ಮುಖ್ಯ ರಸ್ತೆಯೇ ಊರಿನ ಎಲ್ಲಾ ಹೆಣ್ಣು ಮಕ್ಕಳ ಶೌಚಾಲಯದ ಕೇಂದ್ರ ಸ್ಥಳವಾಗಿತ್ತು. ಆ ರಸ್ತೆಯಲ್ಲಿ ಬಹಳಷ್ಟು ಜನಗಳ ಮತ್ತು ವಾಹನಗಳ ಓಡಾಟವಿರುವುದರಿಂದ ಊರಿನ ಎಲ್ಲಾ ಸಮುದಾಯದ ಮಹಿಳೆಯರು ಅವಮಾನ, ಮುಜುಗರ ಅನುಭವಿಸುತ್ತಿದ್ದಾರೆ.

ಕಿವುಡು ಮತ್ತು ಮೂಕರಾದ ವ್ಯವಸ್ಥೆಗೆ ತಮಟೆ ಬಡೆದು ಎಚ್ಚರಿಕೆ!!

ನಿಜಕ್ಕೂ ಇದು ಅಮಾನವೀಯ ಘಟನೆಯಾಗಿದೆ. ಸರಿಯಾದ ಶೌಚಾಲಯವನ್ನು ನಿರ್ಮಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಸಮಸ್ಯೆಯನ್ನು ಆಲಿಸದೆ ಕಿವುಡರಾಗಿರುವ ಗ್ರಾಮ ಪಂಚಾಯತಿಯ ಆಡಳಿತ ವರ್ಗಕ್ಕೆ ಹಾಗೂ ಸಮಸ್ಯೆಯನ್ನು ಹೇಳಲು ಅಸಹಾಯಕರಾಗಿರುವ ಚುನಾಯಿತ ಪ್ರತಿನಿಧಿಗಳಿಗೆ ತಮಟೆ ಬಡಿಯುವ ಮೂಲಕ ಎಚ್ಚರಿಸಿ ಪ್ರತಿಭಟನೆಯನ್ನು ಕೈಗೊಂಡರು,

ಮನೆಗೆ ಪತ್ರ ಸಲ್ಲಿಕೆ:–

ಪಂಚಾಯತಿಯ ಅಧ್ಯಕ್ಷರು, ಕಾರ್ಯದರ್ಶಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದರು. ನಿಮ್ಮಲ್ಲಿ ಮಾನವೀಯತೆ ಎನ್ನುವ ಅಂಶವು ಕಿಂಚಿತ್ತು ಇದ್ದರೆ ಕೂಡಲೇ ಸಮಸ್ಯೆಗೆ ಸ್ಪಂದಿಸಿ ಇಲ್ಲವೇ ಕುರ್ಚಿ ಖಾಲಿ ಮಾಡಿ ಎಂದು ಘೋಷಣೆ ಕೂಗಿದರು.

ಭಾರತ ಕಮ್ಯುನಿಸ್ಟ್ ಪಕ್ಷದಿಂದ ಬೆಂಬಲ:–

ಮಹಿಳೆಯರ ಪ್ರತಿಭಟನೆಗೆ ಬೆಂಬಲ ಸೂಚಿಸಿದ ಭಾರತ ಕಮ್ಯುನಿಸ್ಟ್ ಪಕ್ಷ ಯಡ್ರಾಮಿ ಕಾರ್ಯದರ್ಶಿ ಭೀಮರಾಯ ಮುದಬಸಪ್ಪಗೋಳ ಹಾಗೂ ಪಕ್ಷದ ಪ್ರಮುಖರಾದ ಸಾಹೇಬಗೌಡ ಮುರಡಿ, ಬೀರಪ್ಪ ಪೂಜಾರಿ, ಶರಣು ಬಿಲ್ಲಾ, ದೇವೇಂದ್ರ ಕಡಿ, ರಾಮು ಕುಸ್ತಿ, ಮೇರಮ್ಮ ವರವಿ, ಯಲ್ಲಮ್ಮ ಗೌಂಡಿ, ನೀಲಮ್ಮ ತಳಗೇರಿ, ರುದ್ರಮ್ಮ ಅಲ್ಲಾಪುರ, ಕೊಂತೆಮ್ಮ ಎಂಟಮಾನ ಉಪಸ್ಥಿತರಿದ್ದರು.

**–ಜಟ್ಟೆಪ್ಪ ಎಸ್ ಪೂಜಾರಿ**

# ಕುಮ್ಮಟದುರ್ಗದಲ್ಲಿ 500 ಜನರಿಂದ ಕರಸೇವೆ



ಗಂಗಾವತಿ: ಕೊಪ್ಪಳ ತಾಲೂಕಿನ ಇತಿಹಾಸ ಪ್ರಸಿದ್ಧ ಕುಮ್ಮಟದುರ್ಗದ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಬರುವ ಡಿಸೆಂಬರ್ ತಿಂಗಳಲ್ಲಿ ಐದುನೂರು ಜನರಿಂದ ಕರಸೇವೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಓಂ-ಮಿನಿಸ್ಟ್ರಿಯ ರಾಜ್ಯ ಸಂಚಾಲಕರಾದ ಶ್ರವಣಕುಮಾರ ರಾಯ್ಕರ್ ತಿಳಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಮೂಲ ಪುರುಷರಾದ ಕುಮಾರರಾಮನ ಬಗ್ಗೆ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಆಡಳಿತ ದಿವ್ಯ ನಿರ್ಲಕ್ಷ್ಯ ವಹಿಸಿದೆ ಎಂದು ಅವರು ಆರೋಪಿಸಿದ್ದಾರೆ. ಕಾರಣ ಬರುವ ಡಿಸೆಂಬರ್ ತಿಂಗಳಲ್ಲಿ ಕುಮ್ಮಟದುರ್ಗದ ದುರ್ಗಮ ರಣನೀತಿಯ ಭಾಗವಾಗಿರುವ ಕುದುರೆ ಕಲ್ಲು ಪ್ರದೇಶವನ್ನು ಅತಿಕ್ರಮಣ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯಾದ್ಯಂತದಿಂದ ಬರುವ ಕರಸೇವಕರಿಂದ ಅಲ್ಲಿ ಕರಸೇವೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಈ ಕಾರ್ಯಕ್ರಮವು ಶ್ರೀರಾಮಸೇನೆಯ ಪ್ರಮುಖರಾದ ಶ್ರೀಯುತ ಪ್ರಮೋದ ಮುತಾಲಿಕ್‌ರವರ ನೇತೃತ್ವದಲ್ಲಿ ನಡೆಯಲಿದ್ದು, ಮುಂದಿನವಾರ ಕೊಪ್ಪಳ ತಾಲೂಕಿನ ಜಬ್ಬಲಗುಡ್ಡದಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಲು ನಿಶ್ಚಯಿಸಲಾಗಿದೆ.

# ಕಲ್ಲುಗಣಿಗಾರಿಕೆ: ಭಯದ ನಡುವೆ ಜನರ ಬದುಕು

ಹೊನ್ನಾಳಿ: ಹೊನ್ನಾಳಿ ತಾಲೂಕು ದಾವಣಗೆರೆ ಜಿಲ್ಲೆ ಸಾಸ್ವೆಹಳ್ಳಿ 1 ಹಟ್ಟಿಹಾಳ ಗಡಿಭಾಗದ ಸರ್ವೆ ನಂಬರ್ 20 ೮1 ಕಲ್ಲುಗಣಿಗಾರಿಕೆಯ ಪರವಾನಿಗೆಯನ್ನು ಹೊಂದಿದ್ದು ಹಾಗೂ ಕೆಲವು ಷರತ್ತುಗಳನ್ನು ವಿಧಿಸಿದ್ದಾರೆ ಆದರೂ ಸಹ ಶರತ್ತುಗಳಿಗೆ ವಿರುದ್ಧವಾಗಿ ಕೆಲಸವನ್ನು ಮಾಡುತ್ತಿದ್ದಾರೆ.



ಪ್ರತಿದಿನ ಸಂಜೆ ಸುಮಾರು ಸಮಯ 6.10 ರಿಂದ 7.30 ವರೆಗೆ ಕಲ್ಲುಗಳನ್ನು ಸ್ಫೋಟ ಮಾಡುತ್ತಿದ್ದಾರೆ. ಅದು ಸಹ ನಿಯಮವನ್ನು ಉಲ್ಲಂಘಿಸಿ ಬ್ಲಾಸ್ಟ್ ಮಾಡುತ್ತಿದ್ದಾರೆ ಅತಿಯಾದ ಶಬ್ದವನ್ನು ಹೊಂದಿದ್ದು ಜನರು ಭಯದ ನಡುವೆ ಬದುಕುವಂತಾಗಿದೆ ಕೊಳವೆಬಾವಿಗಳು ಕುಸಿಯುವ ಹಂತದಲ್ಲಿವೆ.ತ್ಯಾಗದಕಟ್ಟೆ ಗ್ರಾಮದ ಗ್ರಾಮಸ್ಥರು ಹಾಗೂ ಪಂಚಾಯಿತಿ ಸಿಬ್ಬಂದಿಗಳು ಗಣಿಗಾರಿಕೆಗೆ ವಿಚಾರವನ್ನು ತಿಳಿಸಿದರು ಯಾವುದೇ ಪ್ರಯೋಜನವಾಗಿಲ್ಲ

ಇದಕ್ಕೆ ಸಂಬಂಧಿಸಿದಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ದೂರವಾಣಿ ಮೂಲಕೆ ಸಂಪರ್ಕ ಮಾಡಿ ವಿಚಾರ ತಿಳಿಸಿದ್ದರೂ ಸಹ ಈ ವಿಚಾರವು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಈ ವಿಚಾರವಾಗಿ ಪೊಲೀಸ್ ಇಲಾಖೆಗೆ ಒಂದು ಪತ್ರದ ಮೂಲಕ ವಿಚಾರವನ್ನು ತಿಳಿಸಲಾಗಿದೆ ಕಲ್ಲುಗಣಿಗಾರಿಕೆಗೆ ಸಂಬಂಧಪಟ್ಟಂತಹ ಅಧಿಕಾರಿಗಳು ಪರವಾನಿಗೆದಾರರಿಗೆ ಎಚ್ಚರಿಕೆ ನೀಡಿ ಕಲ್ಲುಗಣಿಗಾರಿಕೆಯ ಬ್ಲಾಸ್ಟಿಂಗ್ ನನ್ನು ನಿಷೇಧಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಬದುಕಿನ ಬವಣೆಗಳು






ಹುಟ್ಟಿಂದ ಚಟ್ಟದ ತನಕ್ಕು ಸಂಸಾರವೆಂಬ ಬಂಡಿಯಲ್ಲಿ ಸಾಗಿದ ಜೀವವೆಂಬ ಜೀವನದ ಪಯಣ, ಅದೆಷ್ಟೊ ಕಷ್ಟ ಸುಖ ದುಃಖ ನೋವು ನಲಿವು ಅಸೂಯೆ ಅಹಂಕಾರ ಎಲ್ಲವನ್ನು ಬೆಳೆಸಿಕೊಂಡು ಉಳಿಸಿಕೊಂಡು, ತಂದೆ ತಾಯಿ ಬಂದು ಬಳಗ ಬದನೆಕಾಯಿ ಬದುಕಂತೆ ವಿಶಾಲವಾಗಿ ಬದುಕನ್ನು ಕಟ್ಟಿಕೊಂಡು ಕೋನೆಗೆ ಪಡೆದುದ್ದಾದರೂ ಏನು ಎಂಬ ಪ್ರಶ್ನೆ?

ಈ ಮನದ ಅಂತರಂಗದಲ್ಲಿ ಮತ್ತೆಮತ್ತೆ ಜ್ಞಾಪಿಸುತ್ತದೆ. ಇಷ್ಟೆಲ್ಲಾ ಆದರೂ ಈ ಮಾನವ ಎಂಬ ಜಾತಿ ತನ್ನ ಎಲ್ಲಾ ಸಂಬಂಧಗಳನ್ನು ಮರೆತು ದುಡ್ಡು ಎಂಬ ದುಪಟ್ಟು ಬದುಕಿನಲ್ಲಿ ಬದುಕುತಿರುವಾಗ, ಅದರೋಳಗೆ ಒಂದು ಮಾನವ ತುತ್ತು ಅನ್ನಕ್ಕಾಗಿ ತಿಪ್ಪೆಗಳನ್ನು, ಕಸದ ತೊಟ್ಟಿಗಳನ್ನು ಹುಡಿಕಿಕೊಂಡು ಬದುಕನ್ನು ನಡೆಸುತ್ತಿರುವಾಗ ಈ ಮನಕ್ಕೆ ತುಂಬಾ ಘಾಸಿಯಾಗಿ ಗಾಯದ ಬರೆ ಬಂದಂತಾಗುತ್ತದೆ.ಇದೇನಾ ಆ ದೇವರು ಕೊಟ್ಟ ಪ್ರಪಂಚ! ತುಂಬಾ ನೋವಾಗುತ್ತದೆ, ಈ ಹೋಲಸು ಲೋಕವನ್ನು ಕಂಡು.

**–ಬಸವರಾಜ ಹೆಳವರಕಟ್ಟಿ**

# ಯುವ ಪ್ರತಿಭೆಗಳಿಗೆ ಸ್ಪೂರ್ತಿಯಾಗಿದ್ದ ಅಪ್ಪು ಪುನೀತ್ ರಾಜಕುಮಾರ್



ಗದಗ- ಜಿಲ್ಲೆಯ ತಿಮ್ಮಾಪೂರ ಗ್ರಾಮದ ಯುವ ಚಲನ ಚಿತ್ರದ ನಿರ್ದೇಶಕ ಇಂಜನಿಯರ್ ಶ್ರೀಕಾಂತ ಕಟಗಿ ಅವರ ನಿರ್ದೇಶನದ ಕ್ಷೇತ್ರಪತಿ ಚಲನಚಿತ್ರದ ಕಥೆ ವಿವರಿಸಲು ಪುನೀತ್ ರಾಜಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿ ಕ್ಷೇತ್ರಪತಿ ಚಿತ್ರಕ್ಕೆ ಸಹಕಾರ ನೀಡಬೇಕು ಎಂದು ಕೇಳಿದ್ದರು. ಈ ಚಿತ್ರ ರೈತ ಹೋರಾಟ ಆಧಾರಿತ ಉತ್ತರ ಕರ್ನಾಟಕದ ಗ್ರಾಮೀಣ ಜನರ ದೈನಂದಿನ ಬದುಕಿನ ಆಧಾರಿತ ಚಿತ್ರ ಸರ್ ಎಂದು ಶ್ರೀಕಾಂತ ಕಟಗಿ ಅವರು ವಿವರಿಸಿದ್ದರು. ಪುನೀತ್ ರಾಜಕುಮಾರ್ ಅವರು ತುಂಬಾ ಹೆಮ್ಮೆಯಿಂದ ಚಿತ್ರಕಥೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದರು.ಚಿತ್ರಕ್ಕೆ ಸಹಕಾರವನ್ನು ನೀಡುತ್ತೇನೆಂದು ಭರವಸೆ ನೀಡಿದ್ದರು ಹಾಗೂ ಈ ಕ್ಷೇತ್ರಪತಿ ಚಲನಚಿತ್ರದ ಆಡಿಯೋ ರಿಲೀಸ್ ಆಡಿಯೋ ಲಾಂಚನ್ನು ಗದಗ ಜಿಲ್ಲಾ ಕ್ರೀಡಾಂಗಣದಲ್ಲಿ ಅದ್ದೂರಿಯಾಗಿ ಪುನೀತ್ ರಾಜಕುಮಾರ್ ಅವರ ಕೈಯಲ್ಲಿ ಬಿಡುಗಡೆ ಮಾಡಬೇಕಿತ್ತು. ಈ ಸಂದರ್ಭದಲ್ಲಿ ಕ್ಷೇತ್ರಪತಿ ಚಲನಚಿತ್ರದ ನಾಯಕ ನಟ ಗುಲ್ಟು ಸಿನಿಮಾ ಖ್ಯಾತಿಯ ಚಿತ್ರ ನಟ ನವೀನ ಶಂಕ್ರರ ಪುನೀತ್ ರಾಜಕುಮಾರ್ ಅವರನ್ನು ಭೇಟಿಯಾಗಿದ್ದ ಕ್ಷೇತ್ರಪತಿ ಚಿತ್ರತಂಡ .ಪುನೀತ್ ರಾಜಕುಮಾರ್ ಅವರು ಯಾವುದೇ ಹಿರಿಯ ಕಿರಿಯ ಎನ್ನದೆ ಎಲ್ಲರನ್ನೂ ಅಪ್ಪಿಕೊಳ್ಳುತ್ತಿದ್ದರು ಎಂದು ಹೇಳಿದ ಯುವ ನಿರ್ದೇಶಕ ಶ್ರೀಕಾಂತ ಕಟಗಿ ನೆನಪು ಮಾಡಿಕೊಂಡರು.ಅಪ್ಪು ಅಗಲಿಕೆಗೆ ಕ್ಷೇತ್ರಪತಿ ತಂಡವು ಮನಮಿಡಿದಿದೆ.ಯುವರಾಜನನ್ನು ಕನ್ನಡ ಚಿತ್ರೋದ್ಯಮ ಕಳೆದುಕೊಂಡಿದೆ ಎಂದು ಶ್ರೀಕಾಂತ ಕಟಗಿ ಹೇಳಿದರು.

ಕರುನಾಡ ಕಂದ
ಸಂಪುಟ-1 । ಸಂಚಿಕೆ-2
ದಿನಾಂಕ: 15-11-2021 । ಪುಟಗಳು: 16

# ಪ್ರಶಸ್ತಿಗಳು ಸಾಧನೆ ಮಾಡಲು ಪ್ರೇರಕ ಶಕ್ತಿಗಳಾಗಬೇಕು





ಗಂಗಾವತಿ: "ಪ್ರತಿಯೊಬ್ಬರೂ ತಳಮಟ್ಟದಿಂದ ಶ್ರಮಪಟ್ಟು ಮೇಲೆ ಬರಬೇಕು. ನಿಸ್ವಾರ್ಥ ಸಮಾಜ ಸೇವೆಯಿಂದ ಮಾತ್ರ ಪ್ರಶಸ್ತಿ ಪುರಸ್ಕಾರಗಳು ಅರಸಿಕೊಂಡು ಬರಬೇಕು. ನಾವೇ ಪ್ರಶಸ್ತಿಗಳ ಬೆನ್ನು ಹತ್ತಬಾರದು. ಪ್ರಶಸ್ತಿಗಳೇ ನಮ್ಮನ್ನು ಹುಡುಕಿಕೊಂಡು ಬರುವಂತಾಗಬೇಕು. ಸರ್ಕಾರ ಪ್ರಶಸ್ತಿ ಕೊಡಲು ವಯೋಮಿತಿ ನಿಗದಿಪಡಿಸಬಾರದು. ಏಕೆಂದರೆ 60 ವಯೋಮಾನದವರಿಗೆ ಕೊಡುವುದರಿಂದ ಹೆಚ್ಚಿನ ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ. ವಯಸ್ಸು ಚಿಕ್ಕದಾಗಿದ್ದರೂ ಹೆಚ್ಚಿನ ಸಾಧನೆ ಮಾಡಿದವರಿಗೆ ನೀಡಬಹುದು, ಅಂದಾಗ ಪ್ರಶಸ್ತಿಗಳು ಯುವಶಕ್ತಿಗೆ ಪ್ರೇರಕ ಶಕ್ತಿಯಾಗಬಲ್ಲವು. ಒಂದು ಕಾಲದಲ್ಲಿ ಸಾಹಿತ್ಯ ಸಂಘ ಸ್ಥಾಪಿಸಿ ಸೈಕಲ್ ಮೇಲೆ ತಿರುಗಾಡಿ ಕರಪತ್ರ ಹಂಚಿ ಸಾಹಿತ್ಯ ಸೇವೆ ಮಾಡುತ್ತಿದ್ದೆವು. ಅದರ ಫಲವಾಗಿ ಇಂದು ಸರಕಾರ ಗುರುತಿಸಿ ಗೌರವಿಸಿರುವುದು ನನಗೆ ಸಂತೋಷ ತಂದಿದೆ. ಅದೇ ರೀತಿ ಗಂಗಾವತಿ ನಗರದ ಪ್ರಸಿದ್ಧ ಕರಕುಶಲ ಕಲಾವಿದರಾದ ಶ್ರೀ ವೆಂಕಣ್ಣ ಚಿತ್ರಗಾರರು ರಚಿಸಿದ ಕಲಾಕೃತಿಗಳು ನಾಡಿನಾದ್ಯಂತ ಹೆಸರಾಗಿವೆ. ಕಾಯಕನಿಷ್ಠೆಗೆ ಅವರಿಗೆ ಪ್ರಶಸ್ತಿ ಸಂದಿದೆ. ಅವರಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ. ಗಂಗಾವತಿ ದಾಸೋಹದ ಬೀಡು. ಈ ಮಣ್ಣಿನಲ್ಲಿ ಅಪಾರ ಶಕ್ತಿಯಿದೆ. ತಾತನ ಆಶೀರ್ವಾದದಿಂದ ಈ ನೆಲ ಪಾವನವಾಗಿದೆ. ಎಲ್ಲರನ್ನೂ ಗೌರವಿಸುವ ಗುಣ ನಗರದ ಜನತೆಗಿದೆ " ಎಂದು ಖ್ಯಾತ ಹಾಸ್ಯ ಚಿಂತಕ ಬಿ.ಪ್ರಾಣೇಶ ಅಭಿಪ್ರಾಯಪಟ್ಟರು.

ಅವರು ನಗರದ ತಮ್ಮ "ಬೀಚಿ ನಿಲಯ" ದಲ್ಲಿ ತಾಲ್ಲೂಕು ಕಸಾಪ ವತಿಯಿಂದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದರು.

ತಾಲ್ಲೂಕು ಕಸಾಪ ಪದಾಧಿಕಾರಿಗಳು ಹಾಗೂ ಸಾಹಿತಿಗಳು ಇಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕರಕುಶಲ ಕಲಾವಿದರಾದ ಶ್ರೀ ವೆಂಕಣ್ಣ ಚಿತ್ರಗಾರ ಹಾಗೂ ಹಾಸ್ಯ ಚಿಂತಕ ಬಿ.ಪ್ರಾಣೇಶ ಅವರ ಮನೆಗಳಿಗೆ ತೆರಳಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕಸಾಪ ಅಧ್ಯಕ್ಷ ಎಸ್.ಬಿ. ಗೊಂಡಬಾಳ ಮಾತನಾಡಿ "ಗಂಗಾವತಿ ತಾಲ್ಲೂಕಿಗೆ ದೀಪಾವಳಿ ಡಬಲ್ ಧಮಾಕಾ ಲಭಿಸಿದೆ. ಇಬ್ಬರು ಮಹಾನ್ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರಕಿರುವುದು ಕಸಾಪಕ್ಕೆ ಅತೀವ ಸಂತೋಷದ ವಿಷಯವಾಗಿದೆ. ಇಂತಹ ಸಾಧಕರು ಮುಂಬರುವ ಪೀಳಿಗೆಗೆ ಮಾದರಿಯಾಗಬಲ್ಲರು" ಎಂದು ಪುರಸ್ಕೃತರನ್ನು ಗೌರವಿಸಿ ಸನ್ಮಾನಿಸಿದರು.

ಸಾಹಿತಿ ಜಿ. ಪವನ್ ಕುಮಾರ, ಹಾಸ್ಯ ಕಲಾವಿದರಾದ ನರಸಿಂಹ ಜೋಶಿ, ಲಿಂಗಾರೆಡ್ಡಿ ಆಲೂರ ಮಾತನಾಡಿ ಸಾಧಕರ ಹೆಜ್ಜೆ ಗುರುತುಗಳನ್ನು ಮೆಲುಕು ಹಾಕಿದರು.

ಈ ಸಂದರ್ಭದಲ್ಲಿ ಹಿರಿಯ ಸಂಶೋಧಕರಾದ ಡಾ. ಶರಣಬಸಪ್ಪ ಕೋಲ್ಕಾರ ಮಾತನಾಡಿ "ಅಪರೂಪದ ಕಾಷ್ಠ ಕಲಾಕೃತಿಗಳ ಮೂಲಕ ನಾಡಿನ ಮನೆಮಾತಾದ ಶ್ರೀ ವೆಂಕಣ್ಣ ಚಿತ್ರಗಾರ ಅವರ ಸಾಧನೆ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಲಿಂಗಾರೆಡ್ಡಿ ಆಲೂರ, ಕಸಾಪ ಪದಾಧಿಕಾರಿಗಳಾದ ರಮೇಶ ಕುಲಕರ್ಣಿ, ಗೌರವ ಕಾರ್ಯದರ್ಶಿ ಶ್ರೀಮತಿ ವೀರಮಹೇಶ್ವರಿ, ಕೆ.ಮಹಾಲಕ್ಷ್ಮೀ, ಶರಣೇಗೌಡ ಪೋ.ಪಾ, ಟಿ. ಆಂಜನೇಯ, ವಿಜಯ ಕುಮಾರ ರಾಯ್ಕರ್, ಶಿವಕಾಂತ ತಳವಾರ, ಕೆ. ಪತ್ರೆಪ್ಪ, ವಿರುಪಾಕ್ಷಪ್ಪ ಸಿರವಾರ, ಮಾರುತಿ ಐಲಿ, ಲಕ್ಷ್ಮೀಕಾಂತ ಹೇರೂರ, ಜಿ.ಪವನಕುಮಾರ್, ವೆಂಕಟಗಿರಿ ಕಸಾಪ ಹೋಬಳಿ ಅಧ್ಯಕ್ಷ ರುದ್ರೇಶ ಎಂ. ಆರಾಳ, ಮರಳಿ ಕಸಾಪ ಹೋಬಳಿ ಕೋಶಾಧ್ಯಕ್ಷ ಸಣ್ಣ ಯಮನೂರಪ್ಪ ನಾಯಕ್, ಕಸಾಪ ಸದಸ್ಯರಾದ ಎಂ.ಬಿ.ಕೊಪ್ಪಳ, ಹೇಮಂತರಾಜ ಸಿ.ಎನ್. ರಮೇಶ ನೇತ್ರ, ಮೋಹನ, ಮಲ್ಲಿಕಾರ್ಜುನ ಕಡೂರು, ತಾಲೂಕು ಪ್ರೌಢ ಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರಾದ ರಾಜೇಶ್ವರ ರೆಡ್ಡಿ ಉಪಸ್ಥಿತರಿದ್ದರು.

## ರೈತ ಸಂಘದ ಹೋರಾಟ ಫಲ

### ಹುಬ್ಬಳ್ಳಿ-ಗುಂತಕಲ್ ಪ್ಯಾಸೆಂಜರ್ ರೈಲು ಗಾಡಿ ನಿಲ್ಲುಗಡೆ



ಗದಗ- ಇಲ್ಲಿ ಸಮಿಪದ ಹರ್ಲಾಪೂರ ರೈಲ್ವೇ ನಿಲ್ದಾಣದಲ್ಲಿ ಇಂದು ಹುಬ್ಬಳ್ಳಿಯಿಂದ ಗುಂತಕಲ್ ವರೆಗೆ ಸಂಚರಿಸುವ ರೈಲು ಗಾಡಿಗೆ ಪೂಜೆ ಸಲ್ಲಿಸುವ ಮೂಲಕ ರೈತ ಸಂಘದ ಗದಗ ಜಿಲ್ಲಾ ಅಧ್ಯಕ್ಷರಾದ ಯಲ್ಲಪ್ಪ ಎಚ್ ಬಾಬರಿ ಹಾಗೂ ಕೊಪ್ಪಳ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಅಂದಪ್ಪ ಕೋಳುರ ಅವರು ಹಸಿರು ನಿಶಾನೆ ತೋರಿಸುವುದರ ಮೂಲಕ ರೈಲು ಗಾಡಿಗೆ ಚಾಲನೆ ನೀಡಿದರು


ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಯಲ್ಲಪ್ಪ ಎಚ್ ಬಾಬರಿ ಅವರು ಈ ಹಿಂದೆ ದಿನಾಂಕ 1-11-2021ರಂದು ಕೊಪ್ಪಳ ನಗರದ ಕುಷ್ಟಗಿ ರಸ್ತೆ ಹಾಗೂ ಗಿಣಿಗೇರಾ ರೈಲ್ವೇ ನಿಲ್ದಾಣಗಳ ನಡುವೆ ಎಲ್ ಸಿ ಸಂಖ್ಯೆ 66 ಬಳಿಯ ಹೆಚ್ಚಿನ ಸಾರಿಗೆ ಸಂಚಾರವಿರುವ ರೈಲ್ವೇ ಲೆವೆಲ್ ಕ್ರಾಸಿಂಗ್ ಗೇಟ್ ಬಳಿ ರಸ್ತೆ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ಹಾಗೂ ಭೂಮಿಪೂಜೆ ನೆರವೇರಿಸುವ ಕಾರ್ಯಕ್ರಮಕ್ಕೆ ಆಗಮಿಸಿದ ಮಾನ್ಯ ಕೊಪ್ಪಳ ಲೋಕಸಭಾ ಸಂಸದರಾದ ಸಂಗಣ್ಣ ಕರಡಿ ಹಾಗೂ ಸಚಿವರಾದ ಹಾಲಪ್ಪ ಆಚಾರ ಮತ್ತು ಶಾಸಕರಾದ ರಾಘವೇಂದ್ರ ಹಿಟ್ನಾಳ ಇವರ ಮೂಲಕ ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಹರ್ಲಾಪೂರ ರೈಲ್ವೇ ನಿಲ್ದಾಣದಲ್ಲಿ ರೈಲ್ವೆ ಪ್ರಯಾಣಿಕರ ಅನುಕೂಲಕ್ಕಾಗಿ ಈ ರೈಲುಗಾಡಿ ಸಂಖ್ಯೆ 07337 / 07338 ಎಸ್ ಎಸ್ ಎಸ್ ಹುಬ್ಬಳ್ಳಿ ಯಿಂದ ಗುಂತಕಲ್ ರೈಲು ಗಾಡಿಯನ್ನು ಗದಗ ತಾಲ್ಲೂಕಿನ ಹರ್ಲಾಪೂರ ರೈಲ್ವೆ ನಿಲ್ದಾಣದಲ್ಲಿ ರೈಲು ಗಾಡಿ ನಿಲುಗಡೆ ಮಾಡುಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವಿ ಆರ್ ನಾರಾಯಣರೆಡ್ಡಿ ಬಣದ ಗದಗ ಜಿಲ್ಲಾ ರೈತ ಸಂಘದ ಜಿಲ್ಲಾ ಅಧ್ಯಕ್ಷರು ಹಾಗೂ ರೈತ ಸಂಘದ ಗ್ರಾಮ ಘಟಕದ ಸದಸ್ಯರು ಹಾಗೂ ಕೊಪ್ಪಳ ಜಿಲ್ಲಾ ರೈತ ಸಂಘದ ಅಧ್ಯಕ್ಷರು ಮನವಿಮಾಡಿದರ ಪ್ರತಿ ಫಲವಾಗಿ ಇಂದು ನಿಲುಗಡೆಯಾಗಿದೆ.

ಈ ರೈಲ್ವೇ ಗಾಡಿ ನಿಲ್ಲೂವದರಿಂದ ತಿಮ್ಮಾಪೂರ,ಹರ್ಲಾಪೂರ, ಲಕ್ಕುಂಡಿ,ಯರೆಹಂಚಿನಾಳ,ಬಿನ್ನಾಳ ಗ್ರಾಮದ ಸಾರ್ವಜನಿಕರು ಹಾಗೂ ಬಡವರಿಗೆ, ವಿದ್ಯಾರ್ಥಿಗಳಿಗೆ, ಕುಲಿ ಕಾರ್ಮಿಕರಿಗೆ ,ವ್ಯಾಪಾರಸ್ಥರಿಗೆ , ಹುಲಿಗೆಮ್ಮ ದೇವಿಯ ಭಕ್ತರಿಗೆ, ಹಾಗೂ ಕೊಪ್ಪಳ , ಹೊಸಪೇಟೆ ನಗರಗಳಿಗೆ ಹೋಗವ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಈ ರೈಲು ಗಾಡಿ ನಿಲ್ಲುಗಡೆ ಸಹಕರಿದ ಕೂಪ್ಪಳ ಲೋಕಸಭಾ ಸಂಸದರಾದ ಸಂಗಣ್ಣ ಕರಡಿ ಹಾಗೂ ಸಚಿವರಾದ ಹಾಲಪ್ಪ ಆಚಾರ ಮತ್ತು ಶಾಸಕರಾದ ರಾಘವೇಂದ್ರ ಹಿಟ್ನಾಳ ಹಾಗೂ ರೈಲ್ವೇ ಹಿರಿಯ ಅಧಿಕಾರಿಗಳಿಗೆ ಮತ್ತು ಈ ಸುದ್ದಿ ಪ್ರಸಾರ ಮಾಡಿದ ಪತ್ರಿಕಾ ಮಾಧ್ಯಮದವರಿಗೆ ರೈತ ಸಂಘದಿಂದ ಅಭಿನಂದನೆ ಸಲ್ಲಿಸುತ್ತೇನೆ ಹಾಗೂ ಮಂದಿನ ದಿನಮಾನದಲ್ಲಿ ಹಂಪಿ ಎಕ್ ಪ್ರೆಸ್ ರೈಲು ಗಾಡಿ ಹಾಗೂ ತಿರುಪತಿ ಎಕ್ಸ್ ಪ್ರೆಸ್ ರೈಲು ಗಾಡಿಗಳನ್ನು ನಿಲ್ಲಿಸಬೇಕು ಎಂದು ಹೇಳಿದರು .

ಈ ರೈಲು ಗಾಡಿ ನಿಲ್ಲುಗಡೆ ಸಮಯ ಬೆಳಿಗ್ಗೆ 9-17 ಘಂಟೆಗೆ ಬರುತದೆ ಹಾಗೂ ಸಾಯಂಕಾಲ 6-40 ಘಂಟೆಗೆ ಮರಳಿ ಬರುತ್ತದೆ. ಸಂದರ್ಭದಲ್ಲಿ ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷ ಹುಚ್ಚೀರಪ್ಪ ಜೋಗಿನ ಸದಸ್ಯರಾದ ಶರಣಪ್ಪ ಜೋಗಿನ ಗಿರೀಶ್ ಗುಡ್ಲಾನೂರ ಮಾರುತಿ ಲಕ್ಕುಂಡಿ ಅಜ್ಜಪ್ಪ ಜೋಗಿನ ಬಾಳಪ್ಪ ಗಂಗರಾತ್ರಿ, ರಾಮಪ್ಪ ಖಂಡ್ರೆ ಶಕಂಪ್ಪ ಅಲ್ಲಿಪುರ ಶಿವಪುತ್ರಪ್ಪ ತಿಮ್ಮಾಪೂರ ಹೇಮಂತ ಕುರಡಗಿ,ಮಾರುತಿ ಜೋಗಿನ ವೆಂಕಟೇಶ ಸತ್ಯಪ್ಪನವರ ಮಾರುತಿ ಗದಗ,ಕೀರಣ ಗುಡ್ಲಾನೂರ , ವೆಂಕಟೇಶ ಪೂಜಾರ ಹಾಗೂ ರೈಲ್ವೇ ಸ್ಟೇಷನ್ ಮಾಸ್ಟರ್ ಸಮೇಂದ್ರ ಸಿಂಗ್ ಸಿಬ್ಬಂದಿ ನಿಂಗಪ್ಪ ಗುಡ್ಲಾನೂರ, ಹಾಗೂ ಇನ್ನೂ ಮುಂತಾದ ರೈತರು ಮುಖಂಡರು ಪಾಲ್ಗೊಂಡಿದ್ದರು.

## "ಗಜಲ್."



ಹನಿ ಕಣ್ಣೀರಾದರೂ ಸುರಿಯಲಿ ನನ್ನಿಂದ ಈ ನೆಲವ ಹಸಿಯಾಗಿಸಲು.

ಒಂದಿಷ್ಟು ಮೊಳಕೆಯಾದರೂ ಒಡೆದು ಕಾಣಿಸಲಿ ಈ ಮನವ ನಗಿಸಲು.

ನಿನ್ನಂತೆ ಮಿಂಚಿ ಮಿನುಗಲು ನಾನೇನು ಮಿನುಗುವ ನಕ್ಷತ್ರ ಅಲ್ಲವಲ್ಲ

ತುಣುಕು ಕನ್ನಡಿಗೆ ನಿನ್ನ ಬೆಳಕಾದರೂ ಸೋಕಲಿ ಒಂಚೂರು ಹೊಳೆಯಲು.

ಎಲ್ಲ ನೋವನ್ನು ಮರೆತು ಹಕ್ಕಿಯಂತೆ ರೆಕ್ಕೆ ಕಟ್ಟಿಕೊಂಡು ಹಾರಾಡೋ ಆಸೆ

ಕಾಗದದಲ್ಲಿ ಬರೆದ ನನ್ನ ಕನಸನ್ನೇ ದೋಣಿಯಾಗಿಸು ನಿನ್ನೆದೆಯಲ್ಲಿ ತೇಲಲು.

ಬಯಕೆಗಳ ಬಡಾವಣೆಯಲ್ಲಿ ನನ್ನದು ವಿಳಾಸವಿಲ್ಲದೆ ಸಾಗುವ ಒಂಟಿ ಪಯನ

ಅಲ್ಲಲ್ಲಿ ನಿನ್ನ ನೆನಪಿನ ಸೂಚನಾಫಲಕವನ್ನಾದರೂ ನಿಲ್ಲಿಸು ಖುಷಿಪಡಿಸಲು.

ಅಂಭರದಲ್ಲಿ ತೇಲುವ ಹಕ್ಕಿಗಳ ದಿಕ್ಕನ್ನು ಯಾವ ಮೈಲುಗಳಲ್ಲಿ ಗುರುತಿಸಲಿ

ಬೀಸಿದ ಗಾಳಜೊತೆಗೆ ನಿನ್ನ ಧ್ವನಿಯನ್ನಾದರೂ ಅಂಟಿಸಿ ಕಳುಹಿಸು ನಾ ಕೇಳಲು.

ಬದುಕಿನ ಬಂಜರು ಭೂಮಿಯಲ್ಲಿ ನಿನ್ನ ನೆರಳನ್ನೇ ಹುಡುಕುತ್ತಲಿದ್ದೇನೆ ನಾನು

ಯಾವ ಮಾಯೆಯಿಂದಲಾದರೂ ಸರಿಯೇ ನೀ ಕಾಣಿಸು ಈ ರವಿ ನಲಿಯಲು.

-ರವಿ.ವಿಠ್ಠಲ. ಆಲಬಾಳ.
(ಕನ್ನಡಿಗ ರವಿ)

## ಕನ್ನಡ ರಾಜ್ಯೋತ್ಸವ




ನಮ್ಮ ಹೆಮ್ಮೆಯ ರಾಜ್ಯೋತ್ಸವ
ಕರುನಾಡ ನಾಡಿನ ಸಿರಿ ವೈಭವೋತ್ಸವ
ಸಂಗೀತ ಸಾಹಿತ್ಯ ಕಲೆಗಳ ಮಹೋತ್ಸವ
ಗಿರಿನದಿ ವನ ಖಗ
ಮೃಗ ಪಕ್ಷಿಗಳ ಜನಮನವು
ಅನುದಿನವು ಆನಂದೋತ್ಸವ
ಕನ್ನಡ ಮಾತೆ ಅಮೃತ ವರತೆ
ಸಕಲ ಜೀವರಾಶಿಗೆ
ವರದಾತೆ
ನಿತ್ಯ ಹೊಸತನದಲಿ
ಉತ್ಸಾಹದ ಚಿಲುಮೆ
ಚಿಮ್ಮುತಿರಲಿ
ಕನ್ನಡಿಗರು ವಿಶ್ವದಾದ್ಯಂತದಲಿ
ಕನ್ನಡದ ಉಸಿರು, ಕನ್ನಡದ ಹೆಸರು
ಉಳಿಯಲಿ, ಮೆರೆಯಲಿ ಎಲ್ಲಲಿ.

-ಪೂಜ್ಯ ಶ್ರೀ ನಾಗಭೂಷಣ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು,
ಹೆಬ್ಬಾಳ ಶಿವಯೋಗಿ ಬೃಹನ್ಮಠ, ಹೆಬ್ಬಾಳ.

## ಗಡಿನಾಡ ಬಾಲ ಕಲಾವಿದ ರೇವಣಸಿದ್ಧ



ಮಹಾರಾಷ್ಟ್ರ ರಾಜ್ಯದ ಸೋಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ತೋಳ ನೂರ ಗ್ರಾಮದ ತಂದೆ ಪುಂಡಲಿಕ ತಾಯಿ ಸಂಗೀತ ದಂಪತಿಗಳ ದ್ವಿತೀಯ ಪುತ್ರ ರೇವಣಸಿದ್ಧ ನಿಗೆ ಎರಡು ಕಣ್ಣು ಕಾಣಿಸುವುದಿಲ್ಲ, ಆದರೆ ಸಂಗೀತ ವಿವಿಧ ವಾದನ ತಬಲ ನುಡಿಸಲು ಕುಳಿತರೆ ಕೇಳುಗರ ಮನ ಸಂತೋಷ ಕೊಡುವುದರಲ್ಲಿ ಸಂಶಯವಿಲ್ಲ,

ಕೇವಲ ತಬಲ ಮಾತ್ರವಲ್ಲ ಹಾರ್ಮೋನಿಯಂ ತಂಬೂರಿ ವೀಣಾ ವಾದನ ಗಿಟಾರ ಕೊಳಲು ಹೀಗೆ ಹತ್ತು ಹಲವು ವಾದ್ಯಗಳನ್ನು ಸಹ ನುಡಿಸುತ್ತಾನೆ,

ಮತ್ತೊಂದು ವಿಶೇಷ ತಬಲ ಬಡಿಯುತ್ತ ಏಕಕಾಲಕ್ಕೆ ಗಾಯನ ಸಹ ಮಾಡುತ್ತಾನೆ, ಅದೇ ರೀತಿ ಒಮ್ಮೆ ಹೇಳಿದ ಮೊಬೈಲ್ ನಂಬರ್ ಹೇಳಿದರೆಮತ್ತೊಮ್ಮೆ ಅದೇ ನಂಬರನ್ನು ಒಂದು ಸಂಖ್ಯೆ ತಪ್ಪದೆ ಹೇಳುತ್ತಾನೆ

ಅವನ ಸಂಗಡ ಮಾತನಾಡಿದರೆಅವರ ಗುರುತು ಸಹ ಹೇಳುತ್ತಾನೆ ನಿಜಕ್ಕೂ ಬಹುಮುಖ ಪ್ರತಿಭೆ ಅಂದರೆ ತಪ್ಪಾಗಲಾರದು, ಜನಪದ ಭಾವಗೀತೆ ಭಕ್ತಿಗೀತೆ ಸಿನಿಮಾ ಹಾಡುಗಳು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಜೊತೆ ಕನ್ನಡ ಮರಾಠಿ ಹಿಂದಿ ಮೂರು ಭಾಷೆಯಲ್ಲಿ ಸರಳವಾಗಿ ಹಾಡುತ್ತಾನೆ.

ರೇವಣಸಿದ್ಧ 13 ರ ಬಾಲಕ ಅಕ್ಕಲಕೋಟ ತಾಲೂಕಿನ ತೋಳನೂರು ಗ್ರಾಮದ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದುವಿಜಯಪುರದ ಶ್ರೀ ಕುಮಾರೇಶ್ವರ ಗಾನಬನ ಸಂಗೀತ ಮಹಾವಿದ್ಯಾಲಯ ಆಶ್ರಮದ ಶ್ರೀ ತೋಂಟದಾರ್ಯ ಕವಿ ಗವಾಯಿ ಹತ್ತಿರ ಸಂಗೀತ ಅಭ್ಯಾಸ ಮಾಡುತ್ತಿದ್ದಾನೆ,

ಕಿರಿಯ ವಯಸ್ಸಿನಲ್ಲಿ ಮನೆಯಲ್ಲಿ ಕೂಡ ಬುಟ್ಟಿ ಬಕೆಟ್ ತಟ್ಟೆ ಲೋಟ ಹೀಗೆ ಕೈಯಲ್ಲಿ ಸಿಕ್ಕ ವಸ್ತುಗಳನ್ನು ಬಳಕೆ ಮಾಡಿ ಹಾಡುತ್ತಾ ಬಾರಿಸುತ್ತಿದ್ದ, ಸಂಗೀತದ ಆಸಕ್ತಿ ಕಂಡ ದೊಡ್ಡಪ್ಪ ಶಿಕ್ಷಕರು ಹಾಗೂ ಪತ್ರಕರ್ತರಾದ ಶರಣಪ್ಪ ಪುಲಾರಿ ಅವರು ರೇವಣಸಿದ್ಧನನ್ನು ವಿಜಯಪುರದ ಗಾನಬನ ಶಾಲೆಯಲ್ಲಿ ಸಂಗೀತ ಕಲಿಸಲು ಸೇರಿಸಿದರು.

ಸಾಧನೆ ವಿಜಯಪುರ ಆಕಾಶವಾಣಿಯಲ್ಲಿ ಕಲಾವಿದರಾಗಿ ಭಾಗವಹಿಸಿ ಸಂಗೀತದ ಮಹಿಮೆ ಯನ್ನು ಎತ್ತಿ ತೋರಿಸಿದ್ದೇನೆ.ಅಕ್ಕಲಕೋಟ ದಲ್ಲಿ ನಡೆದ ಮಹಾ ಶ್ರೀ ಸಿದ್ದೇಶ್ವರ ಅಪ್ಪಾಜಿಯವರ ಪ್ರವಚನದಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಗಾಯನ ಸಂಗಡ ತಬಲಾ ವಾದನ ಮಾಡಿ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದಾನೆ.

ಮುಂಬೈ ಪು ನಾ ಸೋಲಾಪುರಬೆಂಗಳೂರು ಮೈಸೂರು ಧಾರವಾಡ ತುಮಕೂರು ವಿಜಯಪುರ ಕಲಬುರ್ಗಿ ಸೇರಿದಂತೆ ರಾಜ್ಯ ಹಾಗೂ ನೆರೆ ರಾಜ್ಯದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಗೀತ ಕಾರ್ಯಕ್ರಮ ನೀಡಿದ್ದಾನೆ,

ಮಹಾರಾಷ್ಟ್ರ ಸರ್ಕಾರ ನಡೆಸುವ ಟಾಲೈಂಟ್ ಹಂಟ್ ಕಾರ್ಯಕ್ರಮದಲ್ಲಿ ಗಾಯನ ಮತ್ತು ವಾದನದಲ್ಲಿ ಜಿಲ್ಲಾ ಮಟ್ಟದ ಪ್ರಥಮ ಸ್ಥಾನ ಪಡೆದಿದ್ದಾನೆ, ಕರ್ನಾಟಕ ಸರ್ಕಾರ ನಡೆಸುವ ಧಾರವಾಡದ ಬಾಲ ವಿಕಾಸ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾನೆ, ಈ ರೀತಿ ರಾಷ್ಟ್ರಮಟ್ಟದ ಪ್ರಶಸ್ತಿ ಸಹ ಪಡೆದಿದ್ದಾನೆ,

ಮಹಾರಾಷ್ಟ್ರದ ಇಂಥ ನೂರಾರು ಬಹುಮುಖ ಪ್ರತಿಭೆಗಳಿಗೆ ಅವಕಾಶ ನೀಡಬೇಕಾಗಿದೆ ಬಾಲ ಅಂಧ ಬಾಲಕ ರೇವಣಸಿದ್ಧ ನಿಗೆ ಸದಾ ಸಹಕಾರ ಬೆಂಬಲ ನೀಡುತ್ತಿರುವ ತೋಳ ನೂರ ಕನ್ನಡ ಶಾಲೆಯ ಶಿಕ್ಷಕ ಬಳಗಗಜಲ್ ಕವಿ ಗಿರೀಶ್ ಜಕಾಪುರೆ ಪತ್ರಕರ್ತ ಹಾಗೂ ಮಹಾರಾಷ್ಟ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಭ್ಯರ್ಥಿ ಸೋಮಶೇಖರ ಜಮ ಶೆಟ್ಟಿ ವಿದ್ಯಾದರ್ ಗುರು ವ್, ಅಶೋಕ ಡವಳಗಿಗಿರೀಶ್ ಹವಾಲ್ದಾರ್ ಬಾಬಾಸಾಬ್ ಚಿಕ್ಕಮಣ್ಣೂರ ಅಕ್ಕಲ್ಕೋಟ್ ಕನ್ನಡ ಬಾಂಧವರು ಶುಭಹಾರೈಸಿದ್ದಾರೆ,

**-ದಯಾನಂದ ಪಾಟೀಲ**

ಸಾಹಿತಿಗಳು
ಭಾರತೀಯ ಕನ್ನಡ ಸಾಹಿತ್ಯ ಬಳಗ
ಮಹಾರಾಷ್ಟ್ರ

ಕರುನಾಡ ಕಂದ
ಸಂಪುಟ-1 । ಸಂಚಿಕೆ-2
ದಿನಾಂಕ: 15-11-2021 । ಪುಟಗಳು: 16

## ತುಂಬದಲ್ಲಿ ವಿನೂತನ ರೈತರ ಕ್ಷೇತ್ರ ಪಾಠಶಾಲೆ




ಈಗ ತಾನೇ ಸೂರ್ಯ ಉದಯಿಸುತ್ತಿದ್ದ. ತಂಗಾಳಿಯ ಮಧ್ಯೆ, ರೈತರ ಗುಂಪೊಂದು ಜೊತೆಯಲ್ಲಿ ಕುಳಿತು ಕಲಿಯುತ್ತಿದ್ದರು.ಅರೇ ಇದೇನು ಎಂದು ಯೋಚಿಸುತ್ತಿರುವಿರಾಷ ಈ ತರಹ ಶಾಲೆ ಭಾಗಶಹ: ನೀವು ನೋಡಿರುವುದಿಲ್ಲ ಈ ತರಹ ರೈತರ ಪಾಠ ಶಾಲೆ ಕಂಡಿದ್ದು ರೈತರಾದ ತುಂಬ ಗ್ರಾಮದ ಪಾರ್ವತಮ್ಮ ಎಸ್ ನಾಗರಳ್ ಹೊಲದಲ್ಲಿ.

ಕೆಬಿಜೆಎನ್‌ಎಲ್, ಕೃಷಿ ಇಲಾಖೆ, ಡಿಮ್ಯಾಕ್, ಅಮೃತ ರೈತ ಉತ್ಪಾದಕರ ಸಂಘ, ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆ, ಜೈನ ನೀರಾವರಿ ಜಂಟಿ ಆಯೋಗದಲ್ಲಿ ಈ ಹೊಸ ಪ್ರಯೋಗವನ್ನು ಮಾಡಲಾಯಿತು ಈ ರೈತರ ಪಾಠಶಾಲೆಯಲ್ಲಿ ಮೆಣಸಿನಕಾಯಿ ಬೆಳೆಯ ಸಂಪೂರ್ಣ ಬೇಸಾಯ ಕ್ರಮ ತಿಳಿಸಿಕೊಡಲಾಯಿತು.

ಮೆಣಸಿನ ಕಾಯಿ ಬೆಳೆಯು ವಾಣಿಜ್ಯ ಬೆಳೆಯಾಗಿದ್ದು ಇದು ಮುಖ್ಯವಾಗಿ 180 ದಿನದಲ್ಲಿ ಬೆಳೆಯು ಬರುತ್ತದೆ. ಇಲ್ಲಿ ರೈತರ ಜೊತೆಯಲ್ಲಿ ಕೃಷಿ ಪದವಿಧರರು ಕೂಡ ಭಾಗವಹಿಸಿ ತಿಳಿವಳಿಕೆ ನೀಡಿದರು.

ಮುಖ್ಯವಾಗಿ ಈ ಪಾಠಶಾಲೆಯಲ್ಲಿ ತಂತ್ರಜ್ಞಾನದ ಮೂಲಕ ಹೇಗೆ ಅಧಿಕ ಇಳುವರಿ ಪಡೆಯಬಹುದು. ಇದರೊಂದಿಗೆ ಪ್ರತಿ ತಿಂಗಳಿಗೊಮ್ಮೆ ರೈತರ ಜಮಿನಿನಲ್ಲಿ ಬಂದು ವೈಜ್ಞಾನಿಕವಾಗಿ ರೈತರು ಬೇಸಾಯದ ಬಗ್ಗೆ ಕಲಿಯುವುದು ಇದರ ಮುಖ್ಯ ಉದ್ದೇಶವಾಗಿದೆ.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ.ಸುಧಾ, ಡಾ.ಐರಾ, ಸಿದ್ದಪ್ಪ ಸಿ ಅಂಗಡಿ, ಜೈನ ನೀರಾವರಿಯ ಹಿರಿಯ ಅಧಿಕಾರಿಗಳಾದ ಪ್ರಭಾಕರ್, ಎಂ.ಹಿರೇಮಠ, ಕ್ಷೇತ್ರ ಸಂಯೋಜಕರಾದ ಮಲ್ಲಕಜಪ್ಪ ಹೊಸೂರು, ವಿಶ್ವಗೂಡೂರು, ಅನೀಲ್ ಕುಮಾರ್ ತುಂಬಗಿ, ಸುರೇಶ್ ನಾಗೂರು, ಸಂಗಮೇಶ್, ಮರಕಂಡಪ್ಪ ಕೊಡಂಗಟ್ಟಿ, ರಾಮಪ್ಪ ಹೊಲೆಕರ್, ಸಂಗಣ್ಣ ಹುಬ್ಬಳ್ಳಿ, ಮಹಾಂತ ಗೌಡ ನಾಗರಳ್, ಸಿದ್ದಣ್ಣ ನಾಗರಳ್, ಬಸಪ್ಪ ಸಣ್ಣಿ, ಶೇಖರಪ್ಪ ತುಪ್ಪದ್, ಅಮರೇಶ್ ಸಣ್ಣಲಿಂಗಪ್ಪಣವರ್. ಪಾಠ ಶಾಲೆಯಲ್ಲಿ ಒಟ್ಟು 50 ಮಂದಿ ರೈತರು ಭಾಗವಹಿಸಿದ್ದರು.

## ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೆಂಕಣ್ಣ ಚಿತ್ರಗಾರರು ಅದ್ಭುತ ಶಿಲ್ಪಕಲಾವಿದರು ಹನುಮಂತಪ್ಪ ಅಂಡಗಿ




ಗಂಗಾವತಿ: ಶ್ರೀಯುತ ವೆಂಕಣ್ಣ ಚಿತ್ರಗಾರ ಅವರು 50 ವರ್ಷಗಳಿಂದ ರಥ ನಿರ್ಮಿಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅವರು ಅದ್ಭುತ ಶಿಲ್ಪಕಲಾವಿದರು.

ನೂರಕ್ಕೂ ಅಧಿಕ ರಥಗಳು ಇವರ ಕೈಯಲ್ಲಿ ಅರಳಿವೆ. ಅವರು ನಿರ್ಮಿಸಿರುವ ರಥಗಳು ವಿಜಯನಗರ ಶೈಲಿಯ ವಾಸ್ತು ಪ್ರಕಾರ ಹೊಂದಿದ್ದು, ಕೇವಲ ಕೊಪ್ಪಳ ಜಿಲ್ಲೆ ಮಾತ್ರ ಸೀಮಿತವಾಗದೇ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಇವರು ನಿರ್ಮಿಸಿದ ರಥಗಳನ್ನು ಕಾಣಬಹುದು. ಪರಿಸರಸ್ನೇಹಿ, ಸುಂದರವಾದ ಮಣ್ಣಿನ ಮೂರ್ತಿಗಳನ್ನೂ ಸಹ ನಿರ್ಮಾಣ ಮಾಡುವಲ್ಲಿ ಪ್ರಸಿದ್ಧಿ ಹೊಂದಿರುವ ಇವರು ಗ್ರಾಮದೇವತೆಗಳು, ಪಲ್ಲಕ್ಕಿ, ಪೂಜಾಮಂಟಪ, ದೇವರ ತೊಟ್ಟಿಲು, ಛತ್ರಿ, ಸಿಂಹಾಸನ ಇತ್ಯಾದಿ ಕರಕುಶಲ ಕೆಲಸಗಳನ್ನು ಮಾಡಿದ್ದಾರೆ.

ಇವರ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿರುವುದು ನನಗೆ ಸಂತಸ ತಂದಿದೆ ಎಂದು ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹನುಮಂತಪ್ಪ ಅಂಡಗಿ ಚಿಲವಾಡಗಿ ಹೇಳಿದರು.


ಅವರು ಬುಧವಾರ ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಹಾಗೂ ಗಂಗಾವತಿ ತಾಲೂಕಾ ಚುಟುಕು ಸಾಹಿತ್ಯ ಪರಿಷತ್ತು ಇವುಗಳ ಸಂಯುಕ್ತಾಶ್ರಯದಲ್ಲಿ ಗಂಗಾವತಿಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೆಂಕಣ್ಣ ಚಿತ್ರಗಾರ ಅವರಿಗೆ ಸನ್ಮಾನಿಸಿ ಮಾತನಾಡಿದರು.

ಗಂಗಾವತಿ ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಅಶೋಕ ಗುಡಿಕೋಟೆ ಅವರು ಮಾತನಾಡುತ್ತಾ, ವೆಂಕಣ್ಣ ಚಿತ್ರಗಾರ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ಇಡೀ ನಮ್ಮ ಗಂಗಾವತಿಗೆ ಸಂತಸ ತಂದಿದೆ. ಅವರಿಗೆ ಮುಂದಿನ ದಿನಮಾನಗಳಲ್ಲೂ ಹಲವಾರು ಪ್ರಶಸ್ತಿಗಳು ಲಭಿಸಲಿ ಎಂದು ಶುಭ ಹಾರೈಸಿದರು.

ವೆಂಕಣ್ಣ ಚಿತ್ರಗಾರ ಅವರು ಸನ್ಮಾನ ಸ್ವೀಕರಿಸಿದ ಮಾತನಾಡುತ್ತಾ, ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಹಾಗೂ ಗಂಗಾವತಿ ತಾಲೂಕಾ ಚುಟುಕು ಸಾಹಿತ್ಯ ಪರಿಷತ್ತು ಇವುಗಳ ಸಂಯುಕ್ತಾಶ್ರಯದಲ್ಲಿ ಇಂದು ನನಗೆ ಸನ್ಮಾನಿಸಿರುವುದು ಸಂತಸ ತಂದಿದೆ.

ಈ ಸನ್ಮಾನದಿಂದ ನನ್ನ ಜವಾಬ್ದಾರಿ ಹೆಚ್ಚಿದೆ. ಮುಂದಿನ ದಿನಮಾನಗಳಲ್ಲೂ ಕೂಡಾ ನಾನು ನಮ್ಮ ಈ ಶಿಲ್ಪಕಲಾ ಕಲೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುತ್ತೇನೆ ಎಂದರು.

## ಪಿಡಿಓ ನಿಷ್ಕಾಳಜಿ: ಪ್ರತಿಭಟನೆ





ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಮೊಗಲ ಗ್ರಾಮದಲ್ಲಿ ಅಭಿವೃದ್ಧಿ ಅಧಿಕಾರಿಯಾದ ದೇವಿಂದ್ರಪ್ಪ ಬಾಲ್ಕಿ ಪಿಡಿಓ ಸರ್ ಅವ್ರು ಊರಿನ ಜನರು ಹಾಗೂ ಮಹಿಳೆಯರು ಸಮಸ್ಯೆಗಳನ್ನು ಕೇಳಲು ಹೋದರೆ ಹೆಣ್ಣುಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ಬೈದು ಮಹಿಳೆಯರಿಗೆ ಹೆದರಿಸುವುದು ಹಾಗೂ ಗೂಂಡಾಗಿರಿ ಮಾಡುವುದು ಶಾಲಾಮಕ್ಕಳು ಬಸ್ ಪಾಸ್ ಗೋಸ್ಕರ ವಾಸಸ್ಥಳ ಕೇಳಲು ಹೋದರೆ ಮಕ್ಕಳಿಗೆ ನಿಮ್ಮ ಕರ್ಕೊಂಡು ನೂರುಪಾಯಿ ತಗೊಂಡು ಬಾ ಅಂತ ಹೇಳುತ್ತಾರೆ, ಇದೇ ತರ ವರ್ತನೆಗಳ ಮಾಡಿ ಹಾಗೂ ಸರಿಯಾಗಿ ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ಹಾಜರಾಗದೆ ಸದಸ್ಯರಿಗೆ ಸರ್ಕಾರದಿಂದ ಬರುವ ಯಾವುದೇ ಮಾಹಿತಿಯನ್ನು ನೀಡದೆ ಏನಾದರೂ ಕೇಳಿದರೆ ಹಾರಿಕೆ ಉತ್ತರ ನೀಡುತ್ತಿದ್ದಾರೆ ಇದರಿಂದ ಸದರಿ ಪಿಡಿಓ ಇವರು ತಮ್ಮ ಕರ್ತವ್ಯದಲ್ಲಿ ನಿಷ್ಕಾಳಜಿ ತೋರುತ್ತಿದ್ದಾರೆ ಆದಕಾರಣ ಕೂಡಲೇ ಸಾರ್ವಜನಿಕರ ಸಮಸ್ಯೆಗಳು ಸ್ಪಂದನೆ ಮಾಡದೆ ಇರುವ ಪಿಡಿಓ ಇವರನ್ನು ಕೂಡಲೇ ವರ್ಗಾವಣೆ ಮಾಡಿ ಗ್ರಾಮ ಅಭಿವೃದ್ಧಿ ಮಾಡುವ ಒಬ್ಬ ಒಳ್ಳೆ ಅಧಿಕಾರಿಯವರನ್ನು ನಮ್ಮ ಗ್ರಾಮಕ್ಕೆ ನೇಮಿಸಬೇಕು ಒಂದು ವೇಳೆ ಇದರ ಬಗ್ಗೆ ತಾವುಗಳು ಒಂದು ವಾರದೊಳಗೆ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿಗೆ ಬೀಗಮುದ್ರೆ ಹಾಕಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಊರಿನ ಮಹಿಳೆಯರು ಹಾಗೂ ಯುವಕರು ಎಲ್ಲಾ ಸೇರಿ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯಿತಿ ಇವರಿಗೆ ದೂರನ್ನು ಸಲ್ಲಿಸಿದರು.

## ಕೊಪ್ಪಳ ಜಿಲ್ಲೆಯ ಸಾಹಿತ್ಯ, ನಾಡು-ನುಡಿ, ನೆಲ, ಜಲದ ಉಳಿವಿಗಾಗಿ ನನಗೆ ಮತ ನೀಡಿರಿ.



ಗಂಗಾವತಿ: ಕೊಪ್ಪಳ ಜಿಲ್ಲೆಯ ಸಾಹಿತ್ಯ, ನಾಡು-ನುಡಿ, ನೆಲ, ಜಲದ ಉಳಿವಿಗಾಗಿ ಕನ್ನಡದ ಪರಿಚಾರಕನಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಕೊಪ್ಪಳ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ನನಗೆ ಕೊಪ್ಪಳ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು ಹರಸಿ, ಆಶೀರ್ವದಿಸಿ, ತಮ್ಮ ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಆಯ್ಕೆ ಮಾಡಬೇಕು. ಕನ್ನಡದ ಮನಸುಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತೇನೆ. ಸರಳ ಸಜ್ಜನಿಕೆಯಿಂದ ಗುರು-ಹಿರಿಯರ ಮಾರ್ಗದರ್ಶನದಲ್ಲಿ ಕನ್ನಡಮ್ಮನ ಸೇವೆಯನ್ನು ನಿಷ್ಠೆಯಿಂದ, ನಿಷ್ಕಳಂಕತೆಯಿಂದ ಮಾಡುತ್ತಾ ಬಂದಿದ್ದೇನೆ. ಹೀಗಾಗಿ ನನ್ನ ಕನ್ನಡ ಸಾಹಿತ್ಯದ ಸೇವೆಯನ್ನು ಪರಿಗಣಿಸಿ ಮತದಾರ ಪ್ರಭುಗಳು ನನಗೆ ಮತ ನೀಡಬೇಕು. ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ನಾಡೋಜ ಡಾ. ಮಹೇಶ ಜೋಶಿಯವರು ಅನೇಕ ಕನಸುಗಳನ್ನು ಹೊತ್ತುಕೊಂಡು ಸ್ಪರ್ಧೆಗಿಳಿದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತಾಗಿ ಮಾಡುವ ಕನಸು ಕಂಡಿರುವ ಅವರು ಕನ್ನಡ ಶಾಲೆಗಳನ್ನು ಮುಚ್ಚದಂತೆ ನೋಡಿಕೊಳ್ಳುವುದು ಅವರ ಕನಸಾಗಿದೆ. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ, ಕೇಂದ್ರ ಸರ್ಕಾರ ನಡೆಸುವ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಪರೀಕ್ಷೆ ಬರೆಯುವಂತೆ ಅವಕಾಶ ಕೊಡಿಸುವಂತಹ ಕೆಲಸಗಳನ್ನು ಮಾಡುವುದರ ಜೊತೆಗೆ ಅನೇಕ ಮಹತ್ತರ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಹೀಗಾಗಿ ಕೊಪ್ಪಳ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು ಕೊಪ್ಪಳ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ನನಗೆ ಮತ್ತು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ನಾಡೋಜ ಡಾ. ಮಹೇಶ ಜೋಶಿಯವರಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಬೇಕೆಂದು ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಪ್ರಬಲ ಅಭ್ಯರ್ಥಿಯಾದ ಹನುಮಂತಪ್ಪ ಅಂಡಗಿ ಚಿಲವಾಡಗಿ ಹೇಳಿದರು.

ಅವರು ಗಂಗಾವತಿಯ ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯ ಆಜೀವ ಸದಸ್ಯರಾದ ಸುರೇಶ ಸಿಂಗನಾಳ ಅವರಿಗೆ ತಮ್ಮ ಚುನಾವಣಾ ಪ್ರಣಾಳಿಕೆಯನ್ನು ನೀಡುವುದರ ಮೂಲಕ ಮತಯಾಚಿಸಿ ಮಾತನಾಡಿದರು.

ಗಂಗಾವತಿಯ ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯ ಆಜೀವ ಸದಸ್ಯರಾದ ಸುರೇಶ ಸಿಂಗನಾಳ, ಹಿರಿಯರಾದ ಬಸವರಾಜ ಸಿಂಗನಾಳ, ಕೆ. ಬಸವರಾಜ ಕುರುಗೋಡ, ಸಲೀಂ ಮಹಮ್ಮದಖಾನ್, ಆಯಾಜ್ ಗಂಗಾವತಿ, ಶೈಲಜಾ ಹಿರೇಜಂತಕಲ್, ಕೆ.ಎಂ. ಶರಣಯ್ಯಸ್ವಾಮಿ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ


### ಕ್ರಿಯಾಶೀಲ ಸಾಹಿತಿ ಹನುಮಂತಪ್ಪ ಅಂಡಗಿ ಅವರಿಗೆ ಮತ ನೀಡಿರಿ-ಎಸ್.ವಿ.ಪಾಟೀಲ



ಗಂಗಾವತಿ: ನವೆಂಬರ್ 21ರಂದು ನಡೆಯಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಕೊಪ್ಪಳ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಕ್ರಿಯಾಶೀಲ ಸಾಹಿತಿ ಹನುಮಂತಪ್ಪ ಅಂಡಗಿ ಚಿಲವಾಡಗಿ ಅವರಿಗೆ ಕೊಪ್ಪಳ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು ತಮ್ಮ ಅಮೂಲ್ಯವಾದ ಮತ ನೀಡಿ ಪ್ರಚಂಡ ಬಹುಮತದಿಂದ ಅವರನ್ನು ಆಯ್ಕೆ ಮಾಡಬೇಕು. ಕನ್ನಡ ಸಾಹಿತ್ಯ ಪರಿಷತ್ತಿರುವುದು ಸಾಹಿತ್ಯಕ್ಕಾಗಿ, ಸಾಹಿತಿಗಳಿಗಾಗಿ. ಹೀಗಾಗಿ ಹನುಮಂತಪ್ಪ ಅಂಡಗಿ ಚಿಲವಾಡಗಿಯವರು ಸಾಹಿತಿಗಳಿದ್ದಾರೆ. ಸಾಹಿತಿಯಾದವರು ಮಾತ್ರ ಸಾಹಿತ್ಯದ ಒಳಹೊರಗನ್ನು ಅರಿತವರಾಗಿರುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ಕನಿಷ್ಠ ಇಪ್ಪತ್ತು ಪುಸ್ತಕಗಳನ್ನಾದರೂ ಹೊರತಂದಿರಬೇಕು. ಅಂತಹ ಸಾಹಿತಿಗಳು ಮಾತ್ರ ಸೂಕ್ತ ಅಭ್ಯರ್ಥಿಗಳಾಗಬಲ್ಲರು. ಹನುಮಂತಪ್ಪ ಅಂಡಗಿ ಚಿಲವಾಡಗಿ ಅವರು ಮೂವತ್ತೈದು ಪುಸ್ತಕಗಳನ್ನು ಹೊರತಂದಿದ್ದಾರೆ.

ಗಂಗಾವತಿಯಿಂದ ಸ್ಪರ್ಧಿಸಿರುವ ಶರಣೇಗೌಡ ಮಾಲಿಪಾಟೀಲರು ಸಾಹಿತಿಯಲ್ಲ. ಯಲಬುರ್ಗಾದಿಂದ ಸ್ಪರ್ಧಿಸಿರುವ ವೀರಣ್ಣ ನಿಂಗೋಜಿಯವರು ಈಗಾಗಲೇ ಒಂದು ಸಾರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹೀಗಾಗಿ ಸದಾ ಪಾದರಸದಂತೆ ನಿರಂತರವಾಗಿ ಚಟುವಟಿಕೆಯುಳ್ಳ ಹನುಮಂತಪ್ಪ ಅಂಡಗಿ ಚಿಲವಾಡಗಿ ಅವರಂತಹ ಯುವಕರು ಅಧ್ಯಕ್ಷರಾಗಿ ಆಯ್ಕೆಯಾಗಬೇಕು. ಅವರಲ್ಲಿ ವಯಸ್ಸಿದೆ, ಮನಸ್ಸಿದೆ, ಕನ್ನಡಮ್ಮನ ಸೇವೆಯನ್ನು ಮಾಡುವ ತುಡಿತವಿದೆ. ಇಂತವರ ಶಕ್ತಿಯು ಕನ್ನಡ ಸಾಹಿತ್ಯ ಪರಿಷತ್ತಿಗೆ ಅವಶ್ಯವಿದೆ ಎಂದು ಗಂಗಾವತಿಯ ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯ ಆಜೀವ ಸದಸ್ಯರಾದ ಎಸ್.ವಿ.ಪಾಟೀಲ ಗುಂಡೂರು ಹೇಳಿದರು. ಅವರು ಗಂಗಾವತಿಯ ತಮ್ಮ ನಿವಾಸದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕೊಪ್ಪಳ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಪ್ರಬಲ ಅಭ್ಯರ್ಥಿ ಹನುಮಂತಪ್ಪ ಅಂಡಗಿ ಚಿಲವಾಡಗಿ ಅವರನ್ನು ಸನ್ಮಾನಿಸಿ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕೊಪ್ಪಳ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಪ್ರಬಲ ಅಭ್ಯರ್ಥಿ ಹನುಮಂತಪ್ಪ ಅಂಡಗಿ ಚಿಲವಾಡಗಿ ಅವರು ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಾ, ನಾನು ಕನ್ನಡಮ್ಮನ ನಿಷ್ಠಾವಂತ ಸೇವಕನಿದ್ದೇನೆ. ನನ್ನ ಜೀವನದ ಬಹುಪಾಲು ಸಮಯವನ್ನು ಕನ್ನಡಮ್ಮನ ಸೇವೆಗಾಗಿ ಮೀಸಲಿಟ್ಟಿದ್ದೇನೆ. ನಾನು ಈಗಾಗಲೇ ಜಿಲ್ಲಾದ್ಯಂತ ಎರಡು ಸುತ್ತು ತಿರುಗಾಡಿ ಮತದಾರರ ಮನೆ ಬಾಗಿಲಿಗೆ ಹೋಗಿ ಮತಯಾಚಿಸಿ ಬಂದಿದ್ದೇನೆ. ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದು ಕಂಡು ನನಗೆ ಸಂತಸವಾಗುತ್ತಿದೆ. ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು ನನಗೆ ಮತ ನೀಡುವುದರ ಮೂಲಕ ಆಯ್ಕೆ ಮಾಡಬೇಕೆಂದು ಮತದಾರರಲ್ಲಿ ಮನವಿ ಮಾಡಿದರು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16



## ಹಸಿವು

ರೆಡ್ ಲೈಟ್ ದೀಪ ರಂಗೇರಿದ ಬೆಳಕು
ಹೊಟ್ಟೆಯ ಹಸಿವು ಕಮರಿದ ಕನಸು
ಹೆಣ್ಣಿನ ತನಕ್ಕಿರುವ ಬೆಲೆ ಅವಳಿಗಿಲ್ಲ
ನೋಡುಗರಿಗೆ ಕಾಣುತ್ತಿದೆ ಅವಳ
ಸೌಂದರ್ಯ ಕಾಮ ತೃಷೆ ಮಾತ್ರ.!!1!!

ಭಿಕ್ಷೆ ಬೇಡುವುದು ತಪ್ಪೊ ಸರಿಯೋ
ಅವರಿಗಿಲ್ಲ ಸಮಾಜದಲ್ಲಿ ಬೆಲೆ
ಕೇಳುವುದೆ ಹೊಟ್ಟೆಯ ಹಸಿವು
ಅನ್ನಕ್ಕಾಗಿ ಅವಮಾನ ಸರಿಯೇ
ಸಾವಿನ ಕರೆ ಬರುವ ವರೆಗೂ
ಬದುಕಬೇಕೆಂಬ ಅವಳ ಹಂಬಲ.!!2!!

ಅವಳು ಮನುಷ್ಯಳು ಎಲ್ಲರಂತೆ
ಜಗದೊಳು ಸತ್ತಿದೆ ಮನುಷ್ಯತ್ವ
ಹಸಿವಿಗಾಗಿ ಕೈಚಾಚಿ ಕೇಳಿದರೆ
ಕೆಲವರು ಹಣ ನೀಡಿ ಸಂತೈಸುವರು
ಕೆಲವರು ಅವಮಾನಿಸಿ ಹಂಗಿಸುವರು
ಆಗ ಅವಳ ಕಣ್ಣಿರು ಕೆನ್ನೆಯ ಮೇಲೆ
ಸುರಿಯುವುದು ಝುರಿಯಂತೆ.!!3!!

ಬದುಕಬೇಕೆಂಬ ಅವಳ ಹಂಬಲ
ಹೊಟ್ಟೆಯ ಹಸಿವಿಗಾಗಿ ಕೈಚಾಚಿ ಕೇಳಿದರೆ
ಬೆಲೆ ಕಟ್ಟಿಯರು ನೂರು ಇನ್ನೂರು
ಕಿತ್ತು ಬರುವುದು ಹಸಿವಿನ ಸಂಕಟ
ಹಣಕ್ಕೆ ಇರುವ ಬೆಲೆ ಅವಳ ಶೀಲಕ್ಕೆ ಇಲ್ಲ.!!4!!

ಅನ್ನದ ಹಸಿವು ಅವಳ ತಾಳ್ಮೆಯ ಸೋಲು
ಕೊಟ್ಟ ಹಣಕ್ಕೆ ಹು ಎನ್ನುತ್ತದೆ ಮನಸ್ಸು
ಮಸಣದಂತೆ ಜೀವ ವಿಲ್ಲದ ಮನಸ್ಸು ಅವಳದು
ಮರಳಿಬಾರದ ಅವಮಾನ ಹೊಡೆದ ಕನ್ನಡಿಯಂತೆ
ಮುಳ್ಳಿನ ಮೇಲೆ ಬಿದ್ದ ಬಟ್ಟೆಯಂತೆ ಅವಳ
ಜೀವ..!!5!!

ಅವಳ ನೋವು ಅನ್ನದ ಹಸಿವಿನ ಸಂಕಟ
ಬೆಂಕಿಯ ಜ್ವಾಲೆಯಂತೆ ಸಣ್ಣಗೆ ಸುಡುತ್ತಿದೆ
ಮಂಚಕ್ಕೆ ಒರಗಿ ಸುಖವ ನೀಡುವಳು
ಹಣದ ಆಸೆಗಲ್ಲ ತುತ್ತು ಅನ್ನಕ್ಕಾಗಿ
ಜೀವ ಬದುಕಬೇಕೆಂಬ ಹಂಬಲಕ್ಕಾಗಿ.!!6!!

**–ಪ.ಕಂ.ಮು.ಮಾಂತೇಶ್_ಉಜ್ಜಿನಿ**

## ಅವಳಂದವಾ?

**ಯಾವುದಕ್ಕೆ ಹೋಲಿಸಲಯ್ಯಾ**
**ಅವಳಂದವಾ?**
**ನೀರಿಗೆ ಹೋಲಿಸಲೆ?**
**ಬತ್ತುವುದಯ್ಯ**
**ಗಾಜಿಗೆ ಹೋಲಿಸಲೆ?**
**ಒಡೆಯುವುದಯ್ಯ**
**ಇನ್ನ್ಯಾವುದಕ್ಕೆ ಹೋಲಿಸಲಯ್ಯ**
**ನನ್ನವಳ?**
**ನೈಜತೆಯ ಸ್ಪರ್ಶವಿಲ್ಲದೆ,**
**ಕಲ್ಪನೆಯಲ್ಲಿ ಬಂದು ಕಾಡುವವಳನ್ನ.**

**–ಆನಂದಿ ರಾಜಶೇಖರ**

# ಮರಾಠಿ ನೆಲದಲ್ಲಿ ಕನ್ನಡ ಶಾಲೆಗಳು



ಮರಾಠಿ ಭಾಷಿಕರ ನಾಡಲ್ಲಿ ವರ್ಣರಂಜಿತವಾಗಿ ಕಂಗೊಳಿಸುತ್ತಿರುವ ನಮ್ಮ ಹೆಮ್ಮೆಯ ಕನ್ನಡ ಶಾಲೆಗಳು ಕನ್ನಡ ಭಾಷಿಕರ ಅಭಿಮಾನದ ಹಾಗೂ ಸ್ವಾಭಿಮಾನದ ಸಂಕೇತ ಅಂದರೆ ತಪ್ಪಾಗಲಾರದು, ಅದೇ ರೀತಿ ಸೋಲಾಪುರ್ ಜಿಲ್ಲೆಯಲ್ಲಿ ಬಹಳಷ್ಟು ಕನ್ನಡ ಮಾಧ್ಯಮ ಶಾಲೆಗಳು ಇಂದು ವರ್ಣರಂಜಿತವಾಗಿ ಕಂಗೊಳಿಸುತ್ತಿವೆ, ಇದಕ್ಕೆಲ್ಲ ಕಾರಣ ಜಿಲ್ಲಾ ಪರಿಷತ್ ಮುಖ್ಯ ಕಾರ್ಯಕಾರಿ ಅಧಿಕಾರಿ ಶ್ರೀ ದಿಲೀಪ ಸ್ವಾಮಿ ಸ್ವಚ್ಛ ಶಾಲೆ ಸುಂದರ ಶಾಲೆ ಎನ್ನುವ ಉಪಕ್ರಮ ಕೈಗೊಂಡಿದ್ದರಿಂದ ಇಂದು ಕನ್ನಡ ಶಾಲೆ ಅಲ್ಲದೆ ಮರಾಠಿ ಮಾಧ್ಯಮದ ಹಾಗೂ ಉರ್ದು ಮಾಧ್ಯಮ ಶಾಲೆಗಳು ಕೂಡ ಸುಂದರವಾಗಿ ಕಂಗೊಳಿಸುತ್ತಿವೆ.

ಅಕ್ಕಲಕೋಟ ತಾಲೂಕಿನ ರೇವುಗೋಳ ವಸ್ತಿ ನಾವಿಔದಗಿ ಕನ್ನಡ ಶಾಲೆಯ ಸಾಪನೆ 1995 ರಲ್ಲಿ ಆಯ್ತು ಶಾಲೆಯಲ್ಲಿ ಒಂದರಿಂದ 5ನೇ ತರಗತಿ ಇದೆ ಸ್ವಚ್ಛ ಹಾಗೂ ಸುಂದರವಾದ ಪರಿಸರ ಇದೆ ಶಾಲೆಯ ಪರಿಸರದಲ್ಲಿ ವಿವಿಧ ಜಾತಿಯ ಸಾವಿರಾರು ಮರಗಳನ್ನು ಬೆಳೆಸಲಾಗಿದೆ ಅದರಲ್ಲಿ ಬಹಳಷ್ಟು ಔಷಧೀಯ ಸಸ್ಯಗಳು ಇವೆ. ಮಕ್ಕಳಿಗೆ ಶಾಲೆಯ ಪರಿಸರದಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ ಮಕ್ಕಳಿಗಾಗಿ ಶೌಚಾಲಯ ವ್ಯವಸ್ಥೆ ಇದೆ ಸ್ವಚ್ಛ ಅಡುಗೆ ಕೋಣೆ ಸುಂದರವಾಗಿದೆ ಪ್ರಯೋಗಶಾಲೆ ಹಾಗೂ ಗ್ರಂಥಾಲಯದ ಸೌಲಭ್ಯ ಕಲ್ಪಿಸಲಾಗಿದೆ ತರಗತಿಯ ಕೊಠಡಿಗಳ ಮೇಲೆ ಅಭ್ಯಾಸಕ್ರಮ ಲೇಖನ ಹಾಗೂ ಚಿತ್ರಗಳು ತೆಗೆಯಲಾಗಿದೆ ವರ್ಗ ಕೋಣೆಗಳನ್ನು ಡಿಜಿಟಲ್ ಕ್ಲಾಸ್ ರೂಮ್ ಗಳಾಗಿ ಪರಿವರ್ತನೆ ಮಾಡಲಾಗಿದೆ ಶಾಲೆಯಲ್ಲಿ ಕಂಪ್ಯೂಟರ್ ಇದ್ದು ಮಕ್ಕಳು ಪ್ರತಿನಿತ್ಯ ಅದರ ಜ್ಞಾನ ಪಡೆದುಕೊಳ್ಳುತ್ತಿದ್ದಾರೆ ದತ್ತು ನಿಧಿ ಎಂಬ ಉಪ ಕ್ರಮ ಕೈಗೊಳ್ಳಲಾಗುತ್ತಿದೆ ಮಾಜಿ ವಿದ್ಯಾರ್ಥಿಗಳು ಸಂಘ–ಸಂಸ್ಥೆಗಳಿಂದ ಪಾಲಕರಿಂದ ವಿವಿಧ ಸಂಘಟನೆಗಳಿಂದ ನಿಧಿ ಸಂಗ್ರಹಿಸಿ ಶಾಲೆಯ ಅಭಿವೃದ್ಧಿಗಾಗಿ ಉಪಯೋಗ ಮಾಡಲಾಗುತ್ತಿದೆ ಮಕ್ಕಳ ಶಿಕ್ಷಣಿಕ ಪ್ರಗತಿ ಅತ್ಯುತ್ತಮವಾಗಿದ್ದು ಮಕ್ಕಳು ತಾಲೂಕು ಹಾಗೂ ವಲಯ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿದ್ದಾರೆ ಶಾಲೆಯಲ್ಲಿ ನವೋದಯ ಶಿಷ್ಯವೃತ್ತಿ ನಿಬಂಧ ಸ್ಪರ್ಧೆ ಭಾಷಣ ಸ್ಪರ್ಧೆ ಚಿತ್ರಕಲೆ ಭಾಷಣ ಸ್ಪರ್ಧೆ ಕ್ರೀಡಾ ಸ್ಪರ್ಧೆ ರಸಪ್ರಶ್ನೆ ಸ್ಪರ್ಧೆ ಹೀಗೆ ಹತ್ತು ಹಲವು ಉಪಕ್ರಮಗಳು ಕೈಗೊಂಡು ಗುಣಮಟ್ಟ ಶಿಕ್ಷಣ ನೀಡಲಾಗುತ್ತಿದೆ ಮುಖ್ಯ ಗುರುಗಳಾದ ಶ್ರೀ ಗಿರೀಶ ಹವಾಲ್ದಾರ್ ಹಾಗೂ ಶಿಕ್ಷಕರಾದ ಭೀಮಶಂಕರ ಪೂಜಾರಿ ಗುರುಗಳು ಬಹಳಷ್ಟು ಶ್ರಮವಹಿಸಿ ಶಿಕ್ಷಣ ನೀಡುತ್ತಿದ್ದಾರೆ ಮಕ್ಕಳ ಶೈಕ್ಷಣಿಕ ಪ್ರಗತಿ ಕಂಡು ಅಕ್ಕಲಕೋಟ ಶಿಕ್ಷಣಾಧಿಕಾರಿಗಳಾದ ಅಶೋಕ ಬಾ0ಜೆ ಹಾಗೂ ಗುರುನಾಥ್ ನರೋಣಿ ಶಾಲೆಯ ಪ್ರಗತಿಯ ಬಗ್ಗೆ ಬಗ್ಗೆ ಸಮಾಧಾನ ವ್ಯಕ್ತಪಡಿಸಿದ್ದಾರೆ ಶಾಲೆಯ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಬಸವರಾಜ ಸಿದ್ದರಾಮ ಹೆಗಡೆ ಹಾಗೂ ಉಪಾಧ್ಯಕ್ಷರಾದ ಎಲ್ಲಪ್ಪ ಪೂಜಾರಿ ಸದಸ್ಯರ ಸಹಕಾರ ಬೆಂಬಲದಿಂದ ಶಾಲೆ ಉತ್ತಮ ಸ್ಥಾನ ಪಡೆಯುತ್ತಿರುವುದು ಕನ್ನಡಿಗರ ಹೆಮ್ಮೆ ಅಭಿಮಾನ

**~ದಯಾನಂದ ಪಾಟೀಲ**
ಅಧ್ಯಕ್ಷರು
ಭಾರತೀಯ ಕನ್ನಡ ಸಾಹಿತ್ಯ ಬಳಗ
ಮಹಾರಾಷ್ಟ್ರ,

# ಶಂಕರಮಠದಲ್ಲಿ ಗುರು ದ್ವಾದಶಿ ಆಚರಣೆ



ಗಂಗಾವತಿ: ಇಲ್ಲಿನ ಶಾರದಾ ನಗರದ ಶಂಕರಮಠದಲ್ಲಿ ನಾಲ್ಕನೆಯ ವರ್ಷದ ಗುರು ದ್ವಾದಶಿಯನ್ನು ಅಪಾರ ಜನಸ್ತೋಮದ ಮಧ್ಯೆ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಬೆಳಿಗ್ಗೆ ದೇವಸ್ಥಾನದ ಪ್ರಧಾನ ಅರ್ಚಕ ಕುಮಾರಭಟ್ ಅವರಿಂದ ದತ್ತಾತ್ರೇಯ ಪಾದುಕೆಗಳಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಸೇರಿದಂತೆ ಅಷ್ಟೋತ್ತರ ಶತನಾಮಾವಳಿ ಪೂಜಾ ಕಾರ್ಯಕ್ರಮಗಳು ಸಾಂಗತವಾಗಿ ಜರುಗಿದವು.

ಬಳಿಕ ಜರುಗಿದ ಧರ್ಮಸಭೆಯನ್ನು ಉದ್ದೇಶಿಸಿ ಧರ್ಮದರ್ಶಿ ನಾರಾಯಣರಾವ್ ವೈದ್ಯ ಮಾತನಾಡಿ ದತ್ತಾತ್ರೆಯ ಅವತಾರಗಳಾದ ಶ್ರೀಪಾದ ಶ್ರೀವಲ್ಲಭ ಇಂದು ನಿಜ ಅನಂತ ಹೊಂದಿದ ದಿನ. ಅದನ್ನು ಗುರು ದ್ವಾದಶಿಯಂದು ಆಚರಿಸಲಾಗುತ್ತದೆ,


ರಾಯಚೂರ್ ಜಿಲ್ಲೆಯ ಕುರುವಪುರ ನಡುಗಡ್ಡೆಯಲ್ಲಿ ದಶಕಗಳ ಕಾಲ ವಾಸವಾಗಿ ಭಕ್ತರ ಸಂಕಷ್ಟಗಳನ್ನು ಈಡೇರಿಸುವ ಮೂಲಕ ಭಕ್ತಕೋಟಿಯನ್ನು ಉದ್ಧರಿಸುತ್ತ ಬಂದಿದ್ದಾರೆ. ಈ ಹಿಂದೆ ಶಂಕರಮಠದವತಿಯಿಂದ ದಶಕಗಳ ಕಾಲ ಹಂಪಿಯಲ್ಲಿ ಗುರು ದ್ವಾದಶಿಯನ್ನು ಆಚರಿಸುತ್ತ ಬರಲಾಗಿದೆ. ಇದಕ್ಕೆ ಪ್ರಮುಖವಾಗಿ ಭೀಮಸೇನರಾವ್‌ರವರ ಸೇವೆಯನ್ನು ಸ್ಮರಿಸಿ, ಬಳಿಕ ಶ್ರೀಮಠವಾದ ಬಳಿಕ ಗುರು ದ್ವಾದಶಿ ದತ್ತಾತ್ರೇಯ ಜಯಂತಿ ಶರನ್ನವರಾತ್ರಿ ಮಹೋತ್ಸವ, ಕಾರ್ತಿಕ ಮಹೋತ್ಸವ, ಶಂಕರ್ ಜಯಂತಿ ಹೀಗೆ ಹತ್ತು ಹಲವಾರು ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಶೃಂಗೇರಿ ಜಗದ್ಗುರುಗಳ ಅನುಗ್ರಹದಿಂದ ನಡೆಸುತ್ತ ಬರಲಾಗಿದೆ.

ಹಾಗೆಯೆ ಅಖಂಡ ಸೌಂದರ್ಯ ಲಹರಿ ಪಾರಾಯಣ ಸಪ್ತಾಹವನ್ನು ನಿನ್ನೆ ಸೋಮವಾರದಂದು ಶ್ರೀ ಮಠದಲ್ಲಿ ಸಂಪೂರ್ಣಗೊಳಿಸಲಾಯಿತು. ಶಾರದಾ ಭಜನಾ ಮಂಡಳಿ ಸೌಂದರ್ಯ ಲಹರಿ ಭಗಿನಿಯರ ಸಂಘ ಸೇರಿದಂತೆ ವಿವಿಧ ಭಜನಾ ಮಂಡಳಿಯ ಸದಸ್ಯರು ಪಾರಾಯಣದಲ್ಲಿ ಪಾಲ್ಗೊಂಡಿದ್ದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಿಕ್ಷಕಿ ವೇದಬಾಯಿ ಬಾಲಕೃಷ್ಣ, ಶ್ರೀ ದತ್ತಾತ್ರೇಯ ಗುರುಗಳ ಮಹಿಮೆ ಅವತಾರಗಳಾದ ಶ್ರೀಪಾದ ಶ್ರೀವಲ್ಲಭ ರವರ ಜನನ ಅವರಲ್ಲಿನ ಅಗಾಧ ಶಕ್ತಿಯ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ದತ್ತಾತ್ರೇಯ ಗುರುಗಳ ಭಜನೆ ಜರುಗಿತು. ಇತ್ತೀಚೆಗಷ್ಟೇ ನಿವೃತ್ತಿಗೊಂಡ ಶ್ರೀಪಾದ ಮುಧೋಳಕರ ಗೋಪಾಲ ಜೋಷಿ ರಮೇಶ್ ಅಳವಂಡಿ ಮತ್ತಿತರರನ್ನು ಆತ್ಮೀಯವಾಗಿ ಶ್ರೀಮಠದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಆರತಿ ಮಹಾಮಂಗಳಾರತಿಯೊಂದಿಗೆ ಸಂಪನ್ನಗೊಂಡಿತು.

ಈ ಸಂದರ್ಭದಲ್ಲಿ ಶೇಷಗಿರಿ ಗಡಾದ ಅನಿಲ್ ಅಳವಂಡಿಕರ್ ವೇಣುಗೋಪಾಲ್ ರಾಘವೇಂದ್ರ ಅಳವಡಿಕೆ ಬಾಲಕೃಷ್ಣ ದೇಸಾಯಿ ಕಾಶಿನಾಥ್ ಗ್ರಾಮಪುರೋಹಿತ ಮತ್ತಿತರರು ಪಾಲ್ಗೊಂಡಿದ್ದರು.

## ಪ್ರಕಾರ –ಟಂಕ



**ಭಾಷೆ**
**ಕನ್ನಡ ಭಾಷೆ**
**ಕರುನಾಡ ಒಡತಿ**
**ಸಾಹಿತಿಗಳ**
**ಕಲ್ಪನೆ ಭಾವದಲ್ಲಿ**
**ಕಾಣುತ್ತಿದೆ ಪ್ರಗತಿ**
**ಕವಿ**
**ಬರೆಯುವನು**
**ತಿಳಿದಂತೆ ಕವಿತೆ**
**ಪದಗಳನ್ನು**
**ಪೋಣಿಸಿ ಮುತ್ತಿನಂತೆ**
**ಭಾವಗಳ ಸುರಿಸಿ**
**ಸನ್ಮಾನ**
**ಸಿಗುವುದಿಲ್ಲ**
**ಎಲ್ಲಾರಿಗೂ ಯಶಸ್ಸು**
**ಶ್ರಮಿಸಿದರೆ**
**ತಕ್ಕ ಪ್ರತಿಫಲವೇ**
**ಸನ್ಮಾನದ ಸೊಗಸು**

**–ರಾಧ ಅಪರಂಜಿ.**
**ಕಲ್ಲೇದೇವರಪುರ.**



## ಹನಿ! ಅಂಜಲಿ.

ನನ್ನವಳ ನೋಡಿ ದೀಪದ ಬೆಳಕೆ ನಾಚಿ ನುಲಿಯುತ್ತಿದೆ.!
ನವಿಲಿನ ಕಣ್ಣು
ಸಿಹಿಯಾದ ಹಣ್ಣು
ತುಟಿ ತೊಂಡೆ ಹಣ್ಣು
ದೀಪದ ಬೆಳಕಲ್ಲಿ ನಾಚಿ ನಿಂತ ಹೆಣ್ಣು.!
ರಾತ್ರಿಗೆ ನಿನ್ನ
ಅಂದ ವೆ ಬೆಳಕಾಗಿ
ನಿನ್ನ ಚಂದಕ್ಕೆ
ಬೆಳಕಿಗೆ ನಾಚಿಕೆಯಾಗಿ
ನಿನ್ನ ಪರಿಮಳಕ್ಕೆ
ಮನ ಸೋತು ಗಾಳಿಯಲ್ಲಿ ನರ್ತಿಸಿದೆ ನೀ ಹಿಡಿದ ದೀಪ!
ಮುಡಿಯಲ್ಲಿ
ಇರುವ ಮಲ್ಲಿಗೆಗೆ
ನಿನ್ನ ಮೇಲೆ ಮನಸಾಗಿ
ಜೊತೆಯಲ್ಲಿ
ಇರುವ ಕಾನಕಾಂಬರ
ಕೆನ್ನೆ ಬಣ್ಣಕ್ಕೆ ಜಾರಿ
ಹೂಗಳೇ ಸೋತಿವೆ ನಿನ್ನ ಬಣ್ಣಕ್ಕೆ!
ಕಾಲ್ ಗೆಜ್ಜೆ ಸದ್ದು
ಅದಕ್ಕೆ ಸೋತ ಈ ಪೆದ್ದು
ನೀ ಮನವ ಕದ್ದು
ಸಿಹಿ ಮುತ್ತಿಗೆ ಕಾದು ಕುಳಿತೆ ಇಂದು!
ನೀ ನನ್ನ ಗೊಂಬೆ ಮುದ್ದು!
ಹೆಚ್ಚಾಗಿದೆ ಈ ಪುಟ್ಟ ಹೃದಯದ ಮಿಡಿತ
ಅಂಜು ಹನಿ
ನೀ ಬೆಳಗಿನ ಜಾವದ ಇಬ್ಬನಿ
ಅಂಜು ಹನಿ
ನೀ ಕೋಗಿಲೆಯ ಧ್ವನಿ
ಅಂಜು ಹನಿ
ನೀ ಈ ಪ್ರೀತಿ ಹೃದಯದ ಅರಮನೆಗೆ
ಮಹಾರಾಣಿ ಚಿನ್ನಿ!

**–ಕವಿ ಕಾವ್ಯ ಕಲ್ಪನೆ ಹನಿ**

ಕರುನಾಡ ಕಂದ
ಸಂಪುಟ-1 । ಸಂಚಿಕೆ-2
ದಿನಾಂಕ: 15-11-2021 । ಪುಟಗಳು: 16

## ಕೊರೊನಾ ವಾರಿಯರ್ಸ್ಗಳನ್ನು ಸತ್ಕರಿಸುವುದು ನಮ್ಮ ಸೌಭಾಗ್ಯ ವಚನಾನಂದ ಶ್ರೀಗಳು



ಅಥಣಿ: ಅಳಿಯುವದು ಕಾಯಾ ಉಳಿಯುವದು ಕಾರ್ಯಾ ಎಂಬಂತೆ ಮನುಷ್ಯ ಮಾಡಿದ ಕಾರ್ಯ ಮಾತ್ರ ಉಳಿಯುತ್ತದೆ .ಮನುಷ್ಯ ಬದುಕಿರುವಾಗ ಸಮಾಜಮುಖಿಯಾದ ಕಾರ್ಯ ಮಾಡಬೇಕೆಂದು ಶ್ವಾಸಗುರು ಪಂಚಮಸಾಲಿ ಹರಿಹರ ಪೀಠದ ಜಗದ್ಗುರು ವಚನಾನಂದ ಶ್ರೀ ಗಳು ಹೇಳಿದರು.

ಅಥಣಿ ಪಟ್ಟಣದಲ್ಲಿ ವಿಜಯ ನೇಮಗೌಡರ ನಿವಾಸದಲ್ಲಿ ಸ್ಪಂದನ ಮತ್ತು ಭೂಮಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಶ್ವಾಸಗುರು ವಚನಾನಂದ ಶ್ರೀಗಳ ಸಾನಿಧ್ಯದಲ್ಲಿ ಆರೋಗ್ಯ'ಪುರಸಭೆ, ಹಾಗೂ ಪೊಲೀಸ್ ಇಲಾಖೆ, ಪತ್ರಕರ್ತರು ತಾಲ್ಲೂಕು ಆಡಳಿತದ ವಿವಿಧ ವಾರಿಯರ್ಸ್ ಗಳನ್ನು ಹಾಗೂ ಸಾಧಕರನ್ನು ಪುರಸ್ಕರಿಸಲಾಯಿತು.

ಈ ವೇಳೆ ಮಾತನಾಡಿದ ಪೂಜ್ಯ ವಚನಾನಂದ ಶ್ರೀ ಗಳು ಕೊರೊನಾ ಭೀಕರ ಮಹಾಮಾರಿ ಲಕ್ಷಾಂತರ ಜನರನ್ನು ಕೊವಿಡ್ ಬಲಿಪಡೆದು ಕೊಂಡಿದೆ. ಅಥಣಿಯಲ್ಲಿ ಅನೇಕ ಶರಣ ಶರಣೆಯರನ್ನು ಬಲಿಪಡೆದುಕೊಂಡಿದೆ ನಮ್ಮೆಲ್ಲರನ್ನು ಅನೇಕ ಜನ ಇಂದು ಅಗಲಿದ್ದಾರೆ, ಅವರೆಲ್ಲರ ಆತ್ಮಕ್ಕೆ ಶಾಂತಿಕೊರೊಣ .ಪರಮಾತ್ಮನ ದಯೆಯಿಂದ ನಾವೆಲ್ಲ ಬದುಕಿ ಉಳಿದಿದ್ದೇವೆ ಇಂದು ಕೊರೊನ ವಾರಿಯರ್ಸ್ ಗಳಾಗಿ ಅನೇಕ ಜನ ಸೇವೆಗೈದಿರುವವರನ್ನು ಸತ್ಕರಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಅಥಣಿ ಕೊರೊನಾ ವಾರಿಯರ್ಸ್ ಹಾಗೂ ಅನ್ನ ದಾಸೋಹಿಗಳ ಸೇವೆ ಅವಿಸ್ಮರಣೀಯ ಶಿವಯೋಗಿ ಬರುವ ದಿನಮಾನದಲ್ಲಿ ತಮಗೆಲ್ಲ ಉತ್ತಮವಾದ ಆರೋಗ್ಯ ಆಯುಷ್ಯ ಸಕಲ ಸಂಪತ್ತು ದಯಪಾಲಿಸಲಿ ಎಂದು ಹಾರೈಸಿದರು

ಯುವ ಮುಖಂಡ ಶಿವು ಗುಡ್ಡಾಪುರ ಮಾತನಾಡುತಾ ಪೂಜ್ಯರ ಸಮ್ಮುಖದಲ್ಲಿ ಇಂದು ಕೊರೊನಾ ವಾರಿಯರ್ಸ್ ಗೆ ಸತ್ಕಾರ ಸಮಾರಂಭ ನೆರವೇರಿಸುತ್ತಿರುವದು ಔಚಿತ್ಯಪೂರ್ಣವಾಗಿದೆ. ವಿವಿಧ ಇಲಾಖೆಯ ಅಧಿಕಾರಿಗಳು ಸಲ್ಲಿಸಿದ ಸೇವೆಗೆ ಗೌರವಿಸುವ ಸುಸಂದರ್ಭ ಒದಗಿದೆ ಎಂದು ಹೇಳಿದರು.

ಸತ್ಕಾರ ಸ್ವೀಕರಿಸಿದ ತಾಲ್ಲೂಕು ವೈದ್ಯಾಧಿಕಾರಿ ಡಾ॥ ಬಸಗೌಡ ಕಾಗೆ ಮಾತನಾಡುತಾ ಕೊರೊನಾದಂತ ಭೀಕರ ಪರಿಸ್ಥಿತಿಯಲ್ಲಿ ಎಲ್ಲ ಇಲಾಖೆಗಳೆ ಅವಿರತ ಶ್ರಮ ಹಾಗೂ ಅಥಣಿ ಜನತೆಯ ವಿಶಾಲ ಮನಸ್ಸಿನ ಸಹೃದಯದ ಸಹಕಾರದಿಂದ ಕಠೀಣ ಕೊರೊನಾ ನಿರ್ವಹಣೆ ಸಾಧ್ಯವಾಯಿತು. ಕೊರೊನಾ ಬಗ್ಗೆ ಹೆದರದೆ ಎಚ್ಚರಿಕೆಯಿಂದ ಇರಬೇಕೆಂದು ಸಲಹೆ ನೀಡಿದರು.

ಪುರಸಭೆ ಕಾರ್ಮಿಕ ಸಂಘದ ಅದ್ಯಕ್ಷ ರವಿ ಕಾಂಬಳೆ ಮಾತನಾಡಿ ಎಲ್ಲರ ಸಹಕಾರದಿಂದ ಒಂದು ಕ್ರಿಕೆಟ್ ಟೀಮ್ ನಂತೆ ಒಂದಾಗಿ ಕಾರ್ಯ ನಿರ್ವಹಣೆ ಮಾಡಿರುವ ತೃಪ್ತಿ ನಮ್ಮೆಲ್ಲರಿಗೂ ಇದೆ ಇಂತಹ ಸನ್ಮಾನಗಳಿಂದ ನಮ್ಮ ಜವಾಬ್ದಾರಿ ಇನ್ನಷ್ಟು ಹೆಚ್ಚಿಸುತ್ತದೆ, ಹೆಚ್ಚು ಜನಮುಖಿ ಕೆಲಸ ಮಾಡಲು ಪ್ರೋತ್ಸಾಹಾಸಿದಂತೆ ಆಗುತ್ತದೆ ಎಂದರು.

ಈ ವೇಳೆ ಕೊರೊನಾ ವಾರಿಯರ್ಸ್ ಗಳಾದ ಡಾ ಬಸಗೌಡ ಕಾಗೆ ಡಾ ಸಿ ಹೆಚ್ ಪಾಟೀಲ್ ಡಾ ವಾಲೀಕಾರ, ಪೊಲೀಸ್ ಇಲಾಖೆಯ ವಿಜಯ ನರಟ್ಟಿ,ಪ್ರಕಾಶ ಪಾಟೀಲ, ರವಿ ಕಾಂಬಳೆಯವರನ್ನು ಜೊತೆಗೆ ಕೊರೋನಾ ಸಂದರ್ಭದಲ್ಲಿ ನಿರಂತರವಾಗಿ ಅನ್ನದಾಸೋಹ ನೆರವೇರಿಸುವ ಮೂಲಕ ಮಹಾನ್ ಸೇವೆಗೈದ ಅನ್ನ ದಾಸೋಹಿಗಳಾದ ರಾಮನಗೌಡ ಪಾಟೀಲ್ ಕಾಂಗ್ರೆಸ ಮುಖಂಡ ಧರೆಪ್ಪ ಠಕ್ಕಣ್ಣವರ, ವಿಜಯಗೌಡ ನೇಮಗೌಡ ಇವರನ್ನು ಸತ್ಕರಿಸಲಾಯಿತು

ಈ ವೇಳೆ ಡಾ ಸಿ ಎಚ್ ಪಾಟೀಲ್, ಅವಿನಾಶ ನಾಯಿಕ, ಪರಶುರಾಮ ನಂದೇಶ್ವರ, ಮುತ್ತಣ್ಣ ಸಂತಿ, ಚಿದಾನಂದ ಶೇಗುಣಿಸಿ, ಅಶೋಕ ನೇಮಗೌಡ,ಮುರಗೇಶ ಬಾಣಿ, ನೀಲಾಂಬಿಕಾ ನೇಮಗೌಡ, ಮಂಜುನಾಥ ಚೌಗಲಾ ,ಮುರುಗೆಪ್ಪಾ ನೇಮಗೌಡ ,ಮಲ್ಲಪ್ಪ ಹಂಚಿನಾಳ,ಶಿವಾನಂದ ಮಟ್ಟೆ ಪ್ಪನವರ ಸೇರಿದಂತೆ ಅನೇಕರಿದ್ದರು.

## "ಪದವಿ ದೊಡ್ಡದಲ್ಲ ಪ್ರತಿಭೆ ದೊಡ್ಡದು"




ಪ್ರತಿಭೆ ಎಂದರೆ ಹೊಳಪು,ಬುದ್ಧಿಶಕ್ತಿ,ಕೌಶಲ,ಬಹುಮುಖ ಚಿತ್ತ, ಕಾಂತಿ,ಚುರುಕು ಬುದ್ಧಿ, ಹೊಸ ಹೊಸ ಭಾವನೆಗಳನ್ನು ಮೂಡಿಸುವ ಒಂದು ಬಗೆಯ ಭಾವನೆಯ ಶಕ್ತಿ. ಈ ಪ್ರತಿಭೆ ಎನ್ನುವುದು ಸ್ಮೃತಿ-ಮತಿ-ಬುದ್ಧಿ-ಪ್ರಜ್ಞೆ-ಪ್ರತಿಭೆ ಹೀಗೆ ಈ ಐದು ಶಬ್ದಗಳ ಅರ್ಥವ್ಯಾಪ್ತಿಯನ್ನೊಳಗೊಂಡು ಭೂತ-ಭವಿಷ್ಯ-ವರ್ತಮಾನಗಳನ್ನು ಸಮನ್ವಯ ಮಾಡುವಂತಹ ಒಂದು ಬೌದ್ಧಿಕ ಕ್ರಿಯೆ. ಮತ್ತು ತರ್ಕಶಕ್ತಿಗೆ ಮೀರಿದ್ದು ಪ್ರತಿಭೆ.

ಈ ಪ್ರತಿಭೆ ಎಂಬುದು ಪರಿಶ್ರಮದಿಂದ ಬರಬೇಕೇ ಹೊರತು,ಹಣದಿಂದ ಕೊಂಡುಕೊಳ್ಳುವುದಲ್ಲ.ನಾವು ಬದುಕಿನಲ್ಲಿ ಪದವಿ, ಪ್ರಶಸ್ತಿ,ಪುರಸ್ಕಾರ, ಬಹುಮಾನ,ಉಡುಗೊರೆ ಹೀಗೆ ಹಲವಾರು ಉಪಕರಣಗಳಿ ಮಾರು ಹೋಗದೆ.ನಮ್ಮ ನಮ್ಮ ಪ್ರತಿಭೆ ಪರಿಶ್ರಮದಿಂದ ಪ್ರಾಮಾಣಿಕವಾಗಿ ನಿಷ್ಠೆಯಿಂದ ಕೆಲಸ ಮಾಡುತ್ತ ಹೋದರೆ ನಿಜವಾದ ಪ್ರತಿಭೆ ಎಲ್ಲೇ ಇದ್ದರೂ, ಹೇಗೆ ಇದ್ದರು ಎಷ್ಟೇ ಕಷ್ಟವಿದ್ದರ, ಏನೇ ಅಡಚಣೆಗಳು ಬಂದರು ತಲುಪಬೇಕಾದ ಗುರಿ ತಲುಪಿಯೇ ತಲುತ್ತದೆ.ಇದು ಸತ್ಯ. ಹೀಗಿರುವಾಗ ನಾವೆಂದೂ ಪದವಿ ಪುರಸ್ಕಾರಕ್ಕೆ ಲೆಕ್ಕಿಸದೆ ನಮ್ಮ ಸ್ವಪ್ರತಿಭೆಯಿಂದ ಬೆಳೆದರೆ ನಮ್ಮ ಹಿಂದೆ ಪದವಿ-ಪ್ರಶಸ್ತಿ-ಪುರಸ್ಕಾರ ನಮ್ಮನ್ನು ಹುಡಿಕಿಕೊಂಡು ಬರುತ್ತವೆ.

ಸಾಮಾನ್ಯವಾಗಿ ಪ್ರತಿಭೆ ಎನ್ನುವುದು ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ರೀತಿಯಲ್ಲಿ ವಿಶೇಷ ರೂಪವಾಗಿ ತಾಳಿರುತದೆ.ಆದರೆ ಅದು ಕೆಲವರನ್ನು ಮಾತ್ರ ಕೈ ಬಿಸಿ ಕರೆಯುತ್ತದೆ.ಎನ್ನುವುದು ನಾವು ಪರಾಮರ್ಶಿಸಿ ನೋಡಿದಾಗ ನಮ್ಮೊಳಗಿನ ಪ್ರತಿಭೆ ಯಾವುದೇ ಆಗಿರಲಿ.ಅದನ್ನು ಆದಷ್ಟು ನಾವು ಹೊರ ಹಾಕಲು ಯತ್ನಿಸಬೇಕು.ಅಂದಾಗಲೇ ನಮ್ಮಲ್ಲಿರು ಪ್ರತಿಭೆ ಎಂತಹದೆಂದು ತಿಳಿಯಲು ಸಾಧ್ಯವಾಗುತ್ತದೆ.ಹಾಗಾಗಿ ನಾವು ಸತತ ನಿರಂತರ ಪ್ರಯತ್ನದಿಂದ ನಮ್ಮ ಗುರಿಯತ್ತ ನಡೆದು ಸಾಧನೆಯ ಕಡೆಗೆ ಮುನ್ನುಗ್ಗಿದಾಗಲೇ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ,

ನಮ್ಮ ಪ್ರತಿಭೆಗೆ ತಕ್ಕ ಬೆಲೆ ಸಿಗುವುದು.ಪ್ರತಿಭೆ ಎಂಬುದರಲ್ಲಿ ತೊಂಬತ್ತೊಂಬತ್ತು ಪಾಲು ಬೇವರು,ಒಂದು ಪಾಲು ಸ್ಫೂತಿ9 ಎನ್ನುತ್ತಾರೆ. ಅದಕ್ಕೆ ನಾವು ಜೀವನದಲ್ಲಿ ಯಶಸ್ಸು ಏನಾದರೂ ಕಾಣಬೇಕೆಂದರೇ "ಪ್ರಯತ್ನ"ವನ್ನು ಮಿತ್ರನನ್ನಾಗಿ ಮಾಡಿಕೊಳ್ಳಬೇಕು.ಆದರೆ ನಮ್ಮ ಪ್ರಯತ್ನ ಸುಮ್ಮನೆ ಪ್ರಯತ್ನವಾಗಿರಬಾರದು ಬದಲಾಗಿ ಅದು ಪ್ರಾಮಾಣಿಕ ಪಯತ್ನವಾಗಿರಬೇಕು.ನಾವು ಬದುಕಿನಲ್ಲಿ ಏನಾದರೂ ಸಾಧಿಸಲು ಹೊರಟು ನಿಂತಾಗ, ನಾನು ಗೆದ್ದೆ ಗೆಲ್ಲುತ್ತೆನೆ ಎಂದೂ ಬಂದ ಮೇಲೆ ಸೋಲಿಗೂ ಸಿದ್ದನಾಗಿರಬೇಕು.

ನಾವು ಸಾಗುವ ದಾರಿ ಹೇಗೆ ಇದ್ದರು, ಇಡುವ ಹೆಜ್ಜೆ ಸರಿಯಾಗಿದ್ದರೆ ನಮಗೆ ಗೆಲುವು ಕಟ್ಟಿಟ್ಟ ಬುತ್ತಿ.ಅದಕ್ಕೆ ಹೇಳುತ್ತಾರೆ ಈ ಸಾಧನೆ ಎನ್ನುವುದು ಸಾಧಕರ ಸೊತ್ತು ಹೊರತು,ಸೊಮಾರಿಗಳ ಸೊತ್ತು ಅಲ್ಲ."ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ,ಆದರ್ಶ ಇಲ್ಲದೆ ಬದುಕಿದರೆ ಬದುಕಿಗೆ ಅವಮಾನ" ಎಂಬ ಮಾತಿನಂತೆ "ಪ್ರಯತ್ನ ಎಂಬುದು ಬೀಜದ ಹಾಗೆ ಬಿತ್ತುತ್ತಲೇ ಇರಿ. ಚಿಗುರಿದರೆ ಮರವಾಗಲಿ.

ಇಲ್ಲವೆಂದರೆ ಮಣ್ಣಿಗೆ ಗೊಬ್ಬರವಾಗಲಿ"ಎಂಬ ವಾಣಿಯಂತೆ ನಮ್ಮೊಳಗಿನ ಪ್ರತಿಭೆಯಿಂದ ಪ್ರಯತ್ನ, ಪ್ರಯತ್ನದಿಂದ ಸತ್ಕಾರ-ಪದವಿ-ಪುರಸ್ಕಾರ.ಹೀಗಿರುವಾಗ ನಾವು ಎಷ್ಟೆ ಪಯತ್ನ ಪಟ್ಟು ಎದ್ದು-ಬಿದ್ದು,ಸೋತು-ಗೆದ್ದು ನೋವು-ನಲಿವಿನಿಂದ ನಮ್ಮ ಪ್ರತಿಭೆಯನ್ನು ಪ್ರಾಮಾಣಿಕವಾಗಿ ಜಗದ ತುಂಬು ಅನಾವರಣಗೊಳಿಸಲು ಮುಂದಾದಾಗ ಯಾವ ಪದವಿ ಪುರಸ್ಕಾರ ಹುಡುಕುವ ಅವಶ್ಯಕತೆ ಇಲ್ಲ, ಬದಲಾಗಿ ಅವು ನಮ್ಮನ್ನ ಯಾವುದೊ ಒಂದು ರೂಪದಲ್ಲಿ ನಮ್ಮನ್ನು ಬಂದು ಸೇರುತ್ತವೆ.

ನನ್ನರ್ಥದಲ್ಲಿ "ಪದವಿ ದೊಡ್ಡದಲ್ಲ ಪ್ರತಿಭೆ ದೊಡ್ಡದು" ಯಾಕೆಂದರೆ "ಪ್ರತಿಭೆ ಇದ್ದಲ್ಲೆ ತಾನೆ ನಮಗೆ ಪದವಿ,ಪುರಸ್ಕಾರ ದೊರೆಯುವುದು.ಒಟ್ಟಾರೆಯಾಗಿ ಹೇಳುವುದಾದರೆ ನಮ್ಮೊಳಗಿನ ಪ್ರತಿಭೆಗಿಂತ ಯಾವ ಪದವಿ ಪುರಸ್ಕಾರ ದೊಡ್ಡದಲ್ಲ.ಈ ನಮ್ಮ ಪ್ರತಿಭೆಗೆ ತಕ್ಕ ಫಲ ಮತ್ತು ಯಶಸ್ಸು ಏಕಾಏಕಿ ಘಟಿಸುವ ಪವಾಡವಲ್ಲ,ಶ್ರದ್ಧೆ ಶ್ರಮಗಳಿದ್ದಲ್ಲಿ ಸ್ವಾಭಾವಿಕವಾಗಿ ಬಂದು ನಿಲ್ಲುವ ಸಂಗತಿ.ಹಾಗಾಗಿ ನಮ್ಮ ಪ್ರಯತ್ನ ಮತ್ತು ಪ್ರತಿಭೆ ಗುಟ್ಟಾಗಿರಲಿ,ಗೆದ್ದ ಮೇಲೆ ಸಂಭ್ರಮ ಜಗತ್ತಿಗೆ ಮುಟ್ಟುವಂತಾಗಲಿ.ಇಂತಹ ಪ್ರತಿಭೆ ನಮ್ಮದಾಗಲಿ,ನಾವಾಗಲಿ ಎನ್ನುವ ದೃಢ ನಿರ್ಧಾರ ನಮ್ಮ ಕೈಯಲ್ಲಿರಲಿ.

**- ಡಾ.ರಾಕೇಶ ಹಿರೇಮನಿ(ರಾವಿಹಿ)**
ಯುವಕವಿ

## ಕವಿತೆ



ಅದೊಂದು ಅಮೂರ್ತ ರೂಪ
ಅದು ಉದಯವಾದೊಡನೆ
ಹೃದಯವರಳುವುದು
ಅದೊಂದು ಅನಂತ ಮೋಹ
ಅದು ಮುಳುಗುವುದೆಂದೊಡೆನೆ
ಹೃದಯಕಳಚುವುದು
ಅದು ಮಹಾಕಾಂತಕ್ಷೇತ್ರ
ನಿರ್ಗಮನವಿಲ್ಲದ
ಬರೀ ಆಗಮನದ ಹಾದಿ
ಬೇರಿಲ್ಲದ ಮಹಾವೃಕ್ಷ
ರಕ್ತ ಹೀರಿ ಹಿಗ್ಗುವುದು
ಅದು ಪಂಚಭೂತಗಳ ಅಭೂತ
ಅದು ಇಲ್ಲದಿದ್ದರ ಇರುವಿಕೆ
ಅದು ಬಾರದಿದ್ದರ ಬರುವಿಕೆ
ಅದೊಂದು ಮಹಾರಂಗ
ಅಲ್ಲಿ ಜಗದ ನಗ್ನ ನರ್ತನ
ಅಲಕ್ಷಿಸುವನ ಆರಾಧಿಸುವವನ
ಆರಾಧ್ಯ ರೂಪ ಕಥನ
ಅದು ಪ್ರೇಕ್ಷಕನ ಪ್ರತಿರೂಪ ಚಲನ
ಅದು ಬೇರೇನೂ ಅಲ್ಲಾ
ಬರೀ ಕವನ

**--ಮೌನೇಶ್ ನವಲಹಳ್ಳಿ.**

('ಪ್ರೀತಿಯ ಜಾತ್ರಿ' ಕವನ ಸಂಕಲನದ ಆಯ್ದ ಕವಿತೆ)

**ಸ್ಥಳಿಯ ಸುದ್ದಿ ಹಾಗೂ ಜಾಹಿರಾತಿಗಾಗಿ ಸಂಪರ್ಕಿಸಿ**
**99863 66909**
**karunadakanda33@gmail.com**

## ಬದುಕ ಸಂತೆ

**ಜಗತ್ತೇ ಒಂದು ಮಾಯೆಯ ಕಂತೆ**
**ಆ ಜಗತ್ತಿನಲಿ ನಡೆಯುತಿದೆ ಜೀವನದ ಸಂತೆ**
**ಕಪಟತನಕ್ಕೆ ಈ ಸಂತೆಯಲ್ಲಿ ಬೆಲೆಯಿದೆಯಂತೆ**
**ನಿಜತನಕ್ಕೆ ಈ ಸಂತೆಯಲ್ಲಿ ಬೆಲೆತರಬೇಕಂತೆ**
**ಸ್ವಾರ್ಥಕ್ಕಾಗಿ ಸಕಲವನ್ನು ಮಾರಟ್ಟಕ್ಕಿಟ್ಟಿದ್ದಾರಂತೆ**
**ನಿಸ್ವಾರ್ಥಿಯಾಗಿರುವವರಿಗಿಲ್ಲವಂತೆ ಭಾವನೆಗಳ ಕಂತೆ**
**ಪರರ ಜೀವನದಲಿ ಆಟ ಆಡುವುದು ಮೋಜಿದ್ದಂತೆ**
**ಈ ಸಂತೆಯಲ್ಲಿ ಮೃದುಮನಕ್ಕೆ ನೋವು**
**ದೊರೆತಿದೆಯಂತೆ**
**ಬಣ್ಣ ಬಣ್ಣದ ಮಾತುಗಳಿಂದ ರಂಗೇರಿದೆ ಈ ಸಂತೆ**
**ಅಸತ್ಯವೇ ಜಗದ ಸಂತೆಯಲಿ**
**ಬಂಡವಾಳವಾಗಿದೆಯಂತೆ**
**ನಗು ಮುಖವಾಡ ಧರಿಸಿಕೊಂಡು ನಟನೆ**
**ಮಾಡುವರಂತೆ**
**ನೀಜತನ ತಿಳಿದು ನೋವೇ ವೆಚ್ಚವಾಗಿ ಉಳಿದಿದೆಯಂತೆ**
**ಈ ಸಂತೆಯಲಿ ಕಂಬನಿ ಲಾಭದ ಹಾಗೆ**
**ದೊರಕಿದೆಯಂತೆ**
**ಮಾಯಾ ಸಂತೆಯಲಿ ಮನಕೆ ಅನುಭವವಾಗಿದೆಯಂತೆ**
**ಸಕಲವನ್ನು ತಿಳಿಸಿದ ಸಂತೆಗೆ ನಾ ಶರಣಾಗಿ ಬಿಟ್ಟೆ**
**ಬದುಕ ಸಂತೆಯಲಿ ಮೌನದಿ ನಾ ಪಯಣ ಬೆಳೆಸಿದೆ.**

**-ಸಿದ್ದು ಕುಂಬಾರ (ಹಾಲಗಿ)**
GFGC ಕಾಲೇಜು ಹಾವೇರಿ

## ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಿ ಪ್ರಾಣೇಶ



**2021ನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಿ ಪ್ರಾಣೇಶ ಅವರಿಗೆ ಶ್ರೀರಾಮನಗರದ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆಯಿಂದ ಆತ್ಮೀಯ ಸನ್ಮಾನ.**

ಗಂಗಾವತಿ: 2021ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಗಂಗಾವತಿ ಬಿ.ಪ್ರಾಣೇಶ ಅವರಿಗೆ ಶ್ರೀರಾಮನಗರದ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆಯಿಂದ ಆತ್ಮೀಯವಾಗಿ ಇಂದು ಸನ್ಮಾನಿಸಲಾಯಿತು ಎಂದು ಸೇವಾ ಸಂಸ್ಥೆಯ ಅಧ್ಯಕ್ಷರಾದ ಜಿ. ರಾಮಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದರು.

ಅವರು ಗಂಗಾವತಿ ನಗರದ ಪ್ರಾಣೇಶ ಅವರ "ಬೀಚಿ ನಿಲಯ" ದಲ್ಲಿ ಸನ್ಮಾನ ಮಾಡುವ ಸಂದರ್ಭದಲ್ಲಿ ಮಾತನಾಡುತ್ತಿದ್ದರು. ಗಂಗಾವತಿ ಪ್ರಾಣೇಶ ಅವರು ಸುಮಾರು 25 ವರ್ಷಗಳಿಂದ ಹಾಸ್ಯ ಭಾಷಣಕಾರರಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು, ನಮ್ಮ ಗಂಗಾವತಿಗೆ ಹೆಮ್ಮೆ ತಂದಿದ್ದಾರೆ.

ಅಲ್ಲದೇ ಇವರು ಎಲ್ಲರ ಮನೆ ಮನೆಗಳಲ್ಲಿ ಹಾಸ್ಯದ ಭಾಷಣಕಾರರಾಗಿ ಜಗತ್ಪ್ರಸಿದ್ಧಿಯಾಗಿದ್ದಾರೆ. ಇಂತಹ ಕಲಾವಿದರನ್ನು ಗುರುತಿಸಿ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು, ಅತೀವ ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿ, ಈ ಶುಭ ಸಂದರ್ಭದಲ್ಲಿ ಪ್ರಾಣೇಶ ದಂಪತಿಗಳಿಗೆ ವಿವಾಹ ವಾರ್ಷಿಕೋತ್ಸವವನ್ನು ಏರ್ಪಡಿಸುವ ಮೂಲಕ ದಂಪತಿಗಳಿಗೆ ಫಲ ತಾಂಬೂಲಾದಿಗಳನ್ನು ವಿತರಿಸಲಾಯಿತು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಸಾಪ ಜಿಲ್ಲಾ ಕಾರ್ಯದರ್ಶಿ ಬಸವರೆಡ್ಡಿ ಆಡೂರು, ಕಸಾಪ ಗಂಗಾವತಿ ತಾಲೂಕಾ ಅಧ್ಯಕ್ಷ ಎಸ್.ಬಿ ಗೊಂಡಬಾಳ, ವಿಶ್ವಭಾರತಿ ಶಾಲೆಯ ಅಧ್ಯಕ್ಷರಾದ ಶ್ರವಣಕುಮಾರ ರಾಯ್ಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕರುನಾಡ ಕಂದ
ಸಂಪುಟ-1 । ಸಂಚಿಕೆ-2
ದಿನಾಂಕ: 15-11-2021 । ಪುಟಗಳು: 16



## ಕಾಣದಂತೆ ಮಾಯವಾದನೋ!

# ರಾಜಕುಮಾರ ಅಪ್ಪು

ಸಂಗ್ರಹ:
ವೀರೇಶ್ ಸವಡಿ

ಪುನೀತ್ ರಾಜ್‌ಕುಮಾರ್ (17 ಮಾರ್ಚ್ 1975 – 29 ಅಕ್ಟೋಬರ್ 2021)ರವರು ಭಾರತೀಯ ಚಿತ್ರನಟ, ಹಿನ್ನೆಲೆ ಗಾಯಕ ಮತ್ತು ದೂರದರ್ಶನ ನಿರೂಪಕ ಮತ್ತು ಸಿನಿಮಾ ನಿರ್ಮಾಪಕ. ಇವರು 29 ಕನ್ನಡ ಚಲನಚಿತ್ರಗಳಲ್ಲಿ ನಾಯಕ ನಟನಾಗಿ ನಟನೆ ಮಾಡಿದ್ದಾರೆ. ಬಾಲ್ಯದಲ್ಲಿ ತನ್ನ ತಂದೆ ರಾಜಕುಮಾರ್ ಅಭಿನಯದ ಚಿತ್ರಗಳಲ್ಲಿ ಬಾಲನಟನಾಗಿ ಕಾಣಿಸಿಕೊಂಡಿದ್ದರು.

ವಸಂತ ಗೀತ (1980), ಭಾಗ್ಯದಾತ (1981), ಚಲಿಸುವ ಮೋಡಗಳು (1982), ಎರಡು ನಕ್ಷತ್ರಗಳು (1983), ಭಕ್ತ ಪ್ರಹ್ಲಾದ, ಯಾರಿವನು ಮತ್ತು ಬೆಟ್ಟದ ಹೂವು (1985) ಚಿತ್ರಗಳಲ್ಲಿ ನಟನೆಗೆ ಮೆಚ್ಚುಗೆ ಪಡೆದರು.

ಅವರ ಬೆಟ್ಟದ ಹೂವು ಚಿತ್ರದ 'ರಾಮು' ಪಾತ್ರಕ್ಕೆ ಅತ್ಯುತ್ತಮ ಬಾಲ ಕಲಾವಿದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೆ ಪಾತ್ರರಾಗಿದ್ದರು. ಚಲಿಸುವ ಮೋಡಗಳು ಮತ್ತು ಎರಡು ನಕ್ಷತ್ರಗಳು ಚಿತ್ರಕ್ಕಾಗಿ ಕರ್ನಾಟಕ ರಾಜ್ಯ ಅತ್ಯುತ್ತಮ ಬಾಲ ಕಲಾವಿದ ಪ್ರಶಸ್ತಿಯನ್ನು ಪಡೆದರು. ಪುನೀತ್ ಅವರು 2002ರಲ್ಲಿ ಅಪ್ಪು ಚಿತ್ರದಲ್ಲಿ ಮೊದಲ ಬಾರಿಗೆ ನಾಯಕನಟನಾಗಿ ಸಿನಿ ಮಾರಂಗದ ಪಯಣ ಶುರುಮಾಡಿದರು.

ಅವರಿಗೆ ಅಭಿಮಾನಿಗಳು "ಪವರ್‌ಸ್ಟಾರ್" ಎಂದು ಕರೆಯುತ್ತಾರೆ. ಅವರು ನಟಿಸಿದ ಅಭಿ (2003), ಆಕಾಶ್ (2005), ಅರಸು (2007), ಮಿಲನ (2007), ಜಾಕೀ (2010), ಹುಡುಗರು (2011), ಅಣ್ಣಾ ಬಾಂಡ್ (2012) ಮತ್ತು ಪವರ್ (2014) ಸೇರಿದಂತೆ ಇತರೆ ಹಲವು ಚಲನಚಿತ್ರಗಳು ಯಶಸ್ವಿಯಾಗಿ ಪ್ರದರ್ಶನಗೊಂಡವು.

ಅವರು ಕನ್ನಡ ಚಿತ್ರರಂಗದ ಪ್ರಮುಖ ನಾಯಕನಟರಲ್ಲಿ ಒಬ್ಬರಾಗಿದ್ದರು. ಅವರು ಪ್ರಸಿದ್ಧ ಟಿವಿ ಆಟದ ಕಾರ್ಯಕ್ರಮ ಹೂ ವಾಂಟ್ಸ್ ಟು ಬಿ ಮಿಲಿಯನೇರ್ ಕನ್ನಡ ಆವೃತ್ತಿ ಕನ್ನಡದ ಕೋಟ್ಯಧಿಪತಿಯ ನಿರೂಪಣೆ ಮಾಡಿದ್ದಾರೆ.[2] ಕರ್ನಾಟಕ ರಾಜ್ಯಸರ್ಕಾರದ ವಿವಿಧ ಂ ು ೋ ೀ ಜ ನ ೆಗ ೆಳ ರಾಯಭಾರಿಯಾಗಿ, ಸಾಮಾಜಿಕ ಜಾಗೃತಿಯ ಪ್ರಚಾರಕರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

### ವೈಯಕ್ತಿಕ ಜೀವನ

ಪುನೀತ್ ರವರು(ಮೊದಲ ಹೆಸರು ಲೋಹಿತ್) ಡಾ.ರಾಜ್‌ಕುಮಾರ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ದಂಪತಿಗೆ ಚೆನ್ನೈನಲ್ಲಿ ಜನಿಸಿದರು. ಇವರು ರಾಜಕುಮಾರ್ ದಂಪತಿಯ ಐದನೇ ಮತ್ತು ಕಿರಿಯ ಮಗ. ಇವರ ಸಹೋದರರಾದ ಶಿವರಾಜ್‌ಕುಮಾರ್ (ನಟ) ಮತ್ತು ರಾಘವೇಂದ್ರ ರಾಜ್‌ಕುಮಾರ್ (ನಟ) ಅವರು ಜನಪ್ರಿಯ ನಟರು. ಪುನೀತ್ ಆರು ವರ್ಷ ವಯಸ್ಸಿನವನಾಗಿದ್ದಾಗ, ಅವರ ಕುಟುಂಬ ಮೈಸೂರಿಗೆ ಸ್ಥಳಾಂತರಗೊಂಡಿತು.

ಅವರು ಹತ್ತು ವರ್ಷ ವಯಸ್ಸಿನವನಾಗುವವರೆಗೂ ಅವರ ತಂದೆ ಅವರನ್ನು ಮತ್ತು ಅವರ ಸಹೋದರಿ ಪೂರ್ಣಿಮಾರನ್ನು ಚಲನಚಿತ್ರದ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಪುನೀತ್ 1 ಡಿಸೆಂಬರ್ 1999ರಂದು ಚಿಕ್ಕಮಗಳೂರಿನ ಅಶ್ವಿನಿ ರೇವಂತ್ ರನ್ನು ವಿವಾಹವಾದರು. ಇವರಿಗೆ ಇಬ್ಬರು ಪುತ್ರಿಯರಿದ್ದಾರೆ.

### ನಟನಾ ವೃತ್ತಿ ಜೀವನ

#### 1976 – 1989: ಬಾಲ ನಟನಾಗಿ

ನಿರ್ದೇಶಕ ವಿ. ಸೋಮಶೇಖರ್ ಅವರು ಪುನೀತ್ ಅವರನ್ನು ಆರು ತಿಂಗಳ ಮಗುವಾಗಿದ್ದಾಗ ಪ್ರೇಮದ ಕಾಣಿಕೆ (1976) ಮತ್ತು ಆರತಿ ಚಿತ್ರದಲ್ಲಿ ತೆರೆಯ ಮೇಲೆ ತೋರಿಸಿದರು.

ಇದರ ನಂತರ ಪುನೀತ್ ಒಂದು ವರ್ಷದವನಾಗಿದ್ದಾಗ, ವಿಜಯ್ ಅವರ ಕೃಷ್ಣಮೂರ್ತಿ ಪುರಾಣಿಕ್ ಅವರ ಕಾದಂಬರಿಯನ್ನು ಆಧರಿಸಿದ ಅದೇ ಹೆಸರಿನ ಸನಾದಿ ಅಪ್ಪಣ್ಣ (1977) ಚಿತ್ರದಲ್ಲಿ ಕಾಣಿಸಿಕೊಂಡಿದ್ದರು.[

ತಾಯಿಗೆ ತಕ್ಕ ಮಗ (1978) ಮತ್ತೆ ವಿ. ಸೋಮಶೇಖರ್ ನಿರ್ದೇಶಿಸಿದ ಚಿತ್ರ ಮತ್ತು ಅವರ ತಂದೆ ನಟಿಸಿದ ಚಿತ್ರ. ಎರಡು ವರ್ಷಗಳ ನಂತರ, ನಿರ್ದೇಶಕ ದೊರೈ–ಭಗವಾನ್ ಪುನೀತ್ ಅವರನ್ನು ವಸಂತ ಗೀತೆ (1980) ನಲ್ಲಿ ಶ್ಯಾಮ್ ಪಾತ್ರದಲ್ಲಿ ಹಾಕಿದರು.

ಇದರ ನಂತರ ಕೆ. ಎಸ್. ಎಲ್. ಸ್ವಾಮಿಯವರ ಪೌರಾಣಿಕ ನಾಟಕ ಭೂಮಿಗೆ ಬಂದ ಭಗವಂತ (1981, ಭಗವಂತ ಕೃಷ್ಣನಾಗಿ ಕಾಣಿಸಿಕೊಂಡರು) ಮತ್ತು ಬಿ. ಎಸ್. ರಂಗ ಅವರ ಭಾಗ್ಯವಂತ (1982) ದಲ್ಲಿ, ಅವರು ಟಿ. ಜಿ. ಲಿಂಗಪ್ಪ ಸಂಯೋಜಿಸಿದ ತಮ್ಮ ಮೊದಲ ಜನಪ್ರಿಯ ಗೀತೆ "ಬಾನ ದಾರಿಯಲ್ಲಿ ಸೂರ್ಯ" ವನ್ನು ಧ್ವನಿಮುದ್ರಿಸಿದರು.

ಅದೇ ವರ್ಷ, ಅವರು ತಮ್ಮ ತಂದೆಯೊಂದಿಗೆ ಎರಡು ಜನಪ್ರಿಯ ಚಿತ್ರಗಳಲ್ಲಿ (ಚಲಿಸುವ ಮೋಡಗಳು ಮತ್ತು ಹೊಸ ಬೆಳಕು) ಕಾಣಿಸಿಕೊಂಡರು. ಚಲಿಸುವ ಮೋಡಗಳು ಮತ್ತು ಹೊಸ ಬೆಳಕು ಚಿತ್ರಕ್ಕಾಗಿ ಅವರು ತಮ್ಮ ಮೊದಲ ಅತ್ಯುತ್ತಮ ಬಾಲ ಕಲಾವಿದ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು(ಪುರುಷ) ಪಡೆದರು

ಅವರು ಎರಡು ಪೌರಾಣಿಕ ಚಲನಚಿತ್ರಗಳಲ್ಲಿ ಕಾಣಿಸಿಕೊಂಡರು: ಭಕ್ತ ಪ್ರಹ್ಲಾದ: ಮುಖ್ಯಪಾತ್ರವಾದ ಪ್ರಹ್ಲಾದನಾಗಿ ಮತ್ತು ಎರಡು ನಕ್ಷತ್ರಗಳು ಚಿತ್ರಕ್ಕಾಗಿ ತಮ್ಮ ಎರಡನೇ ಅತ್ಯುತ್ತಮ ಬಾಲ ಕಲಾವಿದ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು(ಪುರುಷ) ಪಡೆದರು.

1984ರಲ್ಲಿ, ಪುನೀತ್ ರಾಜ್‌ಕುಮಾರ್ ಅವರೊಂದಿಗೆ ಥ್ರಿಲ್ಲರ್ ಯಾರಿವನು ಚಿತ್ರದಲ್ಲಿ ನಟಿಸಿದರು ಮತ್ತು ರಾಜನ್–ನಾಗೇಂದ್ರ ಬರೆದ "ಕಣ್ಣಿಗೆ ಕಾಣುವ" ಹಾಡನ್ನು ಹಾಡಿದರು. ಬಾಲನಟನಾಗಿ ಅವರಿಗೆ ದೊಡ್ಡ ಬ್ರೇಕ್ ಕೊಟ್ಟ ಎನ್. ಲಕ್ಷ್ಮೀನಾರಾಯಣ ನಿರ್ದೇಶಿಸಿದ ಮತ್ತು ಶೆರ್ಲಿ ಎಲ್. ಅರೋರಾ ಅವರ ವಾಟ್ ತೆನ್, ರಾಮೆನ್? ಕಾದಂಬರಿ ಆಧಾರಿತ 1985 ರ ನಾಟಕ ಬೆಟ್ಟದ ಹೂವಿನಲ್ಲಿ ಮುಗ್ಧ ರಾಮು ಪಾತ್ರಕ್ಕಾಗಿ ಪುನೀತ್ ಅವರು 33 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಅತ್ಯುತ್ತಮ ಬಾಲ ಕಲಾವಿದ ಪ್ರಶಸ್ತಿಯನ್ನು ಪಡೆದರು.

ಅವರ ಹದಿಹರೆಯದ ಆರಂಭದಲ್ಲಿ, ಅವರು ಶಿವ ಮೆಚ್ಚಿದ ಕಣ್ಣಪ್ಪ (1988) ನಲ್ಲಿ ತನ್ನ ಹಿರಿಯ ಸಹೋದರ ಶಿವರಾಜ್‌ಕುಮಾರ್ (ನಟ)ನೊಂದಿಗೆ ಯುವ ಕಣ್ಣಪ್ಪನಾಗಿ ಕಾಣಿಸಿಕೊಂಡರು. ಪುನೀತ್ ಅವರು ಬಾಲನಟನಾಗಿ ಕೊನೆಯ ಪಾತ್ರವು ಪರಶುರಾಮ್ (1989) ಚಿತ್ರದಲಿ ಅವರ ತಂದೆಯೊಂದಿಗೆ ಆಗಿತ್ತು.

#### 2002-2007: ನಾಯಕನಾಗಿ ಪದಾರ್ಪಣೆ ಮತ್ತು ಮಹತ್ವದ ತಿರುವು

ಅಜಯ್ ಮೆಹರ್ ರಮೇಶ್ ನಿರ್ದೇಶನದ ಮತ್ತು ರಾಕ್ಲೈನ್ ವೆಂಕಟೇಶ್ ನಿರ್ಮಿಸಿದ 2006 ರಲ್ಲಿ ಬಿಡುಗಡೆಯಾದ ಪುನೀತ್ ಅವರ ಏಕೈಕ ಚಿತ್ರ, ಇದು 2003 ರ ತೆಲುಗು ಒಕ್ಕಡು ಚಿತ್ರದ ರಿಮೇಕ್, ಅವರು ಈ ಚಿತ್ರದಲ್ಲಿ ವೃತ್ತಿಪರ ಕಬಡ್ಡಿ ಆಟಗಾರನ ಪಾತ್ರವನ್ನು ನಿರ್ವಹಿಸಿದರು, ಅವರು ಈ ಚಿತ್ರದಲ್ಲಿ ತಮ್ಮ ಚಿಕ್ಕಪ್ಪನಿಂದ (ಪ್ರಕಾಶ್ ರಾಜ್ ನಿರ್ವಹಿಸಿದ) ಅಪಾಯದಲ್ಲಿದ್ದ ಹುಡುಗಿಯನ್ನು ರಕ್ಷಿಸುತ್ತಾರೆ. ಈ ಚಿತ್ರಗಳ ಪರಿಣಾಮವಾಗಿ, ಪುನೀತ್ ಅವರನ್ನು ಸ್ಯಾಂಡಲ್‌ವುಡ್‌ನ ಪವರ್‌ಸ್ಟಾರ್ ಎಂದು ಕರೆಯಲಾಯಿತು.

ಅರಸು, ಅವರ ನಿರ್ಮಾಣದ, ಮಹೇಶ್ ಬಾಬು ನಿರ್ದೇಶಿಸಿದ 2007 ರಲ್ಲಿ ಬಿಡುಗಡೆಯಾದ ಮೊದಲ ಚಿತ್ರ, ಇದರಲ್ಲಿ ಅವರು ಹೊರದೇಶದಿಂದ ಬಂದ ಉದ್ಯಮಿಯಾಗಿ ನಟಿಸಿದರು, ಈ ಚಿತ್ರದಲ್ಲಿ ಅವರು ಪ್ರೀತಿಸುವ ಮಹಿಳೆಗಾಗಿ ತಮ್ಮ ಸಂಪತ್ತನ್ನು ತ್ಯಜಿಸುತ್ತಾರೆ. ಅವರ ಅಭಿನಯಕ್ಕಾಗಿ, ಅವರು ತಮ್ಮ ಮೊದಲ ಫಿಲ್ಮ್‌ಫೇರ್ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದರು.

ಆ ವರ್ಷ ಪುನೀತ್ ಅವರ ಬಿಡುಗಡೆಯಾದ ಇನ್ನೊಂದು ಚಿತ್ರ, ಪ್ರಕಾಶ್‌ರ ಸಾಂಪ್ರದಾಯಿಕ ಕೌಟುಂಬಿಕ ಮೌಲ್ಯಗಳ ಚಿತ್ರ ಮಿಲನ. ನಟಿ ಪಾರ್ವತಿ (ನಟಿ) ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಈ ಚಿತ್ರದಲ್ಲಿ ಅವರು ಆಕಾಶ್ ಎಂಬ ರೇಡಿಯೋ ಜಾಕಿಯಾಗಿ ನಟಿಸಿದ್ದಾರೆ. ಈ ಚಿತ್ರಕ್ಕಾಗಿ ಅವರು ತಮ್ಮ ಮೊದಲ ಅತ್ಯುತ್ತಮ ನಟ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದರು.

#### 2008-2015: ಇತರೆ ಚಲನಚಿತ್ರಗಳು

ಪುನೀತ್ 2008 ರಲ್ಲಿ ಎರಡು ಚಲನಚಿತ್ರಗಳನ್ನು ಬಿಡುಗಡೆ ಮಾಡಿದರು: ಡಿ. ರಾಜೇಂದ್ರ ಬಾಬು ಅವರ ಬಿಂದಾಸ್ ಮತ್ತು



ಏಪ್ರಿಲ್ 2002 ರಲ್ಲಿ, ಪುನೀತ್ ಅವರು ಗುರುಕಿರಣ್ ಸಂಗೀತದ, ಪೂರಿ ಜಗನ್ನಾಥ್ ನಿರ್ದೇಶನದ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣದ ಮಸಾಲಾ ಚಲನಚಿತ್ರ ಅಪ್ಪು ಮೂಲಕ ಚಲನಚಿತ್ರಕ್ಕೆ ಪ್ರಮುಖ ಪಾತ್ರದಲ್ಲಿ ಪಾದಾರ್ಪಣೆ ಮಾಡಿದರು,

ಅದು ನಟಿ ರಕ್ಷಿತಾ ಅವರ ಮೊದಲ ಚಲನಚಿತ್ರ ಕೂಡ ಆಗಿತ್ತು. ಇದರಲ್ಲಿ ಅವರು ಕಾಲೇಜು ಹುಡುಗನ ಪಾತ್ರವನ್ನು ನಿರ್ವಹಿಸಿದರು, ಬಾಕ್ಸ್ ಆಫೀಸ್‌ನಲ್ಲಿ ಯಶಸ್ವಿಯಾಯಿತು ಮತ್ತು ವಿಮರ್ಶಕರು ಅವರ ನೃತ್ಯ ಕೌಶಲ್ಯವನ್ನು ಶ್ಲಾಘಿಸಿದರು. ಈ ಸಿನಿಮಾದಲ್ಲಿ ಪುನೀತ್ ಅವರು ಉಪೇಂದ್ರ ಸಾಹಿತ್ಯದ ಮತ್ತು ಗುರುಕಿರಣ್ ಸಂಗೀತದ "ತಾಲಿಬಾನ್ ಅಲ್ಲಾ ಅಲ್ಲಾ" ಹಾಡನ್ನು ಹಾಡಿದ್ದಾರೆ. ಚಿತ್ರದ ಯಶಸ್ಸು ತೆಲುಗುನಲ್ಲಿ (ಈಡಿಯಟ್ (2003) ಮತ್ತು ತಮಿಳಿನಲ್ಲಿ (ದಮ್ (2003) ರೀಮೇಕ್‌ಗಳನ್ನು ಹುಟ್ಟುಹಾಕಿತು.

ಪುನೀತ್ ನಂತರ ದಿನೇಶ್ ಬಾಬು ಅವರ ಅಭಿ (2003) ನಲ್ಲಿ ತಾಯಿಗೆ ತಕ್ಕ ಮಗ ಹಾಗೂ ಕಾಲೇಜು ಹುಡುಗನಾಗಿ ಕಾಣಿಸಿಕೊಂಡರು. ಇದು ನೈಜ ಕಥೆಯನ್ನು ಆಧರಿಸಿದ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಿಸಿದ ಚಿತ್ರ, ಪುನೀತ್ ಅವರು ನಟಿ ರಮ್ಯಾ ಅವರೊಂದಿಗೆ ನಟಿಸಿದ್ದಾರೆ. ಇದು ನಟಿ ರಮ್ಯಾ ಅವರ ಮೊದಲ ಚಿತ್ರ.

ಮೆಹರ್ ರಮೇಶ್ ಅವರ ವೀರ ಕನ್ನಡಿಗ ಪುನೀತ್ ಅವರ 2004 ರಲ್ಲಿ ಬಿಡುಗಡೆ ಆದ ಮೊದಲ ಚಿತ್ರ. ಪುರಿ ಜಗನ್ನಾಥ್ ಬರೆದಿರುವ ಈ ಚಿತ್ರವನ್ನು ಏಕಕಾಲದಲ್ಲಿ ತೆಲುಗಿನಲ್ಲಿ ಆಂಧ್ರವಾಲಾ ಎಂಬ ಹೆಸರಿನಲ್ಲಿ ನಿರ್ಮಿಸಲಾಯಿತು, ಇದರಲ್ಲಿ ಎನ್. ಟಿ. ರಾಮರಾವ್ ಜೂನಿಯರ್ ರವರು ಪ್ರಮುಖ ಪಾತ್ರದಲ್ಲಿ ಇದ್ದರು. ಈ ಚಿತ್ರದಲ್ಲಿ ಚೊಚ್ಚಲ ನಟಿ ಅನಿತಾ ಜೋಡಿಯಾಗಿದ್ದರು. ಈ ಚಿತ್ರ ಅವರ ನೃತ್ಯ ಮತ್ತು ಸಾಹಸ ಕೌಶಲ್ಯಗಳನ್ನು ಪ್ರದರ್ಶಿಸಿತು. ಚಿತ್ರದ ಹಿಂಸಾಚಾರ ಮತ್ತು ಕಳಪೆ ಕಥಾವಸ್ತು ಬಗ್ಗೆ ಟೀಕಿಸಿದರೂ, ಅದು ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯೊಯಿತು.

ಪುನೀತ್ ನಂತರ ಎಸ್. ನಾರಾಯಣ್ ಅವರ ಕೌಟುಂಬಿಕ ನಾಟಕ ಮೌರ್ಯದಲ್ಲಿ ನಟಿಸಿದರು, ಇದು ರವಿತೇಜ ನಟಿಸಿದ ಮತ್ತು ಪೂರಿ ಜಗನ್ನಾಥ್ ಬರೆದ ತೆಲುಗಿನ ಅಮ್ಮಾ ನನ್ನ ಓ ತಮಿಳ ಅಮ್ಮಾಯಿಯ ರಿಮೇಕ್. ಈ ಚಿತ್ರ ಅವರನ್ನು ನಟನಾಗಿ ಖ್ಯಾತಿಯನ್ನು ಹೆಚ್ಚಿಸಿತು.

ಅವರು 2005 ರಲ್ಲಿ ಎರಡು ಚಲನಚಿತ್ರಗಳನ್ನು ಬಿಡುಗಡೆ ಮಾಡಿದರು. ಮಹೇಶ್ ಬಾಬು ಅವರ ಆಕಾಶ್, ಪುನೀತ್ ಮತ್ತು ರಮ್ಯಾ ಅವರನ್ನು (ಅಭಿಯಿಂದ) ಮತ್ತೆ ಜೊತೆ ಸೇರಿಸಿತು ಮತ್ತೆ ಅವರು ವೀರ ಶಂಕರ್ ಅವರ ಸಾಹಸ ಚಿತ್ರ ನಮ್ಮ ಬಸವದಲ್ಲಿ ಗೌರಿ ಮುಂಜಾಲ್ ಅವರೊಂದಿಗೆ ಕಾಣಿಸಿಕೊಂಡರು. ಅವರು ಎರಡೂ ಚಿತ್ರಗಳಲ್ಲಿ ಹಾಡುಗಳನ್ನು ರೆಕಾರ್ಡ್ ಮಾಡಿದ್ದಾರೆ.

ಪ್ರಕಾಶ್ ಅವರ ವಂಶಿ. 2009ರಲ್ಲಿ ಬಿಡುಗಡೆ ಆದ ಮೊದಲ ಚಿತ್ರ ರಾಜ್ – ದಿ ಶೋಮ್ಯಾನ್(ನಿರ್ದೇಶನ ಪ್ರೇಮ್) ಟೀಕೆಗೆ ಒಳಗಾಗಿದ್ದರೂ, ಪುನೀತ್ ಅವರ ಅಭಿನಯವನ್ನು ಪ್ರಶಂಸಿಸಲಾಯಿತು. ಪ್ರಿಯಾಮಣಿ ಜೊತೆಗಿನ ಅವರ ಇನ್ನೊಂದು ಚಿತ್ರ ರಾಮ್, ತೆಲುಗು ಹಿಟ್ ರೆಡಿ ಚಿತ್ರದ ರಿಮೇಕ್ ಆಗಿತ್ತು.

ಪುನೀತ್ 2010ರಲ್ಲಿ ಒಂದರ ಹಿಂದೊಂದು ಹಿಟ್‌ಗಳೊಂದಿಗೆ ಜನಮನಕ್ಕೆ ಮರಳಿದರು. ಮೊದಲನೆ ಚಿತ್ರ ಜಾಕೋಬ್ ವರ್ಗೀಸ್ ಅವರ ರಾಜಕೀಯ ಥ್ರಿಲ್ಲರ್ ಪೃಥ್ವಿ, ಇದರಲ್ಲಿ ಅವರು ಭ್ರಷ್ಟಾಚಾರದ ವಿರುದ್ಧ ಹೋರಾಡುವ ಬಳ್ಳಾರಿ ಜಿಲ್ಲೆಯ ಅಧಿಕಾರಿಯಾಗಿ ನಟಿಸಿದ್ದಾರೆ.

ಅವರ ಮುಂದಿನ ಬಿಡುಗಡೆಯು ದುನಿಯಾ ಸೂರಿ ನಿರ್ದೇಶಿಸಿದ ಸಾಹಸ ಚಿತ್ರ ಜಾಕಿ, ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಯಿತು. 2011 ರಲ್ಲಿ, ಪುನೀತ್ ಅವರು ಕೆ. ಮಾದೇಶ್ ಅವರ ಹುಡುಗರು, ತಮಿಳಿನಲ್ಲಿ ನಾಡೋಡಿಗಳು ನ ರಿಮೇಕ್ ನಲ್ಲಿ ನಟಿಸಿದರು, ಅವರ ಅಭಿನಯಕ್ಕಾಗಿ, ಅವರು ತಮ್ಮ ಎರಡನೇ ಫಿಲ್ಮ್‌ಫೇರ್ ಮತ್ತು ಮೊದಲ ಸೀಮಾ (ಎಸ್,ಐ,ಐ,ಎಮ್, ಎ) ಅತ್ಯುತ್ತಮ ನಟ ಪ್ರಶಸ್ತಿಗಳನ್ನು ಪಡೆದರು. ಪುನೀತ್ ಅವರ ಮುಂದಿನ ಚಿತ್ರ ಯೋಗರಾಜ್ ಭಟ್ ಅವರ ಪರಮಾತ್ಮ, ಪುನೀತ್ ಅವರ ಪಾತ್ರವು ಈ ಚಿತ್ರದಲ್ಲಿ ಪ್ರೀತಿಯನ್ನು ಹುಡುಕುತ್ತದೆ.

ಅವರು ಮತ್ತೆ 2012 ರಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಿಸಿದ ಆಕ್ಷನ್ ಚಿತ್ರ ಅಣ್ಣಾ ಬಾಂಡ್‌ನಲ್ಲಿ ಸೂರಿ ಅವರೊಂದಿಗೆ ಕೆಲಸ ಮಾಡಿದರು. ಅವರ ಅಭಿನಯಕ್ಕಾಗಿ, ಅವರು ಸುವರ್ಣ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದರು ಮತು ಐಫಾ (ಐ,ಐ,ಎಫ್,ಎ) ಪ್ರಶಸಿಗೆ ನಾಮನಿರ್ದೇಶನಗೊಂಡರು. ಪುನೀತ್ ಅವರ ಮುಂದಿನ ಚಿತ್ರ ಸಮುತಿರಕನಿ ನಿರ್ದೇಶನದ ಯಾರೇ ಕೂಗಾಡಲಿ, ಇದು ತಮಿಳಿನ ಪೊರಾಲಿಯ ರಿಮೇಕ್.

2014 ರಲ್ಲಿ, ಪುನೀತ್ ಎರಿಕಾ ಫೆರ್ನಾಂಡಿಸ್ ಅವರೊಂದಿಗೆ ಜಯಂತ್ ಸಿ. ಪರಂಜಿ ಅವರ ನಿನ್ನಿಂದಲೇ ಚಿತ್ರದಲ್ಲಿ ನಟಿಸಿದರು. ಅವರು ಈ ಚಿತ್ರದಲ್ಲಿ ನ್ಯೂಯಾರ್ಕ್ ಮೂಲದ ನ್ಯೂಯಾರ್ಕ್ ಸಾಹಸ ಉತ್ಸಾಹಿಯಾಗಿ ಅವರ ಅಭಿನಯವು ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟಿತ್ತು. ಚಿತ್ರವು ಗಲ್ಲಾಪೆಟ್ಟಿಗೆಯಲ್ಲಿ ವಿಫಲವಾಯಿತು.

ಪುನೀತ್ ಅವರ ಮುಂದಿನ ಚಿತ್ರ ಕೆ. ಮಾದೇಶ್ ಅವರ ಪವರ್, ಇದು ತೆಲುಗಿನ ದೂಕುಡು ಚಿತ್ರದ ರಿಮೇಕ್ ಆಗಿದೆ, ಈ ಚಿತ್ರದಲ್ಲಿ ಅವರು ಮೊದಲ ಬಾರಿಗೆ ತ್ರಿಶಾ ಜೊತೆ ಕಾಣಿಸಿಕೊಂಡಿದ್ದರು. ಅವರು ಈ ಚಿತ್ರದಲ್ಲಿ ಕಠಿಣ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದರು. ಈ ಚಿತ್ರ ಆರು ದಿನಗಳಲ್ಲಿ ದಾಖಲೆಯ ?22 ಕೋಟಿ (?220 ಮಿಲಿಯನ್) ಗಳಿಸಿತ್ತು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16



2015 ರಲ್ಲಿ, ಅವರು ಬಿ. ಎಮ್. ಗಿರಿರಾಜ್ ಅವರ ಮೈತ್ರಿ ಚಿತ್ರದಲ್ಲಿ ಪುನೀತ್ ನಟ ಮತ್ತು ಕನ್ನಡದ ಕೋಟ್ಯಧಿಪತಿಯ ನಿರೂಪಕರಾಗಿ ನಟಿಸಿದ್ದರು, ಇದರಲ್ಲಿ ಮೋಹನ್ ಲಾಲ್ ಮತ್ತು ಭಾವನಾ ಕೂಡ ನಟಿಸಿದ್ದಾರೆ. ಆ ವರ್ಷ ಬಿಡುಗಡೆ ಆದ ಇನ್ನೊಂದು ಚಿತ್ರ ಅದಾ ಶರ್ಮಾ ಮತ್ತು ಅಂಜಲಿ ಜೊತೆ ನಟಿಸಿರುವ ಪವನ್ ಒಡೆಯರ್ ಅವರ ಸಾಹಸ ಚಿತ್ರ ರಣ ವಿಕ್ರಮ.

### 2016–2021

ಮಾರ್ಚ್ 2016 ರಲ್ಲಿ, ಪುನೀತ್ ಎಂ. ಸರವಣನ್ ಅವರ ಚಕ್ರವ್ಯೂಹ ಮತ್ತು ದುನಿಯಾ ಸೂರಿ ಅವರ ದೊಡ್ಡಮನೆ ಹುಡ್ಗ ಚಿತ್ರಗಳಿಗೆ ಕೆಲಸ ಮಾಡಿದರು. 2017 ರಲ್ಲಿ, ಅವರು ಸಂತೋಷ್ ಆನಂದ್ರಾಮ್ ಅವರ ರಾಜಕುಮಾರ ಚಿತ್ರದಲ್ಲಿ ಕಾಣಿಸಿಕೊಂಡರು, ಇದು ಬಾಕ್ಸ್ ಆಫೀಸ್‌ನಲ್ಲಿ ಎಲ್ಲಾ ದಾಖಲೆಗಳನ್ನು ಮುರಿದು ಮುಂಗಾರು ಮಳೆಯ ಹಿಂದಿನ ದಾಖಲೆಯನ್ನು ಹಿಂದಿಕ್ಕಿ ಸಾರ್ವಕಾಲಿಕ ಅತಿ ಹೆಚ್ಚು ಗಳಿಕೆ ಮಾಡಿದ ಕನ್ನಡ ಭಾಷೆಯ ಚಲನಚಿತ್ರವಾಯಿತು.

ಅವರು ಅಂಜನಿ ಪುತ್ರದಲ್ಲಿ ರಶ್ಮಿಕಾ ಮಂದಣ್ಣ ಜೊತೆ ಕೆಲಸ ಮಾಡಿದರು, ಇದು ತಮಿಳಿನ ಪೂಜಾಯ್ ಚಿತ್ರದ ರೀಮೇಕ್. ಅನುಪ್ ಭಂಡಾರಿ ನಿರ್ದೇಶನದ ರಾಜರಥ ಚಿತ್ರದಲ್ಲಿ ಪುನೀತ್ ರಾಜ್ ಕುಮಾರ್ ನಿರೂಪಕನ ಪಾತ್ರದಲ್ಲಿ ನಟಿಸಿದ್ದಾರೆ. 2019 ರಲ್ಲಿ ಅವರ ಚಲನಚಿತ್ರ ನಟಸಾರ್ವಭೌಮ ಬಿಡುಗಡೆಯಾಯಿತು ಮತ್ತು ವಾಣಿಜ್ಯವಾಗಿ ಯಶಸ್ಸನ್ನು ಸಹ ಗಳಿಸಿತು.

### ಇತರೆ ಕೆಲಸಗಳು

ಮೈಸೂರಿನ ಶಕ್ತಿಧಾಮ ಆಶ್ರಮದಲ್ಲಿ ಪುನೀತ್ ತನ್ನ ತಾಯಿಯೊಂದಿಗೆ ಪರೋಪಕಾರದಲ್ಲಿ ತೊಡಗಿಸಿಕೊಂಡಿದ್ದರು ಮತ್ತು ಬೆಂಗಳೂರು ರಾಯಲ್ಸ್, ಪ್ರೀಮಿಯರ್ ಫುಟ್ಸಲ್ ತಂಡವನ್ನು ಹೊಂದಿದ್ದರು.

### ಹಿನ್ನೆಲೆ ಗಾಯನ

ಪುನೀತ್ ತನ್ನ ತಂದೆಯಂತೆಯೇ ವೃತ್ತಿಪರ ಗಾಯನದಲ್ಲಿ ಉತ್ತಮ ಸಾಧನೆ ಮಾಡಿದ ಕೆಲವೇ ಕೆಲವು ನಟರಲ್ಲಿ ಒಬ್ಬರು. ಅವರು ಅಪ್ಪುವಿನಲ್ಲಿ ಒಬ್ಬರೇ ಹಾಡಿದರು ಮತ್ತು ವಂಶಿ ಚಿತ್ರದಲ್ಲಿ "ಜೊತೆ ಜೊತೆಯಲ್ಲಿ" ಗೀತೆಯನ್ನು ಹಾಡಿದರು. ಅವರು ಜಾಕಿಯಲ್ಲಿ ವೇಗದ ಹಾಡನ್ನು ಹಾಡಿದರು ಮತ್ತು ಅವರ ಸಹೋದರ ಶಿವರಾಜ್‌ಕುಮಾರ್ ಅವರ ಲವ ಕುಶ ಮತ್ತು ಮೈಲಾರಿ ಚಿತ್ರಗಳಲ್ಲಿ ಹಾಡಿದರು.

ಬಿ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿರುವ ಅಕಿರಾ ಚಿತ್ರಕ್ಕಾಗಿ ಪುನೀತ್ ರಾಜ್ ಕುಮಾರ್ ಅವರು "ಕಣ್ಣ ಸಣ್ಣೆ ಇಂದಲೇನೆ" ಹಾಡನ್ನು ಹಾಡಿದ್ದಾರೆ. ಅವರ ಹೋಮ್–ಪ್ರೊಡಕ್ಷನ್ ಹೊರತುಪಡಿಸಿ ಇತರ ಹಾಡುಗಳಿಗೆ ಅವರ ಸಂಭಾವನೆ ಸೇವಾ ಕಾರ್ಯಗಳಿಗೆ ಹೋಗುತ್ತದೆ ಎಂದು ಅವರು ಬಹಿರಂಗಪಡಿಸಿದ್ದಾರೆ

### ಕಿರುತೆರೆಯಲ್ಲಿ

2012 ರಲ್ಲಿ, ಪುನೀತ್ ಕನ್ನಡದ ಕೋಟ್ಯಾಧಿಪತಿಯ ಮೊದಲ ಸೀಸನ್ ಅನ್ನು ಆಯೋಜಿಸಿದರು, ಇದು ಬ್ರಿಟಿಷ್ ಶೋ ಹೂ ವಾಂಟ್ಸ್ ಟು ಬಿ ಎ ಮಿಲಿಯನೇರ್? ನ ಕನ್ನಡ ಆವೃತ್ತಿ. ಇದರ ಮೊದಲ ಸೀಸನ್ ಯಶಸ್ವಿಯಾಯಿತು ಮತ್ತು ಎರಡನೇ ಸೀಸನ್ ಗೆ ನಾಂದಿ ಹಾಡಿತು. ಸುವರ್ಣ ವಾಹಿನಿಯು ಉದಯ ಟಿವಿಯನ್ನು 19 ವರ್ಷಗಳಲ್ಲಿ ಮೊದಲ ಬಾರಿಗೆ ಮೊದಲ ಸ್ಥಾನದಿಂದ ಕೆಳಗಿಳಿಸಲು ಎರಡನೇ ಸೀಸನ್‌ನ ಯಶಸ್ಸನ್ನು ಪ್ರಮುಖ ಕಾರಣವಾಗಿತ್ತು ಎಂದು ಹೇಳಲಾಗುತ್ತದೆ. ಅವರು ರಮೇಶ್ ಅರವಿಂದ್ ಬದಲಿಗೆ ನಾಲ್ಕನೇ ಸೀಸನ್ ಅನ್ನು ಮತ್ತೊಮ್ಮೆ ಆಯೋಜಿಸಿದರು. ಅವರು ಕಲರ್ಸ್ ಕನ್ನಡದ ರಿಯಾಲಿಟಿ ಶೋ, ಫ್ಯಾಮಿಲಿ ಪವರ್‌ನ ನಿರೂಪಕ ಸಹ ಆಗಿದ್ದರು. ಉದಯ ಟಿವಿಯಲ್ಲಿ ನೇತ್ರಾವತಿ ಧಾರಾವಾಹಿಯನ್ನು ನಿರ್ಮಿಸುತ್ತಿದ್ದರು

### ಕನ್ನಡದ ಕೋಟ್ಯಧಿಪತಿ (ಸೀಸನ್ 1, 2 ಮತ್ತು 4)

ಕನ್ನಡದ ಕೋಟ್ಯಧಿಪತಿ ಭಾರತೀಯ ಕನ್ನಡ ಭಾಷೆಯ ರಸಪ್ರಶ್ನೆ ಆಟದ ಕಾರ್ಯಕ್ರಮವಾಗಿದ್ದು, ಇದನ್ನು ಪುನೀತ್ ರಾಜ್‌ಕುಮಾರ್ ನಿರೂಪಣೆ ಮಾಡಿದ್ದಾರೆ. ಇದು ಅಂತರರಾಷ್ಟ್ರೀಯ ಖ್ಯಾತಿಯ ಸೋನಿ ಪಿಕ್ಚರ್ಸ್ ಟೆಲಿವಿಷನ್– ಪ್ರಸಿದ್ಧ ಗೇಮ್ ಶೋ 'ಹು ವಾಂಟ್ ಟು ಬಿ ಅ ಮಿಲಿಯನೇರ್ (ಫುಂ ಫಚಿಟಿಣ ಣಾ ಛಜ ಚಿ ಒಟಟಠಟಿಚಿಡಿಜ?)' ನ ಅಧಿಕೃತ ಕನ್ನಡ ಭಾಷಾ ರೂಪಾಂತರವಾಗಿದೆ.

ಪುನೀತ್ ಅವರು ಕರ್ನಾಟಕ ಹಾಲು ಒಕ್ಕೂಟದ ನಂದಿನಿ ಹಾಲಿನ ಉತ್ಪನ್ನಗಳ ಬ್ರಾಂಡ್ ರಾಯಭಾರಿ ಆಗಿದ್ದರು, ಎಲ್‌ಇಡಿ ಬಲ್ಬ್ ಯೋಜನೆ, 7 ಅಪ್ (ಪೆಪ್ಸಿಕೋ), ಎಫ್–ಸ್ಕ್ವೇರ್, ಡಿಕ್ಸಿ ಸ್ಕಾಟ್, ಮಲಬಾರ್ ಗೋಲ್ಡ್, ಗೋಲ್ಡ್ ವಿನ್ನರ್, ಜಿಯೋಕ್ಸ್ ಮೊಬೈಲ್, ಪೋಥಿ ಸಿಲ್ಕ್ಸ್, ಫ್ಲಿಪ್‌ಕಾರ್ಟ್ ಮತ್ತು ಮಣಪ್ಪುರಂ, ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಬ್ರಾಂಡ್ ರಾಯಭಾರಿ ಆಗಿದ್ದರು.

### ಪಿ ಅರ್ ಕೆ ಆಡಿಯೋ

ಪುನೀತ್ ಸಂಗೀತ ಲೇಬಲ್ ಪಿ ಅರ್ ಕೆ ಆಡಿಯೊದ ಸ್ಥಾಪಕರು ಮತ್ತು ಮಾಲೀಕರಾಗಿದ್ದರು, ಪಿ ಅರ್ ಕೆ ಆಡಿಯೋ ಯೂ ಟ್ಯೂಬ್ ನಲ್ಲಿ ಅಕ್ಟೋಬರ್ 2021 ರಂತೆ 1.13 ಮಿಲಿಯನ್ ಚಂದಾದಾರರನ್ನು ಹೊಂದಿದೆ.

### ನಿಧನ ಮತ್ತು ನಂತರದ ಪರಿಣಾಮ

ಹಠಾತ್ತಾಗಿ ಕಾಣಿಸಿಕೊಂಡ ಎದೆನೋವು ಮತ್ತು ತೀವ್ರ ಹೃದಯಾಘಾತದಿಂದಾಗಿ 29 ಅಕ್ಟೋಬರ್ 2021 ರಂದು ಬೆಂಗಳೂರಿನ ವಿಕ್ರಮ ಆಸ್ಪತ್ರೆಯಲ್ಲಿ ನಿಧನರಾದರು.

ಡಾ.ರಾಜ್‌ಕುಮಾರ್ ಅವರ ಇಡೀ ಕುಟುಂಬ ನೇತ್ರದಾನ ಮಾಡುವುದಕ್ಕೆ ಹಲವು ವರ್ಷಗಳ ಹಿಂದೆಯೇ ಸಹಿ ಮಾಡಿದ್ದರು. ಅಣ್ಣಾವ್ರು ಕೂಡ ನೇತ್ರದಾನ ಮಾಡಿ ಇಬ್ಬರಿಗೆ ಬೆಳಕಾಗಿ ಹೋದರು. ಹಾಗೆಯೇ ಪುನೀತ್ ಕೂಡ ನೇತ್ರದಾನ ಮಾಡಿದ್ದಾರೆ.

ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಇಟ್ಟು 31 ಅಕ್ಟೋಬರ್ ಭಾನುವಾರದಂದು ಕಂಠೀರವ ಸ್ಟುಡಿಯೋದ ಡಾ.ರಾಜ್ ಸ್ಮಾರಕದ ಆವರಣದಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು.

ಕುಟುಂಬದವರು ಮಾತ್ರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು. ಕಂಠೀರವ ಸ್ಟುಡಿಯೋ ಹೊರಭಾಗದ ರಸ್ತೆಗಳಲ್ಲಿ ಸಾವಿರಾರು ಅಭಿಮಾನಿಗಳು ಕಣ್ಣೀರಿಡುತ್ತಾ ನೆಚ್ಚಿನ ನಟನಿಗೆ ಕಂಬನಿಯ ವಿದಾಯ ಹೇಳಿದರು

**ಕೃಪೆ: ವಿಕಿಪೀಡಿಯಾ**

## ಮಿಣುಕಿ ಮರೆಯಾದ ನಕ್ಷತ್ರ



ಪುನೀತ್ ರಾಜಕುಮಾರ್ ಅಕಾಲಿಕ ಸಾವು: ಹೊರಬರುತ್ತಿರುವ ಒಂದೊಂದೇ ಸತ್ಯಗಳು

ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅಕಾಲಿಕ ಸಾವಿಗೆ ಮರುಕ ಪಡುತ್ತಿರುವವರ ಸಂಖ್ಯೆ, ಅವರು ಮಾಡುತ್ತಿರುವ ಸಾಮಾಜಿಕ ಕೆಲಸಗಳು ಒಂದೊಂದೇ ಹೊರಗೆ ಬರುತ್ತಿರುವುದರಿಂದ, ಇನ್ನಷ್ಟು ಹೆಚ್ಚಾಗುತ್ತಿದೆ.

ಬಲಗೈ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು ಎನ್ನುವಂತೆ ಪುನೀತ್ ರಾಜಕುಮಾರ್ ಅವರು ಮಾಡಿದ್ದ ಬಹಳಷ್ಟು ಸಾಮಾಜಿಕ ಕೆಲಸಗಳು ಅವರ ಕುಟುಂಬದವರಿಗೇ ಗೊತ್ತಿಲ್ಲ. "ನಾನು ಮತ್ತು ಅವನು ಎಂದಿಗೂ ಹಣಕಾಸು ವಿಚಾರದ ಬಗ್ಗೆ ಮಾತನಾಡುತ್ತಿರಲಿಲ್ಲ, ಅದಕ್ಕೆ ನನ್ನ ಅವನ ಬಾಂಧವ್ಯ ಇಷ್ಟು ಚೆನ್ನಾಗಿ ಇದ್ದದ್ದು. ಅವನು ಇಷ್ಟೆಲ್ಲಾ ಸಹಾಯ ಮಾಡಿದ್ದಾನೆ ಎನ್ನುವುದು ನನಗೇ ಗೊತ್ತಿಲ್ಲ. ಬಹುಷಃ ಬಹಳ ವರ್ಷದ ಹಿಂದಿನಿಂದಲೇ ಈ ಕೆಲಸಗಳನ್ನು ಅವನು ಶುರು ಮಾಡಿರಬಹುದು"ಎಂದು ಅವರ ಸಹೋದರ ಶಿವರಾಜ್ ಕುಮಾರ್ ಹೇಳಿದ್ದರು.

ಅದೆಷ್ಟೋ ಮಕ್ಕಳಿಗೆ ವಿದ್ಯಾಭ್ಯಾಸ, ಗೋಶಾಲೆ, ಅನಾಥಾಶ್ರಮ, ವೃದ್ಧಾಶ್ರಮವನ್ನು ಪುನೀತ್ ರಾಜಕುಮಾರ್ ಕಟ್ಟಿಸಿರುವ ವಿಚಾರ, ರಾಷ್ಟ್ರ ಮಟ್ಟದಲ್ಲಿ ಬಹಳ ಸುದ್ದಿಯಾಗುತ್ತಿದೆ. ಪುನೀತ್ ಅವರ ಸಮಾಧಿ ವೀಕ್ಷಣೆಗೆ ಜಡಿಮಳೆಯ ನಡುವೆಯೂ ಸಾವಿರಾರು ಅಭಿಮಾನಿಗಳು ಆಗಮಿಸುತ್ತಿದ್ದಾರೆ.

ಪುನೀತ್ ರಾಜಕುಮಾರ್ ಅವರು ತಾವು ನಡೆಸುತ್ತಿರುವ ಸಾಮಾಜಿಕ ಕೆಲಸ ನಿಲ್ಲಬಾರದೆಂದು ಎಂಟು ಕೋಟಿ ರೂಪಾಯಿ ಭದ್ರತಾ ಠೇವಣಿಯನ್ನು ಇಟ್ಟಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಈ ಬಗ್ಗೆ ನನಗೆ ಮಾಹಿತಿಯಿಲ್ಲ ಎಂದು ಶಿವರಾಜ್ ಕುಮಾರ್ ಹೇಳಿದ್ದಾರೆ. ಸಾರ್ವಜನಿಕ ವಲಯದಲ್ಲಿ ಇರುವ ಪುನೀತ್ ಸಾಮಾಜಿಕ ಕೆಲಸದ ಹೊರತಾಗಿ, ಕೆಲವೊಂದು ಸುದ್ದಿಯಾಗದ ಅಪ್ಪು ಸಹಾಯದ ಬಗ್ಗೆ ಸ್ಲೈಡಿನಲ್ಲಿ ಮುಂದುವರಿಸಲಾಗಿದೆ.

ರಣ ವಿಕ್ರಮ ಚಿತ್ರದ ಶೂಟಿಂಗ್ ನ ಬಿಡುವಿನ ವೇಳೆ, ಪಕ್ಕದಲ್ಲೇ ಒಂದು ಸರಕಾರೀ ಶಾಲೆಯೊಂದು ಇತ್ತು. ಅಲ್ಲಿಗೆ, ಭೇಟಿ ನೀಡಿದ ಪುನೀತ್ ರಾಜಕುಮಾರ್, ಹೆಣ್ಣು ಮಕ್ಕಳಿಗೆ ಶೌಚಾಲಯ ಇಲ್ಲದಿರುವುದನ್ನು ಗಮನಿಸುತ್ತಾರೆ. ಇದಕ್ಕೆ ಸ್ಪಂದಿಸುವ ಪುನೀತ್, ಶಾಲೆಗೆ ಸಂಬಂಧ ಪಟ್ಟ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ, ಹದಿನೈದು ದಿನ ನಾನು ಇಲ್ಲೇ ಶೂಟಿಂಗ್ ನಲ್ಲಿರುತ್ತೇನೆ. ಬೆಂಗಳೂರಿಗೆ ಪ್ಯಾಕ್ ಅಪ್ ಆಗುವ ಮುನ್ನ ಶೌಚಾಲಯದ ಉದ್ಘಾಟನೆಯನ್ನು ನಾನೇ ಮಾಡುತ್ತೇನೆ ಎಂದು ಶೌಚಾಲಯ ಕಟ್ಟಿಸಿದ್ದರು ಎಂದು ಚಿತ್ರತಂಡದ ಸದಸ್ಯರೊಬ್ಬರು ಹೇಳಿದ್ದಾರೆ.


ರಾಜಕುಮಾರ ಚಿತ್ರದ ವೇಳೆಯ ಬಿಡುವಿನಲ್ಲಿ, ಮೈಸೂರಿನ ಅನಾಥಾಶ್ರಮವೊಂದರ ಸಿಬ್ಬಂದಿ ಬಂದು ಅಲ್ಲಿಗೆ ಬರುವಂತೆ ಪುನೀತ್ ಅವರಿಗೆ ಮನವಿಯನ್ನು ಮಾಡುತ್ತಾರೆ. ಸಾಯಂಕಾಲ ಬರುತ್ತೇನೆ ಎಂದು ಹೇಳಿ ಅಪ್ಪು ಅವರನ್ನು ಕಳುಹಿಸುತಾರೆ. ಸಾಯಂಕಾಲ ಶೂಟಿಂಗ್ ಮುಗಿದ ನಂತರ ಅಪ್ಪು ಅನಾಥಾಶ್ರಮಕ್ಕೆ ಹೋಗುತ್ತಾರೆ. ಅವರ ಕಾರಿನ ಹಿಂದೆ ಒಂದು ಟೆಂಪೋ ಬರುತ್ತಿರುತ್ತದೆ. ಟೆಂಪೋದಲ್ಲಿ ನೋಡಿದಾಗ ಮಕ್ಕಳಿಗೆ ಬೇಕಾಗುವ ಆಟದ ಸಾಮಾನು ಅದರಲ್ಲಿ ತುಂಬಿರುತ್ತದೆ. ಎಲ್ಲಾ ಆಟದ ಸಾಮಗ್ರಿಯನ್ನು ಪುನೀತ್ ಮಕ್ಕಳಿಗೆ ಕೊಟ್ಟು, ಅವರ ಜೊತೆ ಸ್ವಲ್ಪಹೊತ್ತು ಆಟವಾಡುತ್ತಾ ಕಾಲ ಕಳೆಯುತ್ತಾರೆ ಎನ್ನುವುದನ್ನು ಚಿತ್ರತಂಡದ ಸದಸ್ಯರೊಬ್ಬರು ಹೇಳಿದ್ದಾರೆ.

ಪುನೀತ್ ಅವರು ಒಂದು ಶೂಟಿಂಗ್ ನಲ್ಲಿ ಭಾಗವಹಿಸುತ್ತಿರುತ್ತಾರೆ. ಅವರಿಗಾಗಿ ಅಭಿಮಾನಿಯೊಬ್ಬರು ಕಾಯುತ್ತಿರುತ್ತಾರೆ, ಇದನ್ನು ಗಮನಿಸಿದ ಅಪ್ಪು, ಅವರ ಬಳಿಗೆ ಹೋದಾಗ, ಮಳೆಯಿಂದ ಮನೆ ಕುಸಿದು ಹೋಗಿದೆ, ನಿಮ್ಮಿಂದ ಸಹಾಯ ಪಡೆಯಲು ಬಂದೆ ಎಂದು ಹೇಳುತ್ತಾರೆ. ಆಗ, ಕ್ಯಾಮರಾ ಆಫ್ ಮಾಡಿ ಪುನೀತ್ ತನ್ನ ಅಭಿಮಾನಿಗೆ ಸಹಾಯವನ್ನು ಮಾಡುತ್ತಾರೆ. ಈ ವಿಡಿಯೋ ಸಾಮಾಜಿಕ ತಾಣದಲ್ಲಿ ಭಾರೀ ವೈರಲ್ ಆಗಿತ್ತು.

ಸಣ್ಣ ಹುಡುಗಿಗೆ ಕಿಡ್ನಿ ಸಮಸ್ಯೆ ಇರುವುದನ್ನು ಅರಿತ ಪುನೀತ್ ರಾಜಕುಮಾರ್ ಹದಿನೈದು ಲಕ್ಷ ರೂಪಾಯಿ ಸಹಾಯಹಸ್ತವನ್ನು ಚಾಚಿದ್ದರು. ನನಗೆ ಸಹಾಯ ಮಾಡಿದ್ದ ಅಪ್ಪು ಸರ್ ಇನ್ನಿಲ್ಲ, ನನ್ನಂತಹ ನೂರಾರು ಜನರಿಗೆ ಸಹಾಯ ಮಾಡಲು ಇನ್ನು ಯಾರಿದ್ದಾರೆ ಎಂದು ಆ ಹುಡುಗಿ ಕಣ್ಣೀರು ಹಾಕಿತ್ತು. ಇನ್ನು, ಸಣ್ಣ ಮಗುವಿಗೆ ವಾಕ್ ಸಮಸ್ಯೆಯಿತ್ತು, ಟಿವಿ ಕಾರ್ಯಕ್ರಮವೊಂದರಲ್ಲಿ ಈ ಬಗ್ಗೆ ಅರಿತುಕೊಂಡ ಪುನೀತ್ ಆ ಹುಡುಗನ ಶಸ್ತ್ರಚಿಕಿತ್ಸೆಗೂ ಸಹಾಯ ಮಾಡಿದ್ದನ್ನು, ಹುಡುಗನ ತಾಯಿ ಹೇಳಿದ್ದರು.

"ಮೈಸೂರಿನ ಜೈಲಿನಲ್ಲಿ ದೊಡ್ಮನೆ ಹುಡುಗ ಚಿತ್ರೀಕರಣ ನಡೆಯುತ್ತಿತ್ತು. ಅಲ್ಲಿನ ಜೈಲಿನಲ್ಲಿರುವ ಕೈದಿಗಳು ತಮ್ಮ ಶಿಕ್ಷೆಯನ್ನು ಮುಗಿಸಿದ್ದರು, ಜೈಲಿನಿಂದ ಬಿಡುಗಡೆ ಹೊಂದಲು ಫೀಸ್ ಕಟ್ಟಬೇಕಿತ್ತು. ಅದು ಕಟ್ಟಲು ಕೈದಿಗಳ ಬಳಿ ದುಡ್ಡು ಇರಲಿಲ್ಲ. ಈ ವಿಷಯವನ್ನು ಅಪ್ಪು ಅವರಿಗೆ ಹೇಳಿದಾಗ, ಎಷ್ಟು ದುಡ್ಡು ಬೇಕೂಂತ ಕೇಳಿ, ಆನ್ ದಿ ಸ್ಪಾಟ್ ಚೆಕ್ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೇ, ಈ ಸಹಾಯವನ್ನು ಯಾರಿಗೂ ಹೇಳುವುದಕ್ಕೆ ಹೋಗಬೇಡಿ" ಎಂದು ಚಿತ್ರತಂಡದ ಸದಸ್ಯರಾಗಿದ್ದ ಪ್ರಭಾಕರ್ ಎನ್ನುವವರು ಹೇಳಿದ್ದಾರೆ.

## ಕನ್ನಡಿಗರ ಪ್ರೀತಿಯ ಅಪ್ಪು..



ಪುನೀತ್ ರಾಜ್ ಕುಮಾರ್ ಜೀವನಚರಿತ್ರೆ

ಪವರಸ್ಟಾರ್ ಪುನೀತ್ ರಾಜಕುಮಾರ್ ಕನ್ನಡ ಚಿತ್ರರಂಗದಲ್ಲಿ ಸಕ್ರಿಯವಾಗಿರುವ ಪ್ರಮುಖ ನಾಯಕನಟ. ಅಭಿಮಾನಿಗಳಿಂದ ಅಪ್ಪು ಎಂದೇ ಕರೆಯಿಸಿಕೊಳ್ಳುವ ಪುನೀತ್ ನಟನೆಯಲ್ಲದೇ ಹಿನ್ನಲೆ ಗಾಯಕರಾಗಿ ,ನಿರ್ಮಾಪಕರಾಗಿಯೂ ಪ್ರಸುತರು. ಸುಮಾರು ನಾಲ್ಕು ದಶಕಗಳ ತಮ್ಮ ಸಿನಿಜೀವನದಲ್ಲಿ ಬಾಲ ಕಲಾವಿದನಾಗಿ 14 ಮತ್ತು ನಾಯಕನಾಗಿ 25 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ.

### ಬಾಲ್ಯ

1975, ಮಾರ್ಚ್ 17 ರಂದು ಚೆನ್ನೈನ ಕಲ್ಯಾಣಿ ಆಸ್ಪತ್ರೆಯಲ್ಲಿ ವರನಟ ಡಾ.ರಾಜಕುಮಾರ್ ಮತ್ತು ಪಾರ್ವತಮ್ಮರವರ ಕಿರಿಯ ಪುತ್ರನಾಗಿ ಜನಿಸಿದರು.ಇವರ ಹಿರಿಯ ಸಹೋದರರಾದ ಶಿವರಾಜಕುಮಾರ್ ಮತ್ತು ರಾಘವೇಂದ್ರ ರಾಜಕುಮಾರ್ ಕೂಡ ಕನ್ನಡ ಚಿತ್ರರಂಗದ ಯಶಸ್ವಿ ನಾಯಕನಟರು.

ಇವರು ರಾಜ್ ದಂಪತಿಗಳ ಕಿರಿಯ ಮಗುವಾಗಿದ್ದರಿಂದ ಬಹು ಅಕ್ಕರೆಯಲ್ಲಿ ಬೆಳೆದರು. ಪುನೀತ್ ಮತ್ತು ಸಹೋದರಿ ಪೂರ್ಣಿಮಾರನ್ನು,ರಾಜ್ ತಮ್ಮ ಬಹುತೇಕ ಚಿತ್ರಗಳ ಶೂಟಿಂಗ್‌ಗೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಬಾಲ್ಯದಿಂದಲೇ ಕಲೆಯ ಜೊತೆಗಿನ ನಂಟು ಆರಂಭವಾಯಿತು.

### ಸಿನಿಪಯಣ – ಬಾಲ ಕಲಾವಿದ

ಪುನೀತ್ ಆರು ತಿಂಗಳು ಮಗುವಿದ್ದಾಗ 1976 ರಲ್ಲಿ ತೆರೆಕಂಡ 'ಪ್ರೇಮದ ಕಾಣಿಕೆ' ಚಿತ್ರದ ಮೂಲಕ ತೆರೆಯ ಮೇಲೆ ಕಾಣಿಸಿಕೊಂಡರು. ನಂತರ ಬಂದ 'ಸನಾದಿ ಅಪ್ಪಣ್ಣ','ತಾಯಿಗೆ ತಕ್ಕ ಮಗ','ವಸಂತ ಗೀತ','ಭೂಮಿಗೆ ಬಂದ ಭಗವಂತ','ಭಾಗ್ಯವಂತರು' ಮುಂತಾದ ಚಿತ್ರಗಳಲ್ಲಿ ನಟಿಸಿ ತಮ್ಮ ಅಭಿನಯ ಪ್ರೌಢಿಮೆ ಮೆರೆದರು.

ಭಾಗ್ಯವಂತ ಚಿತ್ರದ 'ಬಾನ ದಾರಿಯಲ್ಲಿ ಸೂರ್ಯ', ಚಲಿಸುವ ಮೋಡಗಳು ಚಿತ್ರದ 'ಕಾಣದಂತೆ ಮಾಯವಾದನೋ',ಯಾರಿವನು ಚಿತ್ರದ 'ಕಣ್ಣಿಗೆ ಕಾಣುವ ದೇವರು' ಮುಂತಾದ ಗೀತೆಗಳನ್ನು ಹಾಡಿ ಹಿನ್ನೆಲೆ ಗಾಯಕರಾಗಿಯೂ ಪ್ರಶಂಸೆ ಪಡೆದರು. 'ಚಲಿಸುವ ಮೋಡಗಳು' ಮತ್ತು 'ಎರಡು ನಕ್ಷತ್ರಗಳು' ಚಿತ್ರದ ಅಭಿನಯಕ್ಕಾಗಿ ಕರ್ನಾಟಕ ರಾಜ್ಯ ಪ್ರಶಸ್ತಿ ಪಡೆದರು.

### ಬೆಟ್ಟದ ಹೂ

ಬಾಲಕಲಾವಿದನಾಗಿ ಪುನೀತ್ ಅಭಿನಯಿಸಿದ ಉತ್ಕೃಷ್ಟ ಚಿತ್ರ 'ಬೆಟ್ಟದ ಹೂ'. 1984 ರಲ್ಲಿ ತೆರೆಕಂಡ ಎನ್ ಲಕ್ಷ್ಮಿ ನಾರಾಯಣ ನಿರ್ದೇಶನದ ಈ ಚಿತ್ರದಲ್ಲಿ ಪುನೀತ್ ಬಾಲಕ ರಾಮು ಆಗಿ ನಟಿಸಿದರು. ಶಾಲೆಗೆ ಹೋಗುವ ಬಡ ಬಾಲಕನೊಬ್ಬನ ತಳಮಳಗಳನ್ನು ಚಿತ್ರ ಚೆನ್ನಾಗಿ ಬಿಂಬಿಸಿತು. ಈ ಚಿತ್ರ ಇಂಗ್ಲೀಷ್ ಕಾದಂಬರಿ 'ವಾಟ್ ದೆನ್ ರಾಮನ್' ಆಧಾರಿತವಾಗಿತ್ತು. ಈ ಚಿತ್ರದ ಅಭಿನಯಕ್ಕಾಗಿ ಪುನೀತ್‌ಗೆ ರಾಷ್ಟ್ರ ಪ್ರಶಸ್ತಿ ದೊರೆಯಿತು.

### ಸಿನಿಪಯಣ – ನಾಯಕನಟ

2002 ರಲ್ಲಿ ತೆರೆಕಂಡ ಪುರಿ ಜಗನ್ನಾಥ ನಿರ್ದೇಶನದ 'ಅಪ್ಪು' ಚಿತ್ರದಿಂದ ನಾಯಕನಟನಾಗಿ ಕನ್ನಡ ಚಿತ್ರರಂಗದಲ್ಲಿ ಎರಡನೇ ಇನ್ನಿಂಗ್ಸ್ ಆರಂಭಿಸಿದರು. ಈ ಚಿತ್ರ ಅದ್ಧೂರಿ ಯಶಸ್ಸು ಕಂಡಿತು. ನಂತರ ತೆರೆಗೆ ಬಂದ ಅಭಿ,ವೀರ ಕನ್ನಡಿಗ,ಮೌರ್ಯ,ಆಕಾಶ್ ,ನಮ್ಮ ಬಸವ, ಅಜಯ್ ಮುಂತಾದ ಚಿತ್ರಗಳು ಬಾಕ್ಸಾಫೀಸಿನಲ್ಲಿ ಒಳ್ಳೆ ದಾಖಲೆ ಮಾಡಿ ಅದ್ದೂರಿ ಪ್ರದರ್ಶನ ಕಂಡವು.

ಇವರು ನಾಯಕನಾಗಿ ನಟಿಸಿದ ಮೊದಲ ಹತ್ತು ಚಿತ್ರಗಳು ಶತದಿನ ಪೂರೈಸಿದ್ದು ದಾಖಲೆ.ನಾಯಕನಾಗಿ ಎರಡು ರಾಜ್ಯ ಪ್ರಶಸ್ತಿ, ನಾಲ್ಕು ಫಿಲ್ಮಫೇರ್,ಎರಡು ಸೈಮಾ ಹೀಗೆ ಹತ್ತು ಹಲವು ಪ್ರಶಸ್ತಿ ಪಡೆದಿದ್ದಾರೆ.

### ಪುನೀತ್ ರಾಜಕುಮಾರ್ ಪಡೆದ ಪ್ರಶಸ್ತಿಗಳು

ಪುನೀತ್ ಹಿಟ್ಸ್ & ಫ್ಲಾಪ್ಸ್ – ಲಿಂಕ್
ಪುನೀತ್ ಟಾಪ್ 10 ಚಲನಚಿತ್ರಗಳು – ಲಿಂಕ್
ಪುನೀತ್ ಬಾಲ್ಯನಟನಾಗಿ ನಟಿಸಿದ ಎಲ್ಲಾ ಚಿತ್ರಗಳು

### ಗಾಯಕ – ನಿರೂಪಕ– ನಿರ್ಮಾಪಕ

ಗಾಯಕನಾಗಿ ಸುಮಾರು ಐವತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಹಾಡಿರುವ ಪುನೀತ್, ಗಾಯನದಿಂದ ಬರುವ ಸಂಪೂರ್ಣ ಹಣವನ್ನು ಸಮಾಜಸೇವೆಗೆ ವಿನಿಯೋಗಿಸುತಾರೆ.ಕಿರುತೆರೆಯಲ್ಲಿ ನಿರೂಪಕರಾಗಿ ಕನ್ನಡದ ಕೋಟ್ಯಾಧಿಪತಿಯ ಎರಡು ಸೀಸನ್‌ಗಳನ್ನು ಮತ್ತು ಫ್ಯಾಮಿಲಿ ಪವರ್ ಎಂಬ ರಿಯಾಲಿಟಿ ಶೋಗಳನ್ನು ನಿರೂಪಿಸಿದ್ದಾರೆ. ವೀಕೆಂಡ್ ವಿಥ್ ರಮೇಶ್ ಕಾರ್ಯಕ್ರಮದ ಮೊಟ್ಟಮೊದಲ ಅತಿಥಿಯಾಗಿ ಭಾಗವಹಿಸಿದ್ದು ವಿಶೇಷ.

ಚಿತ್ರ ನಿರ್ಮಾಪಕರಾಗಿ 'ಕವುಲುದಾರಿ', 'ಮಯಾಬಜಾರ್' ಎಂಬ ಚಿತ್ರಗಳನ್ನು ತಮ್ಮ ಹೋಮ್ ಬ್ಯಾನರ್‌ನಲ್ಲಿಯೇ ನಿರ್ಮಸಿರುವ ಪುನೀತ್ ತಮ್ಮ ಪ್ರೋಡಕ್ಷನ್ ಹೌಸ್ ಮೂಲಕ ಕಿರುತೆರೆ ಧಾರಾವಾಹಿ ಕೂಡ ನಿರ್ಮಿಸಿದ್ದಾರೆ. ತಾಯಿಯ ನೆನಪಿನಲ್ಲಿ 'ಪಿ.ಅರ್.ಕೆ ' ಆಡಿಯೋ ಕಂಪನಿಯೊಂದನ್ನು ಸ್ಥಾಪಿಸಿದ್ದಾರೆ.

ಮೈಸೂರಿನ ಶಕ್ತಿ ಧಾಮ ಆಶ್ರಮದ ಮೂಲಕ ಸಮಾಜ ಸೇವೆಯಲ್ಲಿ ತೊಡಗಿರುವ ಪುನೀತ್ 'ಬೆಂಗಳೂರು ಪ್ರೀಮೀಯರ್ ಪುಟ್‌ಬಾಲ್ ತಂಡದ ಒಡೆತನವನ್ನು ಹೊಂದಿದ್ದಾರೆ.ಕರ್ನಾಟಕ ಸರ್ಕಾರದ ನಂದಿನಿ ಹಾಲು ಉತ್ಪನ್ನಗಳು ಮತ್ತು ಐಇಆ ಬಲ್ಬ್‌ಗಳ ರಾಯಭಾರಿಯಾಗಿ ಕೂಡ ಪ್ರಸ್ತುತರು. ಒಂದು ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ರಾಯಭಾರಿಯಾಗಿದ್ದರು.

1999 ರಲ್ಲಿ ಚಿಕ್ಕಮಗಳೂರಿನವರಾದ ಅಶ್ವಿನಿಯವರನ್ನು ಕೈಹಿಡಿದರು.ಈ ದಂಪತಿಗಳಿಗೆ ಧೃತಿ ಮತ್ತು ವಂದಿತಾ ಎಂಬ ಪುತ್ರಿಯರಿದ್ದಾರೆ.

2021 ಆಕ್ಟೋಬರ್ 29 ರ ಬೆಳಿಗ್ಗೆ ಜಿಮ್ ಮಾಡುವಾಗ ಲಘು ಹೃದಯಾಘಾತದಿಂದ ಕುಸಿದು ಬಿದ್ದ ಪುನೀತ್, ಹತ್ತಿರದ ರಮಣಶ್ರೀ ಆಸ್ಪತ್ರೆಗೆ ದಾಖಲಾದರು. ತುರ್ತು ಚಿಕಿತ್ಸೆಯ ನಂತರ ಪುನೀತ್ ರನ್ನು ವಿಕ್ರಮ್ ಆಸ್ಪತ್ರೆಯ ತೀವ್ರ ನಿಘಾ ಘಟಕಕ್ಕೆ ದಾಖಲಾಯಿಸಿತು. ಚಿಕಿತ್ಸೆ ಫಲಕಾರಿಯಾಗದೇ 11.45 ಘಂಟೆಯ ಸುಮಾರಿಗೆ ನಿಧನರಾದರು. ಕನ್ನಡ ಚಿತ್ರರಂಗದ ಟಾಪ್ ನಟನೊಬ್ಬ ತನ್ನ ಜೀವನ ಮತ್ತು ಸಿನಿ ಜೀವನದ ಉತ್ತುಂಗುದ ಕಾಲದಲ್ಲಿಯೇ ನಿಧನವಾಗಿದ್ದು ಕನ್ನಡ ಚಿತ್ರರಂಗದ ಪಾಲಿಗೆ ದುರ್ದೈವವೇ ಸರಿ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16

# ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಕೆಲವು ಹಿಪ್ನೋ ತಂತ್ರಗಳು







ಸಮ್ಮೋಹನ ವಿದ್ಯೆಯೆಂದರೆ ಒಳಮನಸ್ಸಿನ ಅರೆನಿದ್ರೆ ಎಂದು ಕೂಡ ಅನ್ನಬಹುದಾಗಿದೆ, ಈ ಸಮ್ಮೋಹನ ಸ್ಥಿತಿಯಲ್ಲಿ ಮನಸ್ಸು ಬಾಹ್ಯ ಜಗತ್ತಿನ ಸಂಪರ್ಕವನ್ನು ಕಳೆದುಕೊಂಡು ಮನಸ್ಸು ಒಂದು ಕಡೆ ಕೇಂದ್ರಿಕೃತವಾಗಿರುತ್ತದೆ. ಯಾವ ಸ್ಥಿತಿಯಲ್ಲಿ ಮನಸ್ಸು ಒಂದು ಕಡೆ ಕೇಂದ್ರೀಕೃತಗೊಂಡು ಅರೆನಿದ್ರೆಗೆ ಒಳಪಟ್ಟಿರುವುದೋ ಅಂತಹ ಸಮಯದಲ್ಲಿ ನಮ್ಮ ಆತ್ಮವು ಜಾಗ್ರತಗೊಂಡಿರುವುದು. ಈ ನಮ್ಮ ಜಾಗೃತಗೊಂಡ ಆತ್ಮಕ್ಕೆ ಸಲಹೆ ಮತ್ತು ಸೂಚನೆಗಳನ್ನು ನೀಡಿದಾಗ ನಿಮ್ಮ ಆತ್ಮವು ದೇಹದಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿ ನಮ್ಮ ಸಮಸ್ಯೆಗಳನ್ನು ದೂರಗೂಳಿಸಲು ಸಹಾಯಕವಾಗುವುದು.

**Clock method (ಗಡಿಯಾರ ವಿಧಾನ)**

ಈ ವಿಧಾನದಲ್ಲಿ ನೀವು ನಿಮ್ಮ ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ, ಹೆದರಿಕೆಯನ್ನು ಹೋಗಲಾಡಿಸಬಹುದು, ನೆನಪಿನ ಶಕ್ತಿ ಹೆಚ್ಚಿಸಿಕೊಳ್ಳಲು ಒಂದು ಗಡಿಯಾರ ಅಥವಾ ಕೈ ಗಡಿಯಾರವನ್ನು ತೆಗೆದುಕೊಳ್ಳಿ ಸೆಕೆಂಡ್ ಮುಳ್ಳು ಇರಬೇಕು, ಡಿಜಿಟಲ್ ಗಡಿಯಾರ ಬೇಡ.

ಈಗ ನೀವು ನಿಮ್ಮ ಗಡಿಯಾರವನ್ನು ಕಣ್ಣು ಮಿಟುಕಿಸದೇ ನೋಡಿ, ಸೆಕೆಂಡ್ ಮುಳ್ಳು ತಿರುಗುವುದನ್ನು ಎರಡು ನಿಮಿಷಗಳ ಕಾಲ ದೃಷ್ಟಿಸಿ ನೋಡಿ ಸೆಕೆಂಡ್ ಮುಳ್ಳ ತಿರುಗುವುದನ್ನು ಎರಡು ನಿಮಿಷಗಳ ಕಾಲ ನೋಡುತ್ತಾ ಇರಬೇಕು,

ಈ ಎರಡು ನಿಮಿಷದಲ್ಲಿ ಮನಸಿನಲ್ಲಿ ಯಾವುದೇ ನಿಶ್ಯಬ್ದ ಅಥವಾ ಸೊನ್ನೆ ಆಗಿರಬೇಕು, ಎರಡು ನಿಮಿಷದ ನಂತರ ನೀವು ನಿಮ್ಮ ಮನಸ್ಸಿನಲ್ಲಿ "ನನಗೆ ಮನಸ್ಸಿನ ಶಕ್ತಿ ಹೆಚ್ಚಿದೆ" ಅಥವಾ "ನಾನು ಓದಿದ್ದೆಲ್ಲಾ ನೆನೆಪಿದೆ".(ಪರೀಕ್ಷೆಗೆ ಹೋಗುವ ಮುನ್ನ ಮಾಡಿರಿ ಇದರಿಂದ ನಿಮಗೆ ಪರೀಕ್ಷೆ ಬರೆಯಲು ತುಂಬಾ ಅನುಕೂಲವಾಗುವುದು.) ಎಂದು ಒಂದು ನಿಮಿಷಗಳ ಕಾಲ ಮನಸ್ಸಿನಲ್ಲಿ ಉಚ್ಚರಿಸುತ್ತಾ ಇರಿ.

ಒಂದು ನಿಮಿಷದ ನಂತರ ಮತ್ತೆ ಮನಸ್ಸು ನಿಶ್ಯಬ್ದವಾಗಿರಬೇಕು. ಮತ್ತೆ ಎರಡು ನಿಮಿಷಗಳ ಕಾಲ ಗಡಿಯಾರದ ಸೆಕೆಂಡ್ ಮುಳ್ಳನ್ನು ದೃಷ್ಟಿಸಿ ನೋಡಿ ಮತ್ತು ಆ ಎರಡು ನಿಮಿಷದಲ್ಲಿ ನಿಮ್ಮ ಮನಸ್ಸು ನಿಶ್ಯಬ್ದವಾಗಿರಬೇಕು. ಅಥವಾ ಯಾವುದೇ ಆಲೋಚನೆ ಇರಬಾರದು. ಪ್ರಾರಂಭದಿಂದ ಕಡೆಯವರೆಗೆ ನಿಮ್ಮ ಕಣ್ಣುಗಳನ್ನು ಮಿಟುಕಿಸಬಾರದು, ಇದೇ ರೀತಿ ನೀವು ಹೆದರಿಕೆಗೂ ಕೂಡ ಮಾಡಬಹುದಾಗಿದೆ. ಹೆದರಿಕೆಗೆ ನೀವು "ನಾನು ತುಂಬಾ ಧೈರ್ಯವಾಗಿದ್ದೆನೆ". ಅಥವಾ "ನಾನು ತುಂಬಾ ಧೈರ್ಯವಂತ "ಎಂದು ಮಧ್ಯೆ ಒಂದು ನಿಮಿಷದಲ್ಲಿ ಉಚ್ಚರಿಸಬೇಕಾಗುತ್ತದೆ.

ಎಚ್ಚರಿಕೆ: ನೀವು ಉಚ್ಚರಿಸುವ ವಾಕ್ಯ ಧನಾತ್ಮಕವಾಗಿರಬೇಕು.

ಈ ವಿಧಾನದಲ್ಲಿ ನೀವು ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಕನಿಷ್ಠ 15 ದಿನಗಳ ಕಾಲ ದಿನಕ್ಕೆ ಎರಡು ಬಾರಿ ಈ ವಿಧಾನವನ್ನು ಮಾಡಬೇಕಾಗುತ್ತದೆ.

Before sleep method:- ನೀವು ಸಾಮಾನ್ಯವಾಗಿ ಮಲಗುವಾಗ ಅರೆನಿದ್ರಾವಸ್ಥೆಗೆ ತಲುಪಿ ನಂತರ ಗಾಢ ನಿದ್ರೆಗೆ ಒಳಪಡುವಿರಿ. ಇಲ್ಲಿ ಸಮ್ಮೋಹನ ನಿದ್ರೆಯನ್ನು ತಲುಪಿ ನಂತರ ಗಾಢ ನಿದ್ರೆಗೆ ಒಳಪಡುವಿರಿ. ಆದರಿಂದ್ದ ನೀವು ಮಲಗುವ ಮುನ್ನ ಬೇಕಾದ ಹಾಗೆ ಧನಾತ್ಮಕವಾಗಿ ಒಂದು ವಾಕ್ಯವನ್ನು ಸೃಷ್ಟಿಸಿಕೊಳ್ಳಿ. "ನನಗೆ ನೆನಪಿನ ಶಕ್ತಿ ಹೆಚ್ಚಿದೆ"

"ನಾನು ತುಂಬಾ ಧೈರ್ಯವಂತ "ಹೆದರಿಕೆ ಇರುವವರು. " ನಾನು ಓದಿದ್ದೆಲ್ಲಾ ನೆನಪಿದೆ"

ಹೀಗೆ ನಿಮ್ಮ ಸಮಸ್ಯೆಗಳನ್ನು ಸುಧಾರಣವಾದ ಒಂದು ಧನಾತ್ಮಕ ವಾಕ್ಯವನ್ನಾಗಿ ಮಾಡಿ ಆ ವಾಕ್ಯವನ್ನು ಮಲಗುವ ಮುನ್ನ ಮನಸ್ಸಿನಲ್ಲಿ ಉಚ್ಚರಿಸುತ್ತಾ ಮಲಗಬೇಕು, ನೀವು ಯಾವ ಕಾಲದಲ್ಲಿ ನಿದ್ರೆಗೆ ತಲುಪುವಿರೋ ಅಲ್ಲಿಯವರೆಗೂ ಹೇಳುತ್ತಲೇ ಇರಬೇಕು, ನಂತರ ನಿದ್ರಿಸಬೇಕು.

ಈ ರೀತಿಯಲ್ಲಿ ನೀವು 21 ದಿನಗಳ ಕಾಲ ಕೇವಲ ಒಂದೇ ಸಮಸ್ಯಯನ್ನು ಧನಾತ್ಮಕ ವಾಕ್ಯವಾಗಿ ಅಭ್ಯಾಸ ಮಾಡುವುದರಿಂದ ಉತ್ತಮವಾದ ಫಲಿತಾಂಶ ದೊರಕುವುದು.

ಫಾರ್ಮುಲಾಗಳನ್ನು ನೆನಪಿಡಲು

**ಸೋಪಾನ–1**

ಸುಖಾಸನದಲ್ಲಿ ಕುಳಿತುಕೊಂಡು ನಿಧಾವಾಗಿ ಕಣ್ಣುಗಳನ್ನು ಮುಚ್ಚಿ ಬಿಳಿ ಬಣ್ಣದ ಮಾನಸಿಕ ಪರದೆಯನ್ನು ಕಲ್ಪಿಸಿ. ಆ ಮಾನಸಿಕ ಬಿಳಿ ಪರದೆ ನಿಮ್ಮ ಕಣ್ಣಿನಿಂದ ಒಂದು ಅಡಿ ದೂರ ಇರಲಿ. ಆ ಮಾನಸಿಕ ಪರದೆಯ ಮೇಲೆ ಅಂಕಿ 3 ನ್ನು ಮೂರು ಬಾರಿ ಬರೆಯಿರಿ ನಂತರ 2 ನ್ನು ಮೂರು ಬಾರಿ ಬರೆಯಿರಿ ನಂತರ 1 ನ್ನು 3 ಬಾರಿ ಬರೆಯಿರಿ. ಆಗ ನೀವು ನಿಮ್ಮ ಸಮ್ಮೋಹನ ಸ್ಥಿತಿಗೆ ಒಳಪಟ್ಟಿರುವಿರಿ.

**ಸೋಪಾನ–2**

ಆ ಮಾನಸಿಕ ಪರದೆ ಮೇಲೆ ಈಗ ನೀವು ನಿಮ್ಮ ಕಷ್ಟಕರವಾದ ಒಂದು ಫಾರ್ಮುಲಾವನ್ನು ಬರೆಯಿರಿ. ಆ ಮಾನಸಿಕ ಪರದೆಯ ಮೆಲೆ ಫಾರ್ಮುಲಾವನ್ನು ಬರೆದ ನಂತರ ಅದನ್ನು ಮೂರು ಬಾರಿ ಓದಿ.

**ಸೋಪಾನ–3**

ನಂತರ ಆ ಬಿಳಿ ಪರದೆಯ ಮೇಲೆ ನಂಬರ್ 3 ಅನ್ನು 3 ಸಲ ಕಲ್ಪಿಸಿ ನಂತರ ನಂಬರ್ 2 ಅನ್ನು 3ಸಲ ಕಲ್ಪಿಸಿ ನಂತರ ನಂಬರ 1ಅನ್ನು 3 ಸಲ ಕಲ್ಪಿಸಿ ನಿಧಾನವಾಗಿ ಉಸಿರನ್ನು ಒಳಕ್ಕೆ ತೆಗೆದುಕೊಂಡು ನಿಧಾನವಾಗಿ ಉಸಿರನ್ನು ಹೊರಹಾಕಿ. ಉತ್ಸಾಹಭರಿತರಾಗಿ ನೀವು ನಿಮ್ಮ ಕಣ್ಣನ್ನು ತೆರೆಯಿರಿ.

ಫಾರ್ಮುಲಾಗಳನ್ನು ನೆನಪಿಡಲು ಹಿಪ್ನೋ ತಂತ್ರ

**ಮುಂಜಾನೆಯ ವಿಧಾನ;**

ಇದು ಸ್ವಲ್ಪ ಕಷ್ಟಕರವಾದರೂ ಶೀಘ್ರವಾಗಿ ನೀವು ನಿಮ್ಮ ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಮುಂಜಾನೆ 4:00 ಗಂಟೆ ಸುಮಾರಿಗೆ ನಾವು ಸಮ್ಮೋಹನ ಸ್ಥಿತಿ ತಲುಪಿರುತ್ತೇವೆ.

ಈ ವಿಧಾನವನ್ನು ಮಾಡಲು ಮುಂಜಾನೆ 4:00 ಗಂಟೆಗೆ ಎಚ್ಚರವಾಗಬೇಕಾಗುತ್ತದೆ ನಂತರ "ನನ್ನ ನೆನಪಿನ ಶಕ್ತಿಯು ಹೆಚ್ಚಿದೆ "ಅಥವಾ "ನಾನು ಓದಿದ್ದೆಲ್ಲಾ ನೆನಪಿದೆ" ಎಂಬ ಒಂದು ವಾಕ್ಯವನ್ನು ಸಿದ್ಧಪಡಿಸಿಕೊಂಡು 4 ಘಂಟೆ ಹೆಳುತ್ತಾ ಮಲಗಬೇಕಾಗುತ್ತದೆ. ಸಮಾನ್ಯವಾಗಿ ನಿದ್ರೆ ಬರಲು 15 ನಿಮಿಷ ತೆಗೆದುಕೊಳ್ಳುವುದು. ಈ 15 ನಿಮಿಷಗಳ ಕಾಲ ಉಚ್ಚರಿಸುತ್ತಾ ಇರಿ ನಂತರ ನಿದ್ರೆ ಮಾಡಿ ನಂತರ ನೀವು ಎಚ್ಚರವಾಗಬೇಕು ( ಅಲಾರಾಮ್ ಅನ್ನು ಇಟ್ಟುಕೊಂಡಿರಬೇಕು)

ನಂತರ ಮತ್ತೆ ನೀವು ಆ ವಾಕ್ಯವನ್ನು ಉಚ್ಚರಿಸುತ್ತಾ ಮಲಗಿ 4:45 ಕ್ಕೆ ಮತ್ತೆ ನೀವು ನಿದ್ರೆಗೆ ತಲುಪುವಿರಿ ಮತ್ತೆ ನೀವು 5:00 ಘಂಟೆಗೆ ಎಚ್ಚರವಾಗಿ ಮತ್ತೆ ಆ ವಾಕ್ಯವನ್ನು ಉಚ್ಚರಿಸುತ್ತಾ ಮಲಗಿ ನಂತರ ನೀವು ನಿಮಗೆ ಎಚ್ಚರವಾದಾಗ ಎದ್ದೇಳಿ ಅಲ್ಲಿಯವರೆಗೆ ನಿದ್ರೆ ಮಾಡಿ


ಈ ವಿಧಾನದಿಂದ ನಿಮ್ಮ ನೆನಪಿನ ಶಕ್ತಿಯನ್ನು ಶೀಘ್ರವಾಗಿ ಹೆಚ್ಚಿಸಿಕೊಳ್ಳಬಹುದು.

**–ಕಿರಣ್ ಕೆ ಟಿ(ತುಮಕೂರು)**

# ಮುದ್ದು ಗೊಂಬೆ ಅಂಜು ಹನಿ!

ಫೋಟೋ ಜೊತೆ ಮಾತಾಡ್ತಾ
ಕನ್ನಡಿ ಮುಂದೆ ಕನಸು ಕಾಣ್ತಾ
ನನ್ನವಳ ಸಿಹಿ ನೆನಪಲ್ಲಿ ನಗುತ್ತಾ
ಇರುವ ಆಸೆ ನನ್ನ ಜೀವ ಪ್ರೀತಿಸುತ್ತಾ
ಕಣ್ಣಲ್ಲಿ ಕಣ್ಣಿಟ್ಟು
ನಾನೇ ಅವಳಿಗೆ ಕಣ್ಣ ರೆಪ್ಪೆಯಾಗಿ
ಅವಳಿಗೆ ಮುತ್ತಿಟ್ಟು
ನಾನೇ ಅವಳ ಮುಖದ ನಗುವಾಗಿ
ಅವಳ ಜೋಪಾನ ಮಾಡ್ತಾ ಪ್ರೀತಿ ಮಾಡುವ ಆಸೆ
ಅವಳ ಕಣ್ಣ್ ನೋಟಕ್ಕೆ
ಸೆರೆಯಾಗಿ
ಅವಳ ಕಿರು ನಗೆಗೆ
ಮರುಳಾಗಿ
ನನ್ನೆ ಮರೆತು ಪ್ರೇತಿಲಿ ಬೆರೆತು
ಅವಳ ಮುಂದೆ ಚಂದ್ರನ ಅಂದ ಕ್ಷಣಿಕ
ಪ್ರೀತಿಸಬೇಕು ಇವಳನ್ನೇ ಕೊನೆತನಕ.

**–ಕವಿ ಕಾವ್ಯ ಕಲ್ಪನೆ ಹನಿ**



# ಕಾಯಿಸದಿರು ಇನ್ನೂ ಮೀಸಲೆಂದು

ಒಂದರ ಮೇಲೆ ಒಂದರಂತೆ
ನನ್ನವಳು ಜೋಡಿಸಿಟ್ಟಿದ್ದಳು ಸಿಹಿ ತಿನಿಸು
ಬಾಯಲ್ಲಿ ನೀರು ಚೂರು ಚೂರು
ಹೊಟ್ಟೆಯೊಳಗೆ ಯಾಕೋ ಚುರು ಚುರು
ಭೀಮನ ವಂಶದವನು
ಭಕಾಸುರನ ಹೊಟ್ಟೆಯವನು
ತಿಂಡಿಪೋತ ನಾನು ಅದ ಬಲ್ಲೆ
ರುಚಿಯ ಮೆಲ್ಲುವಾಸೆ ಮೆಲ್ಲ ಮೆಲ್ಲೆ
ಮುಂಜಾನೆಯಿಂದ ಅಡುಗೆಮನೆ ಸ್ವರ್ಗ
ಎಣ್ಣೆಯ ಒಳಗೆ ಬೆಯ್ಯುವ ತಿಂಡಿಗಳು
ಘಮ್ಮೆನುವ ಸುವಾಸನೆ ನೀಡಿದವ ಕ್ರೂರಿ
ತಿನ್ನುವ ಆಶೆ ಮಾಡಿರುವ ಸಿಹಿ ಕಜೂರಿ
ಹಬ್ಬದ ಮನೆ,
ದೇವರಿಗೆ ಮೀಸಲಿಡುವ ಎಡೆಯಂತೆ
ಮಡಿಯಾಗಿ ಶುಚಿ ವಸ್ತ್ರಗಳ ತೊಟ್ಟು
ಬಾಯಿಗೆ ಬಟ್ಟೆಯೊಂದನು ಕಟ್ಟಿ
ಪೇರಿಸಿಟ್ಟಿಹಳು ಮಾಡಿರುವ ತಿಂಡಿಯ ಪಟ್ಟಿ
ಮೂಗಿನ ನಾಳಗಳು ತೆರೆದಿವೆ
ನಾಲಗೆಯು ರಸಗ್ರಂಥಿಗಳು ಕರೆದಿವೆ
ಹೊಟ್ಟೆ ಒಳಗೆ ನಾಟ್ಯ
ಕಾಯಿಸದಿರು ಇನ್ನೂ ಮೀಸಲೆಂದು
ನಾನು ಗಂಡ ಕಣೆ
ನಾನೆ ದೇವರು ನಿನಗೆ ನನ್ನಾಣೆ
ಎಡೆಯ ಇಡು ಮೊದಲಲ್ಲಿ
ಶಾಂತವಾಗಿಸು ನನ್ನ ನೀನಿಲ್ಲಿ
ಬಾರದ ದೇವರಿಗೆ ನೈವೇದ್ಯ ಯಾಕೆ
ರುಚಿಯ ಸವಿಯದ ನಾಲಗೆ ಅವನದು
ಹಸಿವಿರದ ಹೊಟ್ಟೆ ಅವನದಂತೆ
ಅರಿಯಲಾರೆಯ ಇನ್ನೂ

**–ತೀರ್ಥಾನಂದ ಹೆಚ್ ಎಲ್**
ಮಡಿಕೇರಿ

## ಹೈದ್ರಾಬಾದ್–ಕರ್ನಾಟಕ ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರ ಸೇವಾ ಸಂಘ (ರಿ)

# ಗ್ರಾಮಘಟಕಗಳ ಉದ್ಘಾಟನೆ ಹಾಗೂ ಪದಾಧಿಕಾರಿಗಳ ನೇಮಕಾತಿ



ಗಂಗಾವತಿ: ಹೈದರಾಬಾದ–ಕರ್ನಾಟಕ ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರ ಸೇವಾ ಸಂಘಟನೆಯ ಅಧ್ಯಕ್ಷರಾದ ಹನುಮಂತಪ್ಪ ಐಹೊಳೆಯವರ ನೇತೃತ್ವದಲ್ಲಿ 14ನೇ ಗ್ರಾಮ ಘಟಕ ಬಂಡ್ರಾಳ್ ಹಾಗೂ 15ನೇ ಗ್ರಾಮ ಘಟಕ ಆಗೋಲಿ ಗ್ರಾಮ ಘಟಕಗಳ ನಾಮ ಫಲಕಗಳನ್ನು ಕಾರ್ಮಿಕರ ಕಣ್ಮಣಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗಾಗಿ ಕಲ್ಯಾಣ ಮಂಡಳಿಯನ್ನೇ ರಚಿಸಿಕೊಟ್ಟ ಧೀಮಂತ ನಾಯಕ ಮಾಜಿ ಸಚಿವರಾದ ಸನ್ಮಾನ್ಯ ಶ್ರೀ ಇಕ್ಬಾಲ್ ಅನ್ಸಾರಿ ಸಾಹೇಬರ ಅಮೃತ ಹಸ್ತದಿಂದ ನಾಮಫಲಕಗಳನ್ನು ಉದ್ಘಾಟನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಅತಿಥಿಗಳಾಗಿ ಆಗಮಿಸಿದ ನಗರಸಭೆ ಮಾಜಿ ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಯುವಕರ ಕಣ್ಮಣಿ ಸನ್ಮಾನ್ಯ ಶ್ರೀ ಶಾಮೀದ ಮನಿಯಾರ ಹಾಗೂ ಕರ್ನಾಟಕ ರಾಜ್ಯ ಎಸ್.ಟಿ ವಿಭಾಗದ ಕಾರ್ಯಾಧ್ಯಕ್ಷರು, ನಾಯಕ ಸಮುದಾಯದ ನಕ್ಷತ್ರ ಶ್ರೀ ರಾಜು ನಾಯಕ ಹಾಗೂ ಹಿರಿಯರು ದಲಿತ ಮುಂಖಡರಾದ ಕೆ. ಅಂಬಣ್ಣ, ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮರಿಸ್ವಾಮಿ ದೇವರಮನೆ, ತಾಲ್ಲೂಕು ಸಮಿತಿ ಸದಸ್ಯರಾದ ಶರಣು ಗಡ್ಡಿ ಹಾಗೂ ಹನುಮಂತಪ್ಪ ಗೆದ್ದಡಕಿ, ಸಂಗಾಪೂರ ಗ್ರಾಮ ಘಟಕದ ಅಧ್ಯಕ್ಷರಾದ ಅಂಜಿನಪ್ಪ, ಮಹೆಬೂಬ ಶೇಖ ಹುಲಿಹೈದರ್ ಹಾಗೂ ಊರಿನ ಗೌರವಾನ್ವಿತ ಹಿರಿಯರು, ಗ್ರಾಮ ಪಂಚಾಯತಿ ಸದಸ್ಯರು ಎಲ್ಲರೂ ಭಾಗವಾಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿಸಿದರು.

ಎಲ್ಲರಿಗೂ ಸಂಘಟನೆಯ ತಾಲ್ಲೂಕು ಸಮಿತಿಯಿಂದ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಲಾಯಿತು.
ಈ ಸಂದರ್ಭದಲ್ಲಿ ನೇಮಕಗೊಂಡ ಪದಾಧಿಕಾರಿಗಳ ವಿವರ.

**14ನೇ ಗ್ರಾಮ ಘಟಕ ಬಂಡ್ರಾಳ ಗ್ರಾಮ ಘಟಕ**

1) ಶ್ರೀಮತಿ ರಜಿಯಾ ಬೇಗಂ ಆನೆಗುಂದಿ – ಅಧ್ಯಕ್ಷರು
2) ಶ್ರೀಮತಿ ರೇಷ್ಮಾ ಬೇಗಂ ಆನೆಗುಂದಿ – ಉಪಾಧ್ಯಕ್ಷರು
3) ಹನುಮಂತಪ್ಪ ಜಂಜಿರಿ – ಪ್ರಧಾನ ಕಾರ್ಯದರ್ಶಿ
4) ಬೆಟ್ಟಪ್ಪ ತಿಪ್ಪನಾಳ – ಸಹಕಾರ್ಯದರ್ಶಿ
5) ಶ್ರೀಮತಿ ಯಮನಮ್ಮ ತಳವಾರ – ಖಜಾಂಚಿ

**15ನೇ ಗ್ರಾಮ ಘಟಕ ಆಗೋಲಿ ಗ್ರಾಮ ಘಟಕ**

1) ಶ್ರೀ ಮಲ್ಲೇಶಪ್ಪ ಡ್ಯಾಗಿ – ಅಧ್ಯಕ್ಷರು
2) ಶ್ರೀ ಯಮನೂರಪ್ಪ ಭೋವಿ – ಉಪಾಧ್ಯಕ್ಷರು
3) ಮನೋಹರ ತಳವಾರ – ಪ್ರಧಾನ ಕಾರ್ಯದರ್ಶಿ
4) ಶರಣಪ್ಪ ಹಂಪಸದುರ್ಗ – ಸಹಕಾರ್ಯದರ್ಶಿ
5) ಶ್ರೀ ಅಂಬರೇಶ ಮನ್ನಾಪುರ – ಖಜಾಂಚಿ

# ಹರ್ಲಾಪೂರ ರೈಲ್ವೆ ನಿಲ್ದಾಣದಲ್ಲಿ ಹುಬ್ಬಳ್ಳಿ–ಗುಂತಕಲ್ ರೈಲು ಗಾಡಿಯನ್ನು ನಿಲ್ಲಿಸಲು ಮನವಿ



ಗದಗ– ಕೊಪ್ಪಳ ಹಾಗೂ ಗಿಣಿಗೇರಾ ಬಿಳಿಯ ಹೆಚ್ಚಿನ ಸಾರಿಗೆ ಸಂಚಾರವಿರುವ ರೈಲ್ವೇ ಲೆವೆಲ್ ಕ್ರಾಸಿಂಗ್ ಗೇಟ್ ಬಳಿ ರಸ್ತೆ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸುವ ಕಾರ್ಯಕ್ರಮಕ್ಕೆ ಆಗಮಿಸಿದ ಮಾನ್ಯ ಕೊಪ್ಪಳ ಲೋಕಸಭಾ ಸಂಸದರಾದ ಸಂಗಣ್ಣ ಕರಡಿ ಹಾಗೂ ಸಚಿವರಾದ ಹಾಲಪ್ಪ ಆಚಾರ ಮತ್ತು ಶಾಸಕರಾದ ರಾಘವೇಂದ್ರ ಹಿಟ್ನಾಳ ಇವರ ಮೂಲಕ ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ತಿಳಿಸಲಾಯಿತು.

ರೈಲ್ವೆ ಪ್ರಯಾಣಿಕರ ಅನುಕೂಲಕ್ಕಾಗಿ ರೈಲುಗಾಡಿ ಸಂಖ್ಯೆ 07337 / 07338 ಎಸ್ ಎಸ್ ಎಸ್ ಹುಬ್ಬಳ್ಳಿ ಯಿಂದ ಗುಂತಕಲ್ ರೈಲು ಗಾಡಿ ಹಾಗೂ 07303/ 07304 ಗಂಗಾವತಿ ರೈಲು ಗಾಡಿಯನ್ನು ಗದಗ ತಾಲ್ಲೂಕಿನ ಹರ್ಲಾಪೂರ ರೈಲ್ವೆ ನಿಲ್ದಾಣದಲ್ಲಿ ರೈಲು ಗಾಡಿ ನಿಲುಗಡೆ ಮಾಡು ಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವಿ ಆರ್ ನಾರಾಯಣರೆಡ್ಡಿ ಬಣದ ಗದಗ ಜಿಲ್ಲಾ ರೈತ ಸಂಘದ ಜಿಲ್ಲಾ ಅಧ್ಯಕರಾದ ಯಲ್ಲಪ್ಪ ಎಚ್ ಬಾಬರಿ ಹಾಗೂ ರೈತ ಸಂಘದ ಗ್ರಾಮ ಘಟಕದ ಸದಸ್ಯ ಶರಣಪ್ಪ ಜೋಗಿನ ಹಾಗೂ ಕೂಪ್ಪಳ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಅಂದಪ್ಪ ಕೋಳುರ ಮನವಿ ಮಾಡಿದರು.

ಈ ರೈಲ್ವೇ ಗಾಡಿ ನಿಲ್ಲೂವದರಿಂದ ತಿಮ್ಮಾಪೂರ, ಹರ್ಲಾಪೂರ, ಲಕ್ಕುಂಡಿ, ಯರೆಹಂಚಿನಾಳ, ಬಿನ್ನಾಳ ಗ್ರಾಮದ ಸಾರ್ವಜನಿಕರು ಹಾಗೂ ಬಡವರಿಗೆ, ವಿದ್ಯಾರ್ಥಿಗಳಿಗೆ, ಕುಲಿ ಕಾರ್ಮಿಕರಿಗೆ ,ವ್ಯಾಪಾರಸ್ಥರಿಗೆ , ಹುಲಿಗೆಮ್ಮ ದೇವಿಯ ಭಕ್ತರಿಗೆ, ಹಾಗೂ ಕೊಪ್ಪಳ , ಹೊಸಪೇಟೆ ನಗರಗಳಿಗೆ ಹೋಗಲು ಅನುಕೂಲ ವಾಗುತದೆ. ಈ ರೈಲ್ವೇ ಗಾಡಿ ಈ ಹಿಂದೆ ಹರ್ಲಾಪೂರ ರೈಲ್ವೆ ನಿಲ್ದಾಣದಲ್ಲಿ ನಿಲ್ಲುತ್ತಿತ್ತು. ಹೀಗ ಏಕಾಏಕಿ ನಿಲುಗಡೆಯನ್ನು ರದ್ದುಗೊಳಿಸಿದ್ದಾರೆ.

ಹುಬ್ಬಳ್ಳಿಯಿಂದ ಗುಂತಕಲ್ ವರೆಗಿನ ಎಲ್ಲಾ ರೈಲ್ವೇ ನಿಲ್ದಾಣದಲ್ಲಿ ನಿಲ್ಲುತ್ತಿದೆ ಆದರೆ ಹರ್ಲಾಪೂರ ರೈಲ್ವೆ ನಿಲ್ದಾಣದಲ್ಲಿ ನಿಲ್ಲುತ್ತಿಲ್ಲ ಅದಕ್ಕೆ ಬೇಗನೆ ಈ ರೈಲ್ವೇ ನಿಲ್ದಾಣದಲ್ಲಿ ಗಾಡಿಯನ್ನು ನಿಲ್ಲಿಸಲೇ ಬೇಕು ಎಂದು ರೈತ ಸಂಘದಿಂದ ಮನವಿ ಪತ್ರ ನೀಡಲಾಯಿತು.

# ಕರುನಾಡ ಕಂದ

ಸಂಪುಟ–1 । ಸಂಚಿಕೆ–2

ದಿನಾಂಕ: 15–11–2021 । ಪುಟಗಳು: 16


## ನಾವೆಲ್ಲರೂ ಹೊಣೆ

- ಕೆರೆಯ ನೀರು ಹರಿಯಲು ಬಿಟ್ಟು ಅಂತರ್ ಜಲ ಕುಸಿಯಲು ಬಿಟ್ಟು ಮತ್ತೆ ಈಗ ನದಿಯಿಂದ ಕೆರೆಗೆ ನೀರು ತುಂಬಿಸುವ ಯೋಜನೆ
- ದೇವರು ,ಧರ್ಮದ ಹೆಸರಿನಲ್ಲಿ ಮಕ್ಕಳನ್ನು ಹಡೆಯಲು ಬಿಟ್ಟು ಈಗ ಜನಸಂಖ್ಯೆ ನಿಯಂತ್ರಣ ಯೋಜನೆ.
- ಮತದಾನ ಕಡ್ಡಾಯ ಮಾಡದೆ, ವಿದ್ಯಾವಂತರು ಮತ ಹಾಕದೆ ಪಿಕ್ ನಿಕ್ ಹೋಗಲು ಅವಕಾಶ ಕೊಟ್ಟು ನಂತರ ಮತದಾನ ಮಹತ್ವ ಅಭಿಯಾನ
- ಟ್ರಾಕ್ಟರ್ ಪಡೆಯಲು ಸಾಲ ಕೊಟ್ಟು, ದನದ ಮಾಂಸ ರಪ್ತು ಮಾಡಲು ಅವಕಾಶ ಕೊಟ್ಟು ಈಗ ಗೋ ಶಾಲೆ ನಿರ್ಮಾಣ ಯೋಜನೆ
- ಸರಕಾರಿ ಶಾಲೆಗೆ ಅನುದಾನ ಕೊಡದೆ, ಖಾಸಗಿ ಶಾಲೆ ಬೆಳೆಯಲು ಅವಕಾಶ ಕೊಟ್ಟು,ಈಗ ಮತ್ತೆ ಮಕ್ಕಳನ್ನು ಸರಕಾರಿ ಶಾಲೆಗೆ ಕರೆತರುವ ಯೋಜನೆ
- ಸಾರ್ವಜನಿಕ ಜಾಗ, ಹಳ್ಳ ,ಕೆರೆ ಕಬಳಿಸಿ ಮನೆ ,ಧಾರ್ಮಿಕ ಕೇಂದ್ರಗಳನ್ನು ಕಟ್ಟಲು ಅವಕಾಶ ಕೊಟ್ಟು ನಂತರ ತೆರವುಗೊಳಿಸಲು ಆದೇಶ ಇಲ್ಲಾ ಅಕ್ರಮ ಸಕ್ರಮ ಯೋಜನೆ
- ಎಲ್ಲಾ ಕಡೆ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆಯಲು ಅವಕಾಶ ಕೊಟ್ಟು, ಕೆಲ ಸಣ್ಣಪುಟ್ಟ ಭ್ರಷ್ಟಾಚಾರಿಗಳನ್ನು ಹಿಡಿಯಲು ಭ್ರಷ್ಟಾಚಾರ ನಿಗ್ರಹ ದಳ
- ಅಕ್ರಮ ಅದಿರು,ಅಕ್ರಮ ಮರಳು ,ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯಲು ಬಿಡೊದು ನಂತರ ತ್ರಿ ಸದಸ್ಯ ಪೀಠ ಸ್ಥಾಪನೆ
- ಆರೋಗ್ಯಕ್ಕೆ ಹಾನಿಕಾರಕವಾದ ಬೆಳೆ ಬೆಳೆಯಲು ಅವಕಾಶ ನೀಡಿ, ನಂತರ ತಂಬಾಕು ಸೇವನೆ ಅಪರಾಧ ತಡೆ ಕಾನೂನು,ಜಾಥಾ
- ಎಲ್ಲಾ ಊರಿಗೂ ಬಾರ್ ಅಂಗಡಿಗಳಿಗೆ ಅನುಮತಿ ನೀಡಿ ನಂತರ ಮದ್ಯಪಾನ ನಿಷೇಧ ಜಾಗೃತಿ ಸಪ್ತಾಹ
- ಬೃಹತ್ ಕಾರ್ಖಾನೆಗಳಲ್ಲಿ ಪ್ಲಾಸ್ಟಿಕ್ ಉತ್ಪಾದನೆ ಮಾಡಲು ಅವಕಾಶ ಕೊಟ್ಟು ಪ್ಲಾಸ್ಟಿಕ್ ಮಿತ ಬಳಕೆ ಜಾಗೃತಿ ಮೂಡಿಸುವ ಜಾತಾ
- ಒಕ್ಕಲುತನ ಅಲಕ್ಷಿಸಿ ,ರಸಗೊಬ್ಬರ ,ಕ್ರಿಮಿನಾಶಕಗಳಿಗಾಗಿ ರೈತನನ್ನು ಸಾಲದ ಸುಳಿಗೆ ಸಿಲಿಕಿಸಿ , ಬೆಳೆದ ಬೆಳೆಗೆ ಬೆಲೆ ಇಲ್ಲದ ಹಾಗೆ ಮಾಡಿ ನಂತರ ಬೆಂಬಲ ಬೆಲೆ ಘೋಷಣೆ
- ಜಾತಿ ಬಲಪಡಿಸಿ , ಓಟು ಬ್ಯಾಂಕ್ ಮಾಡಿ ಅಧಿಕಾರ ಪಡೆದು ನಂತರ ಅಂತರ್ ಜಾತಿ ಮದುವೆಗೆ ಪ್ರೋತ್ಸಾಹ ಧನ
- ರೈಲ್ವೆ,ಹೈವೆ ಅಭಿವೃದ್ಧಿ ಹೆಸರಲ್ಲಿ ಸಿಕ್ಕ ಸಿಕ್ಕಂಗ ಗಿಡ ,ಮರ ಮಾರಣ ಹೋಮ ನಂತರ ಊರಿಗೊಂದು ವನ ,ಮನೆಗೊಂದು ಮರ ಯೋಜನೆ
- ಹಣ,ನೀರು ಹರಿಯಲು ಬಿಟ್ಟು ನಂತರ ಒಡ್ಡು ಹಾಕುವುದು,
- ಕಳ್ಳತನ ತಡೆಯೊದು ಬಿಟ್ಟು ನಂತರ ಕಳ್ಳರನ್ನು ಹುಡುಕೊದು,
- ಹಾಳಾಗುವಾಗ ಸುಮ್ಮನೆ ಇದ್ದು ನಂತರ ದುರಸ್ತಿಗೆ ಮಾಡುವುದು ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕೊದು.


ಇದು ಒಂದು ಸರಕಾರದ ತಪ್ಪು ಅಲ್ಲ, ಒಂದು ಪಕ್ಷದ ತಪ್ಪು ಅಲ್ಲ, ಇದಕ್ಕೆ ಎಲ್ಲಾ ರಾಜಕೀಯ ಪಕ್ಷಗಳು,ಎಲ್ಲಾ ಸರಕಾರಗಳು ಮತ್ತು ನಾವೆಲ್ಲರೂ ಹೊಣೆ


**–ಡಾ.ಶಿವಕುಮಾರ್ ಮಾಲಿಪಾಟೀಲ**

ದಂತ ವೈದ್ಯರು ಗಂಗಾವತಿ

9448302775


## ಶ್ರೀ ರಾಮಲಿಂಗೇಶ್ವರ 1008 ದೀಪೋತ್ಸವ



ಮಾನ್ವಿ: ತಾಲೂಕಿನ ಹರನಹಳ್ಳಿ ಗ್ರಾಮದಲ್ಲಿ ಮೊದಲ ಬಾರಿಗೆ ಶ್ರೀ ಸುಕ್ಷೇತ್ರ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸ ನಿಮಿತ್ತ ಹರನಹಳ್ಳಿ ಶ್ರೀ ರಾಮಲಿಂಗೇಶ್ವರ ಯುವಕರ ಸಂಘದಿಂದ 1008 ದೀಪೋತ್ಸವ, ಬಿಲ್ವಾರ್ಚನೆ ಹಾಗೂ ಅಲಂಕಾರ ಪೂಜೆ ನಡೆದಿದೆ. ದೀಪಾವಳಿ ಸಂಭ್ರಮ ಕಳೆದು ಕಾರ್ತಿಕ ಮಾಸದ ಸಂಭ್ರಮ ಎಲ್ಲೆಡೆ ಮನೆ ಮಾಡಿದೆ.

ದೇವಾಲಯಗಳಲ್ಲಿ ಕಾರ್ತಿಕ ದೀಪೋತ್ಸವ ಕಾರ್ಯಕ್ರಮ ದಲ್ಲಿ ಅನ್ನ ದಾಸೋಹ ಕೂಡ ನಡೆದಿದ್ದು, ಊರಿನ ಗುರು ಹಿರಿಯರು ಹಾಗೂ ಮಹಿಳೆಯರು ಭಕ್ತಾದಿಗಳು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ದೀಪೋತ್ಸವದಲ್ಲಿ ಭಾಗವಹಿಸಿದರು.

ದೀಪ ಬೆಳಗುವ ಮೂಲಕ ದೀಪೋತ್ಸವನ್ನು ಆಚರಿಸುತ್ತಿದ್ದಾರೆ.ಈ ದಿನದಂದು ಜನರು ಮನೆ ಪರಿಸರಗಳೆನ್ನು ಶುಚಿಗೊಳಿಸಿ, ಸಂಜೆಯ ವೇಳೆ ಮನೆಯ ಮುಂದೆ ರಂಗೋಲಿ ಯನ್ನು ರಚಿಸಿ, ಸಾಲು ಸಾಲಾಗಿ ಹಣತೆಗಳನ್ನು ಬೆಳಗಿಸುತ್ತಾರೆ.

ದೀಪಾರಾಧನೆ ಮುಗಿದೆ ನಂತರ ದೀಪಗಳನ್ನು ಮನೆಯ ಮೂಲೆ ಮೂಲೆಗಳಿಗೆ ಕೊಂಡೊಯ್ಯಲಾಗುತ್ತದೆ. ಹೀಗೆ ಕಾರ್ತಿಕ ದೀಪವು ಸುಖ ಸಮೃದ್ಧಿಯ, ಐಶ್ವರ್ಯದ ದ್ಯೋತಕವಾಗಿ ಆಚರಿಸಲ್ಪಡುತದೆ.ಕಾರ್ತಿಕ ಮಾಸದಲ್ಲಿ ದೀಪಾರದನೆಗೆ ವಿಶೇಷ ಮಹತ್ವವಿದೆ.

ಭಗವಂತ ಕಾರ್ತಿಕ ಮಾಸದಲ್ಲಿ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿ ದೀಪಾ ಬೆಳಗೆಬೇಕು.ಕಾರ್ತಿಕ ಮಾಸದಲ್ಲಿ ದೀಪಾರದನೆಯಿಂದ ಐಶ್ವರ್ಯ.ಸಂಪತ್ತು. ಆರೋಗ್ಯ. ಭಾಗ್ಯ ಪ್ರಾಪ್ತಿಯಾಗುತ್ತದೆ ಎಂದು ಶ್ರೀ ಸುಕ್ಷೇತ್ರ ರಾಮಲಿಂಗೇಶ್ವರ ದೇವಸ್ಥಾನದ ಅರ್ಚಕರು ಅಮರೇಶ ಸ್ವಾಮಿ ಹೇಳಿದರು.

## ಮಲ್ಲಿಕಾರ್ಜುನ ರಸ್ತೆಗಳು ಕೇಸರುಮಯ





ಎರಡು ವರ್ಷಗಳಿಂದ ಮನವಿ ಸಲ್ಲಿಸಿದರು, ಬಗೆಹರಿಯದ ಸಮಸ್ಯೆ.

ಮಹಾನಗರ ಪಾಲಿಕೆ 4ನೇ ವಾರ್ಡ್ ವ್ಯಾಪ್ತಿಗೆ ಬರುವ ನಗರದ ರಾಗಿಗುಡ್ಡ ಮಲ್ಲಿಕಾರ್ಜುನ ನಗರದ ರಸ್ತೆಗಳು ಸಂಪೂರ್ಣ ಹಾಳಾಗಿ ಸಂಚಾರಕ್ಕೆ ಅಯೋಗ್ಯವಾಗಿದೆ. ಜಲ್ಲಿ ಕಾಣದ ರಸ್ತೆಗಳು ಗುಂಡಿಬಿದ್ದು ಮಳೆಯಿಂದಾಗಿ ಕೆಸರುಮಯವಾಗಿದೆ. ಇದರಿಂದಾಗಿ ನಗರದ ನಿವಾಸಿಗಳಿಗೆ ಓಡಾಡಲು ತೊಂದರೆ ಉಂಟಾಗುತ್ತಿದೆ.

ಇದರ ಬಗ್ಗೆ ಮಹಾನಗರ ಪಾಲಿಕೆಗೆ ಕಳೆದ ಎರಡು ವರ್ಷಗಳಿಂದ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವ ಅಧಿಕಾರಿಯೂ ಅಥವಾ ಜನ ಪ್ರತಿನಿಧಿಯು ಇತ್ತ ಕಡೆ ಗಮನಹರಿಸಿಲ್ಲ.

ಶಿವಮೊಗ್ಗ ಸ್ಮಾರ್ಟ್ ಸಿಟಿಯಾಗುತ್ತಿದೆ ಎಂದು ದೊಡ್ಡ ಪ್ರಚಾರ ಪಡೆದುಕೊಳ್ಳುತ್ತಿದೆ. ಆದರೆ ಸ್ಮಾರ್ಟ್ ಸಿಟಿ ಅಂದರೆ ರಸ್ತೆಗಳನ್ನು ಕೆಸರುಮಯ ಮಾಡುವುದಾ ಎಂದು ಅನುಮಾನ ವ್ಯಕ್ತವಾಗುತ್ತಿದೆ. ಹದಗೆಟ್ಟ ರಸ್ತೆಗಳಿಂದಾಗಿ ಮಕ್ಕಳಿಗೆ, ಹಿರಿಯ ನಾಗರಿಕರಿಗೆ ಓಡಾಡಲು ಕಷ್ಟವಾಗುತ್ತಿದೆ. ಈ ರಸ್ತೆಯನ್ನ ಅಭಿವೃದ್ಧಿ ಪಡಿಸಲು ಪಾಲಿಕೆಗೆ ಇನ್ನೆಷ್ಟು ಮನವಿ ಸಲ್ಲಿಸಬೇಕು, ಇನ್ನೆಷ್ಟು ವರ್ಷಕಾಯಬೇಕು ಎಂಬುದು ನಗರ ನಿವಾಸಿಗಳ ಪ್ರಶ್ನೆಯಾಗಿದೆ.

## ರಾಷ್ಟ್ರೀಯ ಬಹುಭಾಷಾ ಕವಿಗೋಷ್ಠಿ ಕಾರ್ಯಕ್ರಮ



ಸಂಸ್ಕೃತಿ ಮಂತ್ರಾಲಯ ನವದೆಹಲಿ ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ ಭಾರತ ಸರ್ಕಾರ ನಾಗಪುರ ಕರ್ನಾಟಕ ಜಾನಪದ ಪರಿಷತ್ತು ತಾಲೂಕು ಘಟಕ ಬಸವಕಲ್ಯಾಣದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಬಹುಭಾಷಾ ಕವಿಗೋಷ್ಠಿಯನ್ನು ತಾಲೂಕಿನ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಶರಣು ಸಲಗರ ರವರು ಚಾಲನೆ ಕೊಟ್ಟರು.

ಪೂಜ್ಯ ಅಕ್ಕ ಡಾ॥ ಗಂಗಾಂಬಿಕೆ ಪಾಟೀಲ ರವರು ಮತ್ತು ಬಸವಕಲ್ಯಾಣ ಸಹಾಯಕ ಆಯುಕ್ತರಾದ ಶ್ರೀ ಭುವನೇಶ ದೇವಿದಾಸ ಪಾಟೀಲರವರು, ಭಾ.ಆ.ಸೇ ಬೀದರ ತಾಲೂಕಿನ ಸಹಾಯಕ ಆಯುಕ್ತರಾದ ಶ್ರೀಮತಿ ಗರಿಮಾ ಪನ್ವಾರ ರವರು ಭಾ.ಆ.ಸೇ. ನಾಗಪುರ ಸಾಂಸ್ಕೃತಿಕ ಕೇಂದ್ರದ ಕಾರ್ಯಕ್ರಮ ನಿರ್ದೇಶಕರಾದ ಶ್ರೀ ದೀಪಕ್ ಪಾಟೀಲ್ ರವರು ಶ್ರೀ ಕಾಶಪ್ಪ ಬಾಲಕಿಲೆ ರವರು ಶ್ರೀ ಜಗನ್ನಾಥ ಪತಂಗೆ ರವರು ಹೀಗೆ ಇನ್ನೂ ಹಲವಾರು ಗಣ್ಯ ವ್ಯಕ್ತಿಗಳು ಸೇರಿದಂತೆ ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಕವಿಗಳು ತಾಲೂಕಿನ ಕನ್ನಡದ ಕವಿಗಳು ಸಾಹಿತ್ಯ ಆಸಕ್ತರು ಬರಹಗಾರರು ಪದವಿ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ ರಾಜಕುಮಾರ್ ಹೆಬ್ಬಾಳೆ ಕಾರ್ಯಕ್ರಮ ಸಂಯೋಜಕರು ಬೀದರ ಇವರು ಉಪಸ್ಥಿತರಿದ್ದರು.


**–ರೇವಪ್ಪಯ್ಯಾ ಸ್ವಾಮಿ ಮಠಪತಿ**

ಕಲ್ಯಾಣ ಕರ್ನಾಟಕ ಗಡಿನಾಡು ಬೀದರ


## ಕರ್ನಾಟಕ ರಾಜ್ಯೋತ್ಸವ



ಕರ್ನಾಟಕದ ಕಲ್ಯಾಣ ಕರ್ನಾಟಕದ ಗಡಿನಾಡ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಬಾಜೋಳ್ಗಾ (ಕೆ) ಹತ್ತಿರವಿರುವ ಭಾಲ್ಕೇಶ್ವರ ಸಕ್ಕರೆ, ವಿದ್ಯುತ್ ಮತ್ತು ಡಿಸ್ಟಿಲರಿ ಕಾರ್ಖಾನೆಯಲ್ಲಿ ಸಡಗರ ಸಂಭ್ರಮದೊಂದಿಗೆ 66 ನೇಯ ಕರ್ನಾಟಕ ರಾಜ್ಯೋತ್ಸವದೊಂದಿಗೆ, ಪ್ರಸಕ್ತ 2021 ಮತ್ತು 2022 ಸಾಲಿನ ಕಬ್ಬು ನುರಿಸುವ ಯಂತ್ರಕ್ಕೆ ಪೂಜೆ ಸಲ್ಲಿಸುವ ಮುಖೇನ ಮತ್ತು ಕಬ್ಬು ನುರಿಸುವ ಕಾರ್ಯಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಕಾರ್ಖಾನೆಯ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಸನಮಾನ್ಯ ಶ್ರೀ ಪ್ರಕಾಶ ಖಂಡ್ರೆಯವರು ಮಾತಾನಾಡಿದರು ಕಳೆದ ವರ್ಷ ಉತ್ತಮ ಮಳೆಯಿಂದ ಜಿಲ್ಲೆದ್ಯಾದಂತ್ಯ ಎಲ್ಲಾ ರೈತರು ಚೆನ್ನಾಗಿ ಕಬ್ಬು ಬೆಳೆದಿದ್ದು. ಪ್ರಸ್ತುತ ಸಾಲಿನ ಸುಮಾರು ಆರು ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ ಎಂದು ಹೇಳುತ್ತಾ. ಅಲ್ಲದೆ ಕೆ ಎಲ್ ಪಿ ಡಿ ಯತ್ನಾಯಿಲ್ ತಯಾರಿಸಲಾಗುತ್ತಿದ್ದು. ಹೀಗಿರುವುದರಿಂದ ರೈತರಿಗೆ ಸರಿಯಾದ ಸಮಯಕ್ಕೆ ಕಬ್ಬಿನ ಬಿಲ್ನ ಹಣ ಪಾವತಿಸಲು ಸಹಕಾರಿಯಾಗಲ್ಲಿದೆ ಎಂದು ಹೇಳಿದರು.

ಕೆಲವು ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳಿದ್ದಿಲ್ಲ. ಆ ಸಂದರ್ಭದಲ್ಲಿ ಜಿಲ್ಲೆಯ ರೈತರು ಆತ್ಮಹತ್ಯೆ ಮತ್ತು ಕಬ್ಬಿಗೆ ಬೆಂಕಿ ಹಚ್ಚಿ ತಮ್ಅಕ್ರೋಶತೋಶ ವ್ಯಕ್ತಪಡಿಸಿದರು. ಇದನ್ನರಿತು ರೈತರ ಸಮಸ್ಯೆಯ ಪರಿಹಾರಕ್ಕಾಗಿ ಈ ಕಾರ್ಖಾನೆ ಸ್ಥಾಪಿಸಲಾಗಿದೆ ಎಂದು ಸ್ಮರಿಸಿದರು. ಕನ್ನಡ ನಾಡು ನುಡಿ, ನೆಲ ಜಲ, ಸಾಹಿತ್ಯ ಸಂಸ್ಕೃತಿ ಇವುಗಳೆಲ್ಲವೂ ಕನ್ನಡದ ವಿಶಿಷ್ಠ ಅದ್ಭುತವಾದ ಕೋಡುಗೆಗಳು ಇವುಗಳಿಗೆ ಹಲವಾರು ವ್ಯಕ್ತಿಗಳು ಜೀವ ತುಂಬಿದ್ದಾರೆ ಇವುಗಳ ರಕ್ಷಣೆಗೆ ನಾವು ನೀವೆಲ್ಲರೂ ಉಳಿಸಿ ಬೆಳಸಿಕೊಂಡು ಹೋಗೋಣ ಎಂದರು.

ಈ ಸಂದರ್ಭದಲ್ಲಿ ಕಾರ್ಖಾನೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಪ್ರಸನ್ನ ಖಂಡ್ರೆ, ಹಾಗೂ ಗುರು ಪ್ರಸಾದ ಖಂಡ್ರೆ, ಜಗದೀಶ್ ಖಂಡ್ರೆ, ಕಾರ್ಖಾನೆಯ ಮುಖ್ಯ ಕಬ್ಬು ಅಭಿವೃದ್ಧಿ ಹಾಗೂ ಕಬ್ಬು ಕಟ್ಟಾವು ಮತ್ತು ಸರಬರಾಜು ಅಧಿಕಾರಿಯಾದ ಶ್ರೀ ಶಿವಾನಂದ ಬಲ್ಲೂರರವರು, ಕಾರ್ಖಾನೆಯ ಸಹಾಯಕ ವ್ಯವಸ್ಥಾಪಕರಾದ ರಾಮಲಿಂಗ ಹಣಮಶೇಟ್ಟಿ, ರಾಸಯನ ವಿಭಾಗದ ಮುಖ್ಯ ಅಧಿಕಾರಿ ಸೋಮಶೇಖರ ಬಂಡೆ, ಜಿ ಎಂ ರವೀಂದ್ರನಾಥ, ಇ ಡಿ ಪಿ ವಿಭಾಗದ ಮೋಹನ್ ಕುಮಾರ ಪಂಚಾಳ ಹಾಗೂ ಮುಖಂಡರಾದ ವೆಂಕಟರಾವ ಬಿರಾದಾರ, ರವೀಂದ್ರ ಕಣಜೆ, ಬಾಬುರಾವ ಪಾಟೀಲ, ಅಶೋಕ ವಾಲೆ, ರಾಜಕುಮಾರ ಜಲ್ದೆ, ಸುರೇಶ ಆಲ್ಲೂರೆ, ರಾಜಶೇಖರ ಬಿರಾದಾರ ನಾವದಗಿ, ಕಾರ್ಖಾನೆಯ ಸಿಬಂದಿ ವರ್ಗದವರು, ಸುತ್ತಮುತ್ತಲಿನ ಗ್ರಾಮಸ್ಥರು ಈ ಸಂಭ್ರಮದಲ್ಲಿ ಭಾಗವಹಿಸಿದ್ದರು.

**ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜು, ಹರಿಹರ**

## ಕನ್ನಡ ರಾಜ್ಯೋತ್ಸವ ಆಚರಣೆ

ಹರಿಹರ:ಕನ್ನಡ ನಾಡಿನ ನುಡಿ ತೇರ ಹಬ್ಬವಾದ ಕನ್ನಡ ರಾಜ್ಯೋತ್ಸವ ಕನ್ನಡಿಗರಾದ ನಮಗೆಲ್ಲ ಸಂಭ್ರಮವೋ ಸಂಭ್ರಮ. ಈ ಉಲ್ಲಾಸ, ಉತ್ಸಾಹದ ಹಬ್ಬವನ್ನು ಸಂಭ್ರಮಿಸುವ ಸಲುವಾಗಿ,ನಾಡು ನುಡಿಯ ಗತವೈಭವವನ್ನು ಮುಂದಿನ ತಲೆಮಾರುಗಳಾದ ವಿದ್ಯಾರ್ಥಿಗಳಿಗೆ ಪರಿಚಯಿಸುವ ನಿಟ್ಟಿನಲ್ಲಿ ಇಲ್ಲಿನ ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.




ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಂದನೀಯ ಫಾದರ್ ಎರಿಕ್ ಮಥಾಯಸ್ ಎಸ್ .ಜೆ ಇವರು ವಹಿಸಿದ್ದರು.ಮುಖ್ಯ ಅತಿಥಿಗಳಾಗಿ ಆಗಮಿಸಿದ ಕವಿ,ಸಾಹಿತಿ, ನಾಟಕಕಾರರೂ ಆದ ಡಾ.ಆನಂದ ಋಗ್ವೇದಿ,ಸಹಾಯಕ ಆಡಳಿತಾಧಿಕಾರಿಗಳು ಜಿಲ್ಲಾ ಆಸ್ಪತ್ರೆ (ಚಿಟಗೇರಿ) ದಾವಣಗೆರೆ ಇವರು ಮಾತನಾಡಿ ಕನ್ನಡಿಗರಾದ ನಾವೆಲ್ಲ ಈ ನಾಡಿನ ಸಂಸ್ಕೃತಿ,ವೈವಿಧ್ಯತೆ,

ಇತಿಹಾಸ,ಸಾಹಿತ್ಯ ಶ್ರೀಮಂತಿಕೆಯನ್ನು ಅರಿತುಕೊಂಡು ಕನ್ನಡ ಭಾಷೆಯನ್ನು ಅಂತರ್ಗತವಾಗಿಸಿಕೊಂಡು ಅದನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತ ರಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬ್ಯಾಪ್ಟಿಸ್ಟ್ ಸನ್ನಿ ಗುಡಿನೋ , ಕಾಲೇಜು ಹಣಕಾಸು ಅಧಿಕಾರಿಗಳಾಗಿರುವ ವಂದನೀಯ ಫಾದರ್ ಕಿರಣ್ ಮಾರ್ಟಿಸ್,ಉಪ ಪ್ರಾಂಶುಪಾಲರಾದ ಶ್ರೀಮತಿ ಪುಷ್ಪಲತಾ ಅರಸ್,ಶ್ರೀ ಮೊಹ್ಸಿನ್ ಉಲ್ಲಾ, ಕಾರ್ಯಕ್ರಮ ಸಂಯೋಜಕರೂ ಕನ್ನಡ ಉಪನ್ಯಾಸಕರೂ ಆದ ಶ್ರೀ ಅಬ್ದುಲ್ ರಹಮಾನ್, ವಿದ್ಯಾರ್ಥಿ ಪ್ರತಿನಿಧಿಗಳಾದ ಆದಿಲ್ ಅತ್ತರ್,ಕುಮಾರಿ ಶ್ರೇಯಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.ಅತಿಥಿ ಗಣ್ಯರನ್ನು ಶಾಸ್ತೋಕವಾಗಿ ಅರಿಶಿಣ ಕುಂಕುಮದೊಂದಿಗೆ ಪೂರ್ಣಕುಂಭದ ಸ್ವಾಗತ ನೀಡಿ ವೇದಿಕೆಯ ಬಳಿ ಕರೆತರಲಾಯಿತು. ತದನಂತರ ನಾಡಗೀತೆಯೊಂದಿಗೆ ಕರುನಾಡಿಗೆ ನಮಿಸಲಾಯಿತು.

ಪ್ರಾರ್ಥನೆ, ಕನ್ನಡ ನಾಡು ನುಡಿಯನ್ನು ಹಾಡಿ ಹೊಗಳುವ ಗೀತೆ,ನೃತ್ಯ,ಕನ್ನಡ ಭಾಷಾ ನಾಟಕ,ನಗೆ ನಾಟಕದ ಮೂಲಕ ಕಾಲೇಜು ವಿದ್ಯಾರ್ಥಿಗಳು ಕನ್ನಡ ಕಹಳೆಯನ್ನು ಮೊಳಗಿಸಿ ಭರಪೂರ ಮನರಂಜನೆಯನ್ನು ನೀಡಿದರು.ವಿದ್ಯಾರ್ಥಿನಿ ವಿನುತಾ ಸಿ.ಎಚ್ ಕನ್ನಡ ನಾಡಿನ ಉಗಮ ಹಾಗೂ ಸಾರ –ವಿಸ್ತಾರದ ಕುರಿತಂತೆ ಮಾತನಾಡಿದರು.

ಕುಮಾರಿ ಪ್ರಾರ್ಥನಾ ಅತಿಥಿ ಗಣ್ಯರನ್ನು ಸ್ವಾಗತಿಸಿದರು,ಕುಮಾರಿ ನಂದಿತಾ ಕಾರ್ಯಕ್ರಮ ನಿರೂಪಿಸಿದರು ಹಾಗೂ ಕುಮಾರಿ ಫ್ಲಾವಿಯಾ ವಂದಿಸಿದರು.

ಹಣತೆಯ ಬೆಳಕಿನಲ್ಲಿ
ಮನೆ ಮನದೊಳಗೆ
ಬೆಳಕವು ಚೆಲ್ಲಿ
ಮಿಂಚಿನ ಸಂಚಾರ
ತಂದಿದೆ ನೋಡಿರಿಲ್ಲಿ
ಹಣತೆಯ ಬೆಳಕಿನಲ್ಲಿ ॥
ಹೊಸ ಹರುಷವ ತಂದಿದೆ
ಸರ್ವರ ಮುಖದಲ್ಲಿಸ
ಕನಸಿನ ಮನಸಿನಲ್ಲಿ
ಬದುಕಿನ ಭರವಸೆಯು
ಬೆಳಗುವ ಬೆಳಕಿನಲ್ಲಿ ॥
ಸಂಕಷ್ಟಗಳನು ಮರೆಯುತ್ತ
ಕತ್ತಲೆಯು ಸರಿಯುತ್ತ
ದೀಪಾವಳ ಹಬ್ಬವು
ಲಕ್ಷ್ಮಿಯ ಪೂಜಿಸುವ ಈ ದಿನವು
ಪಟಾಕಿಗಳ ಸದ್ದಿನಲ್ಲಿ
ವಿಶೇಷವಾದ ಬೆಳಕಿನಲ್ಲಿ
ಬೋಳಾಡಿ ಬಸವೇಶನ
ಸುಪ್ರಭೆಯು ಎಲ್ಲೆಲ್ಲಿ ॥


ಪೂಜ್ಯ ಶ್ರೀ ನಾಗಭೂಷಣ ಶಿವಯೋಗಿ
ಶಿವಾಚಾರ್ಯ ಮಹಾಸ್ವಾಮಿಗಳು,
ಹೆಬ್ಬಾಳ ಶಿವಯೋಗಿ ಬೃಹನ್ಮಠ, ಹೆಬ್ಬಾಳ,

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16

# ಗಿನ್ನಿಸ್ ದಾಖಲೆಯ ವಿಭೂತಿ ಡಾಕ್ಟರ್'ರನ್ನ ಇನ್ನೆಲ್ಲಿಂತ ಹುಡುಕೋದ್ರಿ?



ಕಲಬುರಗಿಯ ಗೋದುತಾಯಿ ಕಾಲೋನಿಯ ಅಂಚಿನಲ್ಲಿರುವ ಮನೆ 'ಧವಳಗಿರಿ' ಅಂಗಳದಲ್ಲೆಲ್ಲಾ ಆ ಹೊತ್ತಲ್ಲಿ ಕತ್ತಲು ಕವಿದಿದ್ದರೂ ಆ ಮನೆಯ ಮೂಲೆಯಲ್ಲಿದ್ದ ಔಟ್ ಹೌಸ್ನಲ್ಲಿ ಇನ್ನೂ ದೀಪ ಬೆಳಗುತ್ತಿತ್ತು. ಆಗ ಸಮಯ ಬರೋಬ್ಬರಿ ಮಧ್ಯರಾತ್ರಿ 12 ಗಂಟೆಯಾಗಿತ್ತು, ಮನದಲ್ಲೇನೋ ಅಳುಕ ಇದ್ದರೂ ತೋರಗೊಡದೆ ನಾನು ನನ್ನ ಬಂಧು ಒಬ್ಬರನ್ನು ಜೊತೆಗೇ ಕರೆದುಕೊಡು ಹೋಗಿದ್ದೆ, ಹಾಗೆಯೇ ಆ ಮನೆಯ ಗೇಟ್ ತೆರೆದಾಗ ಕಿರ್ರ್... ಎಂದು ಸದ್ದು ಮಾಡುತ್ತ ಅದು ತೆರೆದುಕೊಂಡಿತ್ತು.

ಕತ್ತಲು ತಾನೆ, ಮನೆಯೆಂಗಳದಲ್ಲೆಲ್ಲಾ ಮರ ಗಿಡಗಳು ಬೇರೆ. ಮಧ್ಯರಾತ್ರಿಯಾಗಿತ್ತು. ಮನೆಯಲ್ಲಿ ನಾಯಿ ಇದ್ರೆ ಫಜೀತಿ, ವಾಚಮನ್ ಇದ್ದರೆ ಇನ್ನೂ ಫಜೀತಿ ಎಂದು ಮನ ಒಳಗೇ ಹೊಡೆದುಕೊಳ್ಳುತ್ತಿತ್ತು. ಹಾಗೇ ಹೆಜ್ಜೆ ಹಾಕುತ್ತ ಹೂವಿನ ಗಿಡಗಳ ಸಾಲಿನಿಂದ ನಿಧಾನಕ್ಕೆ ಸಾಗುತ್ತ ವಿದ್ಯುದ್ದೀಪ ಬೆಳಗುತ್ತಿದ್ದ ಔಟ್ ಹೌಸ್ ಕೋಣೆಯಲ್ಲಿ ಇಣುಕಿ ನೋಡಿದೆ, ನನಗಂತೂ ಸಖೇದಾಶ್ಚರ್ಯವಾಯಿತು.

'ಬರ್ರೀ, ಅವಧಾನಿಯವರ ಈಗ 5 ನಿಮಿಷದ ಹಿಂದಷ್ಟೇ ನಾಲ್ಕಾರು ಮಂದಿ ತೋರಿಸ್ಕೊಂಡು ಹೋದ್ರು, ನಿಮಗ ಟೈ ಕೊಟ್ಟಿದ್ನಲ್ಲ, ಹಂಗೇ ಪುಸ್ತಕ ಓದಕೊಂತ ಕುಂತೀನಿ, ಬರ್ರಿ, ಎಲ್ಲಿ ನಿಮ್ಮ ರಿಲೇಟೀವ್?' ಎಂದು ನಸುನಗುತ್ತಲೇ ನನ್ನನ್ನು ಬರಮಾಡಿಕೊಂಡವರು ಹೆಸರಾಂತ ತಜ್ಞ ವೈದ್ಯ ಡಾ. ಶಾಂತವೀರ ಸುಂಕದ. ಅವರ ಮೊಗದಲ್ಲಿನ ಲವಲವಿಕೆ, ಮಧ್ಯರಾತ್ರಿಯಾದರೂ ಯಾವುದೇ ದಣಿವು ಇಲ್ಲದ, ಮೊಗದಲ್ಲಿ ಬೇಸರವಂತೂ ಲವಲೇಶವೂ ಇಲ್ಲದ, ಮನಸ್ಸಿಗೆ ಮುದ ನೀಡುವಂತಹ ಅವರ ಮಾತುಗಳನ್ನಾಲಿಸಿ ಅವಾಕ್ಕಾದೆ.

ಹಗಲು ಪೂರಾ ಕಲಬುರಗಿ/ ಸೇಡಂನಲ್ಲಿ ಆರೋಗ್ಯ ಇಲಾಖೆಯ ಸರ್ವ ಜವಾಬ್ದಾರಿಯುತ, ಹೊಣೆಗಾರಿಕೆಯ ಕೆಲಸ ಮಾಡಿ ಬಂದವರು, ಅಷ್ಟಿದ್ದರೂ ಮಧ್ಯರಾತ್ರಿಯಾದರೂ ದಣಿಯದ ದೇಹ, ಕಲಬುರಗಿಯಲ್ಲಿರೋ ಮನೆಯಲ್ಲಿ ಹಾಗೇ ರೋಗಿಗಳನ್ನು ನೋಡುವ ಮನಸ್ಸು. ನಸುನಗುತ್ತ ಮಾತನಾಡಿಸುವ ಸನ್ನಡತೆ– ಸಾತ್ವಿಕತೆ, ವೈದ್ಯೋ ನಾರಾಯಣೋ ಹರಿಃ ಅಂತ ಇತಂಹವರನ್ನೇ ನೋಡಿ ಹೇಳಿರಬೇಕು ಅಂದುಕೊಂಡೆ. ರಾತ್ರಿ ಭಾಳಾಗ್ಯಾದ ಅಂದ್ಕೊಂಡ್ರೇನು, ಇದು ನನಗ ಮಾಮೂಲು. ಜನ ಕೆಲವರು ನನ್ನ ಕೈಯಲ್ಲೇ ಚಿಕಿತ್ಸೆ ಅಂತ ಬಸಿ ಬರ್ತಾರ, ನಾನು ತ್ತ ನನ್ನ ನೌಕರಿಗೂ ಅನ್ಯಾಯ ಮಾಡೋನಲ್ಲ, ಇತ್ತ ಜನರಿಗೂ ಬಿಡೋನಲ್ಲ, ಅದ್ಕ ಈ ಟೈಮಿನ್ಯಾಗ ಎಲ್ಲಾನ ಮಾಡೋದು, ಜನರ ರೋಗ ರುಜಿನ ಗುಣಮಾಡೋ ಶಕ್ತಿ ನನ್ನಲ್ಲಿ ಭಗತಂ ಕೊಟ್ಟಾನಂದ್ರ ಅದನ್ನ ಸದ್ವಿನಿಯೋಗ ಮಾಡೋಣಲ್ಲ ಅನ್ನೋದೆ ನನ್ನ ಮನದಾಶೆ ಅಂತ ಡಾ. ಸುಂಕದ ಏಹಳಿದ ಮಾತಲ್ಲಿ ವರ ಇಡೀ ವೈದ್ಯ ಬಕುದಿನ ನಿಲುವೇ ಅಡಗಿತ್ತು.

### ಜನ ಗುಣಮುಖರಾಗೋದು ನಿಶ್ಚಿತ:

2000 ನೇ ಇಸ್ವಿಯ ಸಮಯವದು, ಡಾ. ಸುಂಕದ ಸೇಡಂ ಹಾಗೂ ಕಲಬುರಗಿಯಲ್ಲಿ ಆರೋಗ್ಯ ಇಲಾಖೆ ಮಹತ್ವದ ಹುದ್ದೆಯಲ್ಲಿದ್ದಾಗ ನನಗೂ ಅವರಿಗೂ ಪರಿಚಯವಾಗಿತ್ತು. ಪರಿಚಯ ಸ್ನೇಹಕ್ಕೆ ತಿರುಗಿತ್ತಲ್ಲದೆ ಅವಕಾಶ ಸಿಕ್ಕಾಗೆಲ್ಲಾ ಅವರ ಕಲಬುರಗಿ ಮನೆಗೆ ಹೋಗಿ ಮಾತುಕತೆ ನಡೆಸುತ್ತಿದ್ದೆ. ಇವರು ಆರೋಗ್ಯ ಇಲಾಖೆಯಲ್ಲಿ ಆಡಳಿತಗಾರರಷ್ಟೇ ಅಲ್ಲ, ಅತ್ಯುತ್ತಮ ವೈದ್ಯರು ಎಂಬುದು ಗೊತ್ತಾದಾಗಲೇ ನಾನು ಬಂಧು ಒಬ್ಬರು ಇವರನ್ನೇ ಕಾಣಬೇಕೆಂದು ಹೇಳಿದಾಗ ಅವರೊಂದಿಗೆ ರಾತ್ರಿ ಮನೆಗೆ ಹೋಗಿದ್ದು.

ಹಣದ ಹಪಾಹಪಿ ಹೀಗೆ ಮಾಡ್ಸತದರಿ, ರಾತ್ರಿಯಾದರೂ ನೋಡ್ತಾರಂದ್ರ ದುಡ್ಡಿಗಲ್ಲದೆ ಮತ್ಯಾಕೆ..? ಅಂತ ನೀವೇನಾದರೂ ಅಂದುಕೊಂಡ್ರೆ ಅದು ಶುದ್ಧ ತಪ್ಪು, ಯಾಕಂದ್ರೆ ಡಾ. ಸುಂಕದ ತಮ್ಮ ಬಳಿ ಅನಾರೋಗ್ಯವೆಂದು ಬಂದವರಿಂದ ದುಡ್ಡು ಪಡೆದದ?ದೆ? ಅಪರೂಪ! ನೀವು ಪೇಪರದೋರು, ಹೀಂಗ ಹೇಳ್ತೀರಿ ಅಂದ್ರ, ನಾನಿದ್ದಾಗಲೇ ಅವರ ಬಳಿ ಬಂದು ಹೋಗುವ ಹತ್ತಾರು ಪೇಷಂಟ್ಗಳಿಂದಲೂ ಅವರು ಹಣ ಪಡೆದದ್ದು ಕಂಡವನಲ್ಲ, ಉಭಯಕುಶಲೋಪರಿ ವಿಚಾರಿಸುತ್ತಲೇ ಚಿಕಿತ್ಸೆ ನೀಡುತ್ತ ವೈದ್ಯ ಸೇವೆ ಅವರಿಗೆ ನೀಡಿ ಅದಕ್ಕೆ ಪ್ರತಿಯಾಗಿ ನಸುನಗುತ್ತಲೇ ಅವರನ್ನು ಬೀಳ್ಕೊಡುವ, ಬೇಗ ಗುಣಮುಖರಾಗಿರೆಂದು ಹಾರೈಸುವ ಎತ್ತರದ ವ್ಯಕ್ತಿತ್ವ ಅವರದಾಗಿತ್ತು.

ಒಳಗೆ ಮೆಡಿಕಲ್, ಎಕರೇ, ಸ್ಕ್ಯಾನಿಂಗ್, ಬ್ಲಡ್ ಶುಗರ್, ಪಾಥಲಜಿ, ಇನ್ನಿನ್ನೇನೋ ಎಲ್ಲ ಲ್ಯಾಬ್ಗಳನ್ನೆಲ್ಲ ಒಳಗೊಳಗೆ ಹೊಂದಿರುವ ಕ್ಲಿನಿಕ್, ದಾಮ್ ದುಪ್ಪಟ್ಟು ಶುಲ್ಕ... ನಾಲ್ಕಾರು ಗಂಟೆ ಕಾಯಿಸಿದರೂ ಕೊನೆಗೂ ರೋಗಿಯ ಮೈ– ಕೈ ಮುಟ್ಟದೆ, ಎದೆಗೆ ಸ್ಟೆತೋಸ್ಕೋಪ್ ಹಚ್ಚದೆ, ನಾಡಿ ಮಿಡಿತ ಅರಿಯದೆ ಅದು, ಇದು ಎಂದು ಹತ್ತಾರು ಪರೀಕ್ಷೆಗಳನ್ನ ಮಾಡಿಸಿ ಆ ವರದಿ ಬಂದ ನಂತರವಷ್ಟೇ ಪ್ರಿಸ್ಕ್ರಿಪಶನ್ ಗೀಚಿ ಸಾಗಹಾಕುವ ಈಗಿನ ಪೀಳಿಗೆಯ ವೈದ್ಯರಂತಿರಲಿಲ್ಲ ಡಾ. ಸುಂಕದ. ಅವರೇ ಭಿನ್ನ, ಅವರ ಶೈಲಿಯೇ ಭಿನ್ನವಾಗಿತ್ತು, ರೋಗಿಗಳನ್ನು ನೋಡುವ, ಅವರನ್ನು ಪರಿಗಣಿಸುವ ಅವರ ದೃಷ್ಟಿಕೋನವೇ ಭಿನ್ನವಾಗಿತ್ತು. ಅದಕ್ಕೇ ಇರಬೇಕು, ಡಾ. ಸುಂಕದ ಅವರಿಂದಲೇ ಚಿಕಿತ್ಸೆ ಪಡೆಯುವ, ಆಪರೇಷನ್ ಮಾಡಿಸಿಕೊಳ್ಳುವವರ ಸಂಖ್ಯೆಯೇ ಹೆಚ್ಚಿತ್ತು.

### ವಿಭೂತಿ ಡಾಕ್ಟರ್:

ಹೆಚ್ಚಿನ ಅವಧಿ ಶುಭ್ರ ವಸ್ತಧಾರಿಯಾಗಿರುತ್ತಿದ್ದ ಡಾ. ಸುಂದಕ ಮನಸ್ಸು ಅವರು ಧರಿಸುವ ಬಟ್ಟೆಯಷ್ಟೇ ಶುಭ್ರವಾಗಿರುತ್ತಿತ್ತು. ಹಣೆಯ ಮೇಲೆ ಢಾಳ ವಿಭೂತಿ ಬೇರೆ. ಕನ್ನಡಪ್ರಭ ಪತ್ರಿಕೆಯ ರಾಜ್ಯ ಮಟ್ಟದ ಪುರವಣಿಗೆ ನಾನು ಇವರ ಬಗ್ಗೆ ಬರೆಯಲು ಹೋದಾಗ ನಮ್ಮಿಬ್ಬರ ನಡುವೆ ಸಮಯ ಕಳೆದದ್ದೆ ಗೊತ್ತಾಗಲಿಲ್ಲ. ತಮ್ಮ ಹಣೆಯ ವಿಭೂತಿ ಬಗೆಗಿದ್ದ ಬಲು ಸ್ವಾರಸ್ಯಕರ ಸಂಗತಿಯೊಂದನ್ನ ಡಾ. ಸುಂಕದ ಹೇಳಿದ್ದರು.

70 ರ ದಶಕದಲ್ಲಿ ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆಯೇ ಅಪರೂಪದ್ದಾಗಿತ್ತು. ದರಲ್ಲೂ ಲೆಪೂ?ರೀಸ್ಕೋಪಿಕ್ ಶಸ್ತ್ರಚಿಕಿತ್ಸೆ ಇನ್ನೂ ವಿರಳವಾಗಿತ್ತು. ಇವೆರಡರಲ್ಲೂ ಎತ್ತಿದ ಕೈಯಾಗಿದ್ದವರು ಡಾ. ಸುಂಕದ. ಒಂದೇ ದಿನ ಶಹಾಪುರದ ಸರಕಾರಿ ಆಸ್ಪತ್ರೆಯಲ್ಲಿ ಸತತ 8 ತಾಸಿನಲ್ಲಿ 201 ಶಸ್ತ್ರಚಿಕಿತ್ಸೆ ಮಾಡಿ ಗಿನ್ನಿಸ್ ಬುಕ್ ಆಫ್ ರೆಕಾಡ್ಸ್‌ನಲ್ಲಿ ದಾಖಲೆ ಬರೆದವರು ಸುಂಕದ. ಈ ಶಿಬಿರದಲ್ಲಿ ಇವರು ಆಪರೇಷನ್ ದಿರಿಸು ತೊಟ್ಟು ಒಳಗೆ ಹೋದರೆ ಅಲ್ಲಿದ್ದ ಮಹಿಳೆಯರೆಲ್ಲರ ಮೊಗದಲ್ಲಿ ದುಗುಡ ಕಂಡು ಡಾ. ಸುಂಕದ ಗಾಬರಿಯಾದರಂತೆ. ಯಾಕೆ ಹೀಗೆ? ಎಂದು ಕೇಳಿದಾಗ ಆಪರೇಷನ್ನೆಂದು ಬಂದು ಸೇರಿದ್ದ ನೂರಾರು ಮಹಿಳೆಯರು ಏನೆಂದು ಹೇಳಿದರು ಗೊತ್ತೆ? ಹಣಿ ಮ್ಯಾಗ ವಿಭೂತಿ ಹಚ್ಕೊಂಡೋರು ಡಾಗ್ದರ್ ಇದ್ರಷ್ಟೇ ನಾವು ಆಪರೇಷನ್ ಮಾಡ್ಸಕೋಂತೀವಿ, ಇಲ್ಲಾಂದ ನಾವು ಮನಿಗೆ ಹೋಗ್ತೀವಿ ಅಂತ ಗುಡುಗಿದಾಗ, ಮುಖಕ್ಕೆ ಮಾಸ್ಕ್ ಧರಿಸಿ, ಕೈಗೆಲ್ಲಾ ಕೈಗವಸು ತೊಟ್ಟು ಆಪರೇಷನ್ ದಿರಿಸಲ್ಲಿದ್ದ ಡಾ. ಸುಂಕದ ತಮ್ಮ ಮುಖದ ಮಾಸ್ಕ್ ತೆರೆದು ನೋಡ್ರಲ್ಲಿ ನಾನೇ ಇದ್ದಿನ್ರವ್ವಾ... ಎಂದು ಹಣೆಯ ಮೇಲಿನ ವಿಭೂತಿ ತೋರಿಸಿಸಬೇಕಾಯ್ತಂತೆ! ಇಷ್ಟೊಂದು ಜನಪ್ರೀಯತೆ ಆ ವಿಭೂತಿ ಇವರಿಗೆ ತಂದುಕೊಟ್ಟಿತ್ತು. ಸದಾ ವಿಭೂತಿ ಧರಿಸಿಕೊಂಡೇ ಇರುತ್ತಿದ್ದ ಡಾ. ಸುಂಕದ ಅವರಿಗೆ ಹಳ್ಳಿಗಾಡಲ್ಲಿನ ಜನರಂತೂ ವಿಭೂತಿ ಡಾಕ್ಟರ್ ಅಂತಲೇ ಕರೆಯುತ್ತಿದ್ದರಂತೆ!

ಆರೋಗ್ಯ ಇಲಾಖೆಯ ರಾಜ್ಯ ಮಟ್ಟದ ಹುದ್ದೆಯವರೆಗೂ ತಲುಪಿ ನಿವೃತ್ತರಾದ ಡಾ. ಸುಂಕದ ತಮ್ಮಲ್ಲಿನ ವೈದ್ಯ ಎಂದು ಕೆಲಸವಿಲ್ಲದೆ ಸೋಮಾರಿಯಾಗಿ ಕುಳಿತುಕೊಳ್ಳುವಂತೆ ಮಾಡಿದವರಲ್ಲ. ನಿವೃತ್ತರಾದರೂ ಇಲ್ಲಿನ ಬಸವೇಶ್ವರ ಆಸ್ಪತ್ರೆಯಲ್ಲಿ ಬಂದು ಫ್ಯಾಮಿಲಿ ಪ್ಲ್ಯಾನಿಂಗ್ ಆಪರೇಷನ್ಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅನೇಕ ಸಿಬಿರಗಳಲ್ಲಿ ಸ್ವಯಂ ಆಸಕ್ತಿಯಿಂದ ಬಂದು ಕೆಲಸ ಮಾಡುತ್ತಿದ್ದರು. ಅಲ್ಲಲ್ಲಿ ಕಂಡಾಗ ನಗುತ್ತಲೇ ನಮಗೆಲ್ಲ ಶುಭ ಕೋರುವವರು.

'ಕನ್ನಡಪ್ರಭ'ದಲ್ಲಿ ಕಲಬುರಗಿಯ ವಿಭೂತಿ ವೈದ್ಯ ಶಿರೋನಾಮೆಯಡಿಯಲ್ಲೇ ತಮ್ಮ ಕುರಿತಾಗಿ ಜುಲೈ 1 ರ ವೈದ್ಯರ ದಿನದಂದು ಮೂಡಿಬಂದ ಲೇಖನ ಓದಿದ ನಂತರ ತಕ್ಷಣ ಕರೆ ಮಾಡಿ ನನಗೆ 'ಏನ್ರಿ ಅವಧಾನಿ ನನಗೆ ವಿಭೂತಿ ಡಾಕ್ಟರ್ ಮಾಡಿಬಿಟ್ರಿ, ರಾಜ್ಯಾದ್ಯಂತ ನನ್ನ ಅಭಿಮಾನಿಗಳು, ಶಿಷ್ಯರು, ಸಹೋದ್ಯೋಗಿಗಲೆಲ್ಲ ಕರೆ ಮಾಡಿ ಶುಭ ಕೋರಿದ್ರು, ನಿಮ್ಮ ಅಭಿಮಾನಕ್ಕ ಧನ್ಯವಾದಗಳು' ಸುಂಕದ ಸರ್ ವಿನೀತರಾಗಿ ಹೇಳಿದ್ದನ್ನ ಮರೆಯಲಾಗದು.

### ಬಿಗ್ ಬಿ ಅಮೀತಾಬ್ ಬಚ್ಚನ್ ಕರೆ ಮಾಡಿದ್ದರಂತೆ!

ಡಾ. ಸುಂಕದ ಅಮೀತಾಬ್ ಬಚ್ಚನ್ ಅಭಿಮಾನಿಯಾಗಿದ್ದರು. ತಮ್ಮ ಕುಟುಂಬ ಕಲ್ಯಾಣ ಶಸ್ತ್ರಕ್ರಿಯೆಗಳ ದಾಖಲೆ ಕಂಡು ಅಮೀತಾಬ್ ಬಚ್ಚನ್ ಅವರೇ ಕರೆ ಮಾಡಿ ಮೆಚ್ಚುಗೆ ಸೂಚಿಸಿದ್ದ ಕ್ಷಣವನ್ನ ಡಾ. ಸುಂಕದ ಸದಾ ಸ್ಮರಿಸುತ್ತಿದ್ದರು.

ತಮ್ಮ ಹುಟ್ಟು ಹಬ್ಬದ ದಿನ ಸಮಾಜಕ್ಕೆ ಒಳಿತಾಗೋದನ್ನ ಮಾಡುತ್ತಿರೋರರಿಗೆ ತಾವೇ ನೇರವಾಗಿ ಕರೆ ಮಾಡಿ ಅಭಿನಂದಿಸೋದು ಅಮೀತಾಬ್ ಬಚ್ಚನ್ ಹೊಂದಿದ್ದ ಸತಂಪ್ರದಾಯವಾಗಿತ್ತು. ಆ ಸಂಪ್ರದಾಯದಲ್ಲಿ ಸುಂಕದ ಸಾಧನೆ ಅಮೀತಾಬ್ ಗಮನ ಸೆಳೆದಿತ್ತು.

ಇವರ ಅದೃಷ್ಟ ನೋಡಿ, ಯಾರನ್ನ ಇವರು ಅಭಿಮಾನದಿಂದ, ರೋಲ್ ಮಾಡೆಲ್ ಎಂದು ಕಾಣುತ್ತಿದ್ದರೋ, ಯಾರನ್ನ ತುಂಬ ಮೆಚ್ಚಿಕೊಂಡು ಬೀಗುತ್ತಿದ್ದರೋ ಅವರೇ ಇವರಿಗೆ ಕರೆ ಮಾಡಿ ಶುಭ ಕೋರಿದ್ದಲ್ಲದೆ ಈ ಜನ್ಮದಲ್ಲಿ ನನಗಂತೂ ಹಳ್ಳಿಗಾಡು ಸುತ್ತಿ ಅಲ್ಲೆಲ್ಲಾ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಮಾಡೋ ಯೋಗಾಯೋಗವಂತೂ ಇಲ್ಲ, ನಿಮ್ಮ ಕೆಲಸಕ್ಕೆ

ನನ್ನದೊಂದು ಬಿಗ್ ಸೆಲ್ಯೂಟ್ ಎಂದು ಅಮಿತಾಬ್ ಬಚ್ಚನ್ ಹೇಳಿದ್ದರೆಂದು ಸುಂಕದ ಪುಲಕಿತಗೊಂಡು ಹೇಳುತ್ತಿದ್ದರು. ಇದು ನಿಜಕ್ಕೂ ನೃಪತುಂಗನ ನೆಲ ಕಲಬುರಗಿಯ ಹೆಮ್ಮೆಯಲ್ಲದೆ ಮತ್ತೇನು?

### ಹಡೆದವ್ವನ ಹಂಬಲದಂತೆ ವೈದ್ಯನಾದವರು

ಡಾ. ಸುಂಕದ ಹುಟ್ಟಿದ್ದು 01.01.1944, ಚಿಂಚೋಳಿಯಲ್ಲಿ. ತಂದೆ ಬಸವಣಪ್ಪ, ತಾಯಿ ಶಾಂತಾಬಾಯಿ. 75 ವರ್ಷದ ಇಳಿವಯಸ್ಸಿನವರೆಗೂ ಅವಿರತ ವೈದ್ಯಕೀಯ ಸೇವೆ ಮಾಡಿದವರು. ಇವರ ನಿರಂತರ ಸೇವಾ ಕೈಂಕರ್ಯದ ಹಿಂದಿತ್ತು ಇವರ ಹಡೆದವ್ವನ ಪ್ರೇರಣೆ. ಚಿಂಚೋಳ್ಯಾಗ ನಮ್ಮವ್ವ ಅನಾರೋಗ್ಯ ಕಾಡಿದಾಗ ದೂರದ ಝುಹೀರಾಬಾದ್ ದವಾಖಾನಿಗೆ ಕರೆದೋಯ್ದಿದ್ರು ನಮ್ಮಪ್ಪ. ಅಲ್ಲಿನ ಡಾಕ್ಟರ್ ನಮ್ಮವ್ವನ ಯೋಗಕ್ಷೇಮ ವಿಚಾರಿಸಿ ಆಡಿದ ಮಾತುಗಳು, ನೀಡಿದ ಸಲಹೆಗಳೇ ನಮ್ಮವ್ವಗ ತನ್ನ ಮಗನನ್ನ ಡಾಕ್ಟರ್ ಮಾಡಬೇಕು ಅನ್ನೋವ್ಹಂಗ ಆಯ್ತು. ಯಾವ ಜಾಗದಾಗ ಯಾರೊಬ್ಬರೂ ಡಾಕ್ಟರ್ ಇಲ್ಲವೋ ಅಂಥಲ್ಲಿ ನೀ ಡಾಕ್ಟರ್ ಆಗಿ ಕೆಲ್ಸ್ ಮಾಡು, ಅದ್ಕೇ ನೀ ಡಾಕ್ಟರ್ ಕೋರ್ಸ್ ಕಲಿಯಪ್ಪ ಎಂದ ಅವ್ವನ ಮಾತಿನಂತೆಯೇ ಸುಂಕದ ನಿಷ್ಠೆಯಿಂದ ಓದಿದವರು. ನಮ್ಮಪ್ಪ ನನಗ ಕುಟುಂಬದ ಬಿಸಿನೆಸ್ ಬಟ್ಟಿ ದುಕಾನದಾಗ್ ಕೂಡಸ್ಲಿಕ್ಕಿ ಸಿದ್ಧನಾಗಿದ್ದರೂ ಅವ್ವ ತನ್ನ ಹಠ ಬಿಡಲಿಲ್ಲ. ನನಗ ಕಲಬುರಗಿಯಾಗ ಇಟ್ಟು ರಾಂಪೂರೆ ಕಾಲೇಜಿನಾಗ ಎಬಿಬಿಎಸ್ ಮುಗಿಸಿದೆ. ವೈದ್ಯನಾಗಿ ಸೇವೆ ಮಾಡುತ್ತಲೇ ಹುಬ್ಬಳ್ಳಿ ಕಿಮ್ಸ್ನಾಗ ಸ್ತ್ರೀರೋಗ ತಜ್ಞ ಸ್ನಾತಕೋತ್ತರ ಪದವಿಧರನಾದೆ. ಸರಕಾರಿ ಸೇವೆಯಲ್ಲಿದ್ದರೂ ನನ್ನಲ್ಲಿನ ವೈದ್ಯ ಸದಾ ಜಾಗೃತನಾಗಿರುವಂತೆ ನೋಡಿಕೊಂಡೆ ಎಂದು ಮಾತಿಗೆ ಕುಂತಾಗೆಲ್ಲಾ ಡಾ. ಸುಂಕದ ಧನ್ಯತೆಯ ಭಾವದಿಂದ ಈ ಮಾತುಗಳನ್ನ ಮೆಲಕು ಹಾಕುತ್ತಿದ್ದರು. ತಾಯಿ ಹಂಬಲದಂತೆಯೇ ವೈದ್ಯನಾಗಿ ಹಳ್ಳಿ ಗಾಡಲ್ಲೇ ಜನರ ಸೇವೆ ಮಾಡಿರೋದು ಡಾ. ಸುಂಕದ ಅವರ ಜೀವಮಾನದ ಅತ್ಯಂತ ಶ್ರೇಷ್ಠ ಸಾಧನೆ ಎನ್ನಬಹುದು.

### ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಕೆಲಸವಾಗಲೇ ಇಲ್ಲ

ಕಲಬುರಗಿ ಭಾಗದಲ್ಲಿರುವ ಸಾಧಕರ ಮಟ್ಟಿಗೆ ಇದನ್ನ ದುರಂತ ಎಂದೇ ಹೇಳಬೇಕು. ಇಲ್ಲಿ ಮಹಾನ್ ಸಾಧಕರಿಗೆ ಕೊರತೆ ಇಲ್ಲ, ಆದರೆ ಅಂತಹ ಸಾಧಕರಿಗೆ ಗುರುತಿಸಿ ಗೌರವಿಸುವ ಮನಸ್ಸುಗಳಇಗೆ ಕೊರತೆ ತುಂಬಾ ಇದೆ. ಕುಟುಂಬ ಕಲ್ಯಾಣ ರಂಗದಲ್ಲಿನ ಅಪ್ರತಿಮ ಸಾಧನೆ ಡಾ. ಸುಂಕದ ಮಾಡಿದ್ದರೂ ಇವರಿಗೆ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗೌರವಿಸುವ ಕೆಲಸವಾಗಲೇ ಇಲ್ಲ. ಈ ಕೊರಗು ಅವರಲ್ಲೂ ಇತ್ತು ಎಂಬುದು ಕೊನೆಗೆ ಅವರನ್ನು ಕಂಡಾಗ ಅವರ ಮಾತಲ್ಲಿ ಕಂಡು ಬಂತು. ಸಾಧಕನೊಬ್ಬನಿಗೆ ಅಂತಹ ಆಶೆ, ಅಭಿಲಾಷೆ ಇರಲೇಬೇಕು, ಹಾಗಂತ ಅವರೇ ಅದನ್ನ ಬಾಯಿಬಿಟ್ಟು ಹೇಳುವಂತಾಗಬಾರದು, ಹಾಗೇ ಯಾರು ಬಯಸಲೂಬಾರದು. ಇವರ ಸೇವೆ ಗೊತ್ತಿದ್ದರೂ ಗೊತ್ತಿಲ್ಲದವರಂತೆ ಜಾಣ ಕುರುಡಾಗುವ, ಸರಕಾರದ ಹಂತದಲ್ಲಿದ್ದರೂ ಇಂತಹವರ ಸೇವೆಗೆ ಪುರಸ್ಕಾರ ನೀಡುವ ತಾಕತ್ತಿದ್ದರೂ ಅದನ್ನು ನಮ್ಮ ಸಾಧಕರಿಗಾಗಿ ಬಳಸದ ನಮ್ಮವರ ದರ್ಪದ ಧೋರಣೆಗೆ ಏನೆನ್ನಬೇಕೋ ಗೊತ್ತಾಗುತ್ತಿಲ್ಲ. ಪುರಸ್ಕಾರಗಳಿಗಾಗಿ ಯಾರೂ ಸಾಧನೆ ಮಾಡೋದಿಲ್ಲವೆಂಬುದು ನಿಜವಾದರೂ ಸಾಧಕನಿಗೆ ಪುರಸ್ಕಾರಗಳು ತಾನೇ ಅರಸಿ ಬಂದಾಗ ಆತನಿಗಾಗುವ ಸಂತೋಷಕ್ಕೆ ಪಾರವೇ ಇರೋದಿಲ್ಲ. ಒಳ್ಳೆಯ ಮಾತುಗಳು, ಬೆನ್ನು ತಟ್ಟುವುದು, ಗೌರವ– ಪುರಸ್ಕಾರ ನೀಡೋದು ಬಿಟ್ಟರೆ ಸಾಧನೆಗೆ ಪ್ರತಿಯಾಗಿ ಸಾಧಕರಿಗೆ ಸಮಾಜ, ಸರಕಾರ, ನಾವೆಲ್ಲರೂ ಇನ್ನೇನು ಕೊಡಲು ಸಾಧ್ಯ ಹೇಳಿ ನೋಡೋ?

### ಡಾ||ಶಾಂತವೀರ ಸುಂಕದ ಅಂದರೆ.

1) ಹುಟ್ಟಿದ್ದು 01.01.1944, ಚಿಂಚೋಳಿಯಲ್ಲಿ. ತಂದೆ ಬಸವಣಪ್ಪ, ತಾಯಿ ಶಾಂತಾಬಾಯಿ.

2) ದಾಖಲೆಯ 2, 18, 778 ಉದರ ದರ್ಶಕ ಶಸ್ತ್ರ ಚಿಕಿತ್ಸೆ ಮಾಡಿದವರು

3) ಒಂದೇ ದಿನ ಶಹಾಪುರದ ಸರಕಾರಿ ಆಸ್ಪತ್ರೆಯಲ್ಲಿ ಸತತ 8 ತಾಸಿನಲ್ಲಿ 201 ಶಸ್ತ್ರಚಿಕಿತ್ಸೆ: ಗಿನ್ನಿಸ್ ಬುಕ್ ಆಫ್ ರೆಕಾಡ್ಸ್‌ನಲ್ಲಿ ದಾಖಲೆ

4) ಕನ್ನಡ ಸಾಹಿತ್ಯ ಪ್ರೇಮಿ, ಬೀಚೀ ಸಾಹಿತ್ಯಕ್ಕೆ ಮಾರುಹೋದ ವೈದ್ಯ

5) ಉಪನ್ಯಾಸಕನಾಗಬೇಕಾಗಿದ್ದವರು ವೈದ್ಯಸೇವೆಗಳಲ್ಲಿ ತೊಡಗಿಸಿಕೊಂಡವರು.

6) ಸಾಮಾಜಿಕ ಸೇವೆಯಲ್ಲಿಯೂ ತೊಡಗಿಸಿಕೊಂಡು ಜನಮನ ಸೆಳೆದವರು

7) ಒಂದೇ ದಿನದಲ್ಲಿ ವಿವಿಧ ಆರು ಆಸ್ಪತ್ರೆಗಳಲ್ಲಿ ಏರ್ಪಡಿಸಿದ ಶಸ್ತ್ರಚಿಕಿತ್ಸಾ ಶಿಬಿರದಲ್ಲಿ 76 ಶಸ್ತ್ರಚಿಕಿತ್ಸೆ

8) 27.12.1977 ರಲ್ಲಿ ಬೀದರ ಜಿಲ್ಲೆಯ ಭಾಲ್ಕಿಯಲ್ಲಿ ಇವರನ್ನೊಳಗೊಂಡ 40 ವೈದ್ಯರ ತಂಡ ಒಂದೇ ದಿನದಲ್ಲಿ 1001 ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿದ್ದು ಆಗ ಬಿಬಿಸಿ ಲಂಡನ್ನಲ್ಲಿ ಪ್ರಸಾರ

9) ಅಮ್ಮ ಪ್ರಶಸ್ತಿ, ವೈದ್ಯಶ್ರೀ, ವೈದ್ಯವಿಭೂಷಣ ಪ್ರಶಸ್ತಿ ವಿಜೇತ, ಚಿಂಚೋಳಿ ಶರಣ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪಟ್ಟ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಪ್ರಶಸ್ತಿಗಳಿಗೆ ಭಾಜನ

10) ಉಪಶಸ್ತ್ರ ತಜ್ಞ, ಜಿಲ್ಲಾ ವೈದ್ಯಾಧಿಕಾರಿ, ರಾಜ್ಯ ಆರೋಗ್ಯ ಸಹ ನಿರ್ದೇಶಕ ಹುದ್ದೆ ಅಲಂಕೃತರು

11) 75 ವರ್ಷದ ಇಳಿವಯಸ್ಸಿನವರೆಗೂ ಅವಿರತ ವೈದ್ಯಕೀಯ ಸೇವೆ

12) ಗ್ರಾಮೀಣ ಮಟ್ಟದ ಮಹಿಳೆಯರಲ್ಲಿ ಆರೋಗ್ಯ ಸಂಬಂಧಿತ, ಅದರಲ್ಲೂ ಕುಟುಂಬ ಶಸ್ತ್ರಕ್ರಿಯೆ ಸಂಬಂಧಿತವಾಗಿ ಜಾಗೃತಿಯಲ್ಲಿ ಮುಂಚೂಣಿಯಲ್ಲಿದ್ದವರು

13) 1/1/2016 ವರೆಗೆ ಗ್ರಾಮೀಣ ಮಟ್ಟದಲ್ಲಿ ಒಟ್ಟು 5002 ಶಿಬಿರಗಳಲ್ಲಿ ಪಾಲ್ಗೊಂಡು ದಾಖಲೆಯ 218778 ಉದರ ದರ್ಶಕ ಶಸ್ತ್ರಚಿಕಿತ್ಸೆ ಮಾಡಿದ ಸಾಧನೆ

14) ಕೊನೆಯುಸಿರು ಇರುವವರೆಗೂ ಶಾಂತಾದೇವಿ ಬಸವಣ್ಣಪ್ಪ ಸ್ಮಾರಕ, ಅಶ್ವಿನಿ ಹೆರಿಗೆ, ಬಂಜೆತನ ನಿವಾರಣೆ,ಕುಟುಂಬ ಕಲ್ಯಾಣ ಹಾಗು ಉದರ ದರ್ಶಕ ಶಸ್ತ್ರ ಚಿಕಿತ್ಸಾ ಕೇಂದ್ರ ಸೇಡಂನಲ್ಲಿ ಜನಸೇವೆ.

# ಮಹಾತ್ಮ ಗಾಂಧೀಜಿಯನ್ನು ಕೊಲ್ಲಲು ಕಾರಣ





ನಾಥುರಾಮ್ ಗೋಡ್ಸೆ

ಕೇವಲ 55 ಕೋಟಿ ರೂಪಾಯಿಗಳ ಕಾರಣದಿಂದಾಗಿ ಮಹಾತ್ಮ ಗಾಂಧಿಗೆ ಕೊಲ್ಲಲಾಯಿತಾ.? ಇಲ್ಲಿದೆ ಆ ರಹಸ್ಯ ಮಾಹಿತಿ.

30 ಜನವರಿ 1948 ರ ಆ ಸಂಜೆ ಭಾರತೀಯ ಇತಿಹಾಸಕ್ಕೆ ಎಂದಿಗೂ ಮರೆಯಲಾಗದ ನೋವು ತಂದು ಕೊಟ್ಟ ದಿನವಾಗಿದೆ, ಹೌದು ಆ ದಿನ ನಾಥುರಾಮ್ ಗೋಡ್ಸೆ ಮಹಾತ್ಮ ಗಾಂಧಿಯನ್ನು ಸಾರ್ವಜನಿಕ ಸ್ಥಳದಲ್ಲಿ ಗುಂಡಿಕ್ಕಿ ಕೊಂದಿದ್ದರು. ಮಹಾತ್ಮ ಗಾಂಧಿಯವರ ಹತ್ಯೆಯಲ್ಲಿ ಒಟ್ಟು 8 ಜನರು ಆರೋಪಿಗಳಾಗಿದ್ದಾರೆ, ಅದರಲ್ಲಿ 5 ಜನರಿಗೆ ಶಿಕ್ಷೆ ಮತ್ತು ಉಳಿದ ಮೂವರನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಲಾಗುತ್ತದೆ.

ಅವರಲ್ಲಿ ಸರ್ಕಾರಿ ಸಾಕ್ಷಿಯಾದ ಕಾರಣ ದಿಗಂಬಾರ್ ಬಡಗೆ ಬಿಡುಗಡೆ ಮಾಡಲಾಯಿತು. ಎರಡನೆಯ ಆರೋಪಿ ಶಂಕರ್ ಕಿಸ್ತೈಯಾ ಅವರನ್ನು ಹೈಕೋರ್ಟ್ ಬಿಡುಗಡೆ ಮಾಡಿತು ಮತ್ತು ಮೂರನೇ ಆರೋಪಿ ವೀರ್ ಸಾವರ್ಕರ್ ಅವರನ್ನು ಸಾಕ್ಷ್ಯಾಧಾರಗಳ ಕೊರತೆಯಿಂದ ಬಿಡುಗಡೆ ಮಾಡಲಾಗಿದೆ.

ಮಹಾತ್ಮ ಗಾಂಧಿ ಹತ್ಯೆಯ ಪ್ರಕರಣದಲ್ಲಿ ಒಟ್ಟು 5 ಮಂದಿ ಶಿಕ್ಷೆಗೆ ಒಳಗಾಗಿದ್ದಾರೆ. ಇದರಲ್ಲಿ ಮುಖ್ಯ ಆರೋಪಿ ನಾಥುರಾಮ್ ಗೋಡ್ಸೆ ಮತ್ತು ನಾರಾಯಣ್ ಆಪ್ಟೆ ಅವರಿಗೆ ಮರಣದಂಡನೆ ವಿಧಿಸಲಾಯಿತು ಮತ್ತು ಇನ್ನುಳಿದ ಮೂವರು ಆರೋಪಿಗಳಾದ ವಿಷ್ಣು ಕಾರ್ಕರೆ, ಗೋಪಾಲ್ ಗೋಡ್ಸೆ ಮತ್ತು ಮದನ್ ಲಾಲ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದರು.

ಆದರೆ ಮಹಾತ್ಮ ಗಾಂಧೀಜಿಯನ್ನು ಕೊಲ್ಲಲು ಅವರು ಕೊಟ್ಟ ಕಾರಣ ಯಾರಿಗೂ ತುಂಬಾ ಜನಕ್ಕೆ ಗೊತ್ತಿರಲಿಲ್ಲ. ಆ ಸಮಯದಲ್ಲಿ ವಿಭಿನ್ನ ಊಹಾಪೋಹಗಳನ್ನು ಸೃಷ್ಟಿ ಮಾಡಲಾಗಿತ್ತು, ಗಾಂಧಿಯವರ ಹತ್ಯೆಯ ನಂತರ ಗಾಂಧಿ ಅವರ ಮಗ ದೇವದಾಸ್ ಗಾಂಧಿ, ಗೊಡ್ಸೆ ಗಾಂಧಿಯನ್ನು ಕೊಲ್ಲುವ ಹಿಂದಿನ ಕಾರಣಗಳನ್ನು ವಿವರಿಸಿದ್ದಾರೆ.

ಗಾಂಧಿಯನ್ನು ಕೊಲ್ಲಲು ಹಿಂದಿರುವ ಕಾರಣವೇನೆಂದರೆ, ಗಾಂಧಿಯವರಿಗೆ ಮುಸ್ಲಿಮರ ಮೇಲೆ ಅತೀ ಪ್ರೀತಿ ಕಾಳಜಿ ಹೊಂದಿದ್ದರು ಇಷ್ಟೇ ಅಲ್ಲದೆ ಅವರು ಪಾಕಿಸ್ತಾನಕ್ಕೆ 55 ಕೋಟಿ ರೂ.ಗಳನ್ನು ನೀಡಬೇಕೆಂದು ಎಂಬ ಇಚ್ಛೆ ಹೊಂದಿದ್ದರು, ಈ ಹಣವನ್ನು ಕಾಂಗ್ರೆಸ್ ನಿಧಿಯಿಂದ ಬಿಡುಗಡೆ ಮಾಡಲು ಒಪ್ಪದಿದ್ದರೂ ಸಹ ಗಾಂಧಿ ಉಪವಾಸ ಸತ್ಯಾಗ್ರಹ ಮಾಡುವ ಮೂಲಕ ಒತ್ತಾಯಿಸಿ ಪಾಕಿಸ್ತಾನಕ್ಕೆ 55 ಕೋಟಿ ರೂಪಾಯಿ ಬಿಡುಗಡೆ ಮಾಡಿಸಿದ್ದರು.

ಪಾಕಿಸ್ತಾನಕ್ಕೆ ಈ ನಿಧಿ ಬಿಡುಗಡೆಯಾಗಿದ್ದ ಸುದ್ದಿ ಕೇಳಿ ಕೋಪಗೊಂಡ ಕಟ್ಟರ್ ಹಿಂದುತ್ವವಾದಿ ನಾಥುರಾಮ್ ಗೋಡ್ಸೆ ಅವರು ಅತೀ ದೊಡ್ಡ ನಿರ್ಧಾರಕ್ಕೆ ಮುಂದಾದರು ಅದುವೆ ಗಾಂಧಿ ಹತ್ಯೆ. ಏಕೆಂದರೆ ಪಾಕಿಸ್ತಾನಕ್ಕೆ ಹಣ ನೀಡುವುದು ಗೊಡ್ಸೆಗೆ ಕಿಂಚಿತ್ತು ಮನಸ್ಸಿರಲಿಲ್ಲ ಹೀಗಾಗಿ ಗಾಂಧಿಯ ಈ ನಡುವಳಿಕೆಗೆ ವಿರೋಧ ವ್ಯಕ್ತಪಡಿಸಿದ್ದರು. ಆದ್ದರಿಂದ ಅವರು ಗಾಂಧಿಯನ್ನು ಕೊಲ್ಲಲು ಸೂಕ್ತ ಸಮಯ ನಿರ್ಧರಿಸಿ, ಜನವರಿ 30 ರ ಸಂಜೆ ಅವರು ಮಹಾತ್ಮ ಗಾಂಧಿಯನ್ನು ಗುಂಡಿಕ್ಕಿ ಕೊಂದು ಹಾಕಿದರು.

**PB**
**PICK THE BEST HOME MAID SERVICE**
Clean Home, Professional Service, Fair Price

ಮನೆ ಕೆಲಸ ಮಾಡಲು
ಮಗು ನೋಡಿಕೊಳ್ಳಲು
ವೃದ್ಧರನ್ನು ನೋಡಿಕೊಳ್ಳಲು
ರೋಗಿಗಳ ಆರೈಕೆ ಮಾಡಲು
**ಕೆಲಸದವರು ಬೇಕಾಗಿದ್ದಾರೆ.**

ಊಟ ವಸತಿಯೊಂದಿಗೆ ಸಂಬಳ

ಮಕ್ಕಳ ಆರೈಕೆ ಮತ್ತು ಮನೆ ಕೆಲಸ
ರೂ 9000/– 16000/–

ವೃದ್ಧರ ಮತ್ತು ರೋಗಿಗಳ ಆರೈಕೆ
ರೂ 19000/– 20000

**Contact**
**8884463737, 8884462727**
#1918 , BDA Layout, Jambu Savari Dinne,
J.P. Nagar 9th Phase, 2nd Block,
Bangalore-560083.
E:pickthebesthomemaidservicegmail.com

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16

# ಕಲ್ಯಾಣ ಕರ್ನಾಟಕದ ಗಡಿನಾಡು ಶರಣರನಾಡು ಬಿಡು, ಬೀದರ್ ಜಿಲ್ಲೆಯ ಭಾಲ್ಕಿಯ ಐತಿಹಾಸಿಕ ಸಾಂಸ್ಕೃತಿಕ ಪರಂಪರೆ



ಭಾಲ್ಕಿ:ಕರ್ನಾಟಕ ರಾಜ್ಯದ ಉತ್ತರ ತುದಿಯಲ್ಲಿರುವ ಜಿಲ್ಲೆ ಬೀದರ. ಭಾಲ್ಕಿ ಜಿಲ್ಲಾ ಕೇಂದ್ರ ಬೀದರ್ ನಿಂದ 40 ಕಿಮೀ ದೂರದಲ್ಲಿದೆ. ಇದು ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರದ ಪ್ರಮುಖ ಪಟ್ಟಣಗಳಿಗೆ ರಸ್ತೆ ಸಂಪರ್ಕ ಹೊಂದಿದೆ. ಭಾಲ್ಕಿಯು ಪಟ್ಟಣದಲ್ಲಿ ರೈಲ್ವೇ ನಿಲ್ದಾಣವನ್ನು ಕೂಡ ಹೊಂದಿದೆ. ಭಾಲ್ಕಿ ಜಿಲ್ಲೆಯ ಕೇಂದ್ರ ಸ್ಥಳವಾಗಿದೆ, ಇದು ಉದಗಿರ್ ಮತ್ತು ಮಹಾರಾಷ್ಟ್ರದ ಶಹಜಾನಿ ಔರಾದ್ ಸೇರಿದಂತೆ ಇತರ ತಾಲೂಕುಗಳಿಗೆ (ಬೀದರ್, ಬಸವಕಲ್ಯಾಣ, ಔರಾದ್ ಬಿ, ಹುಮನಾಬಾದ್) ಸಮಾನವಾಗಿ ಸಂಪರ್ಕ ಹೊಂದಿದೆ. ಇಲ್ಲಿ ಕಾರಂಜಾ ಮತ್ತು ಮಾಂಜರಾ ನದಿಗಳು ಹರಿಯುತ್ತಿವೆ. ಇವು ಗೋದಾವರಿ ನದಿಯ ಉಪನದಿಯಾಗಿವೆ. ಭಾಲ್ಕಿ ಪಟ್ಟಣವು 2000 ವರ್ಷಗಳ ಇತಿಹಾಸವನ್ನು ಹೊಂದಿದೆ.

**"ಭಾಲ್ಕಿಯ ಪೂರ್ವದ ಹೆಸರು ಭಲುಕ್ಕಿಪೂರ (ಭಲ್ಲುಂಕಿಪೂರ)"**

ಭಾಲ್ಕಿಯ ಭಾಗವನ್ನು ನಂದರು, ಮೌರ್ಯರು, ಶಾತವಾಹನ ಹಾಗೂ ವಾಕಟಕರು ಆಡಳಿತ ಮಾಡಿರುವ ಇತಿಹಾಸ ಕಾಣುತ್ತೇವೆ. ವಾಕಟಕರ ಪ್ರವರಸೇನರ ಸಾಮಂತನಾಗಿದ್ದ ಭದ್ರಸೇನ ಎನ್ನುವವರು ಭಾಲ್ಕಿಯನ್ನು ಆಳುತ್ತಿದ್ದರು. ಈ ಗ್ರಾಮಕ್ಕೆ ಮೊದಲು ಕರಡಿಹಳ್ಳಿ ಎಂದು ಕರೆಯುತ್ತಿದ್ದರು. ಅದಕ್ಕೆ ಭಲ್ಲುಕ್ಕಿಪೂರ ಎಂದು ಮರು ನಾಮಕರಣ ಮಾಡಿದರು ಎಂದು ಹೇಳಲಾಗಿದೆ.

**"ಬಾದಾಮಿ ಚಾಲುಕ್ಯರ ಕಾಲದಲ್ಲಿ ಭಾಲ್ಕಿ ಒಂದು ಪ್ರತ್ಯೇಕ ಆಡಳಿತ ಘಟಕವಾಗಿತ್ತು."**

**"ಕಲ್ಯಾಣ ಚಾಲುಕ್ಯರ ಕಾಲಕ್ಕೆ ಭಾಲ್ಕಿ ಚಾಲುಕ್ಯರ ಸಾಮಂತ ರಂಜೇರಿಯ ಸಿಂಧರ ಆಡಳಿತದಲ್ಲಿ ಇತ್ತು."**

**"ಕಲ್ಯಾಣ ಚಾಲುಕ್ಯರ ಅರಸ ಭೂಲೋಕ ಮಲ್ಲನ ಕಾಲದ ಭಾಲ್ಕಿ ಕ್ರಿಸ್ತ ಶಕ 1100 ಶಾಸನಗಳು ಭಾಲ್ಕಿ ರಾಜಧಾನಿ ಪಟ್ಟಣವಾಗಿತ್ತೆಂದು ತಿಳಿಸುತ್ತದೆ."**

ಕುಮಾರ ಹೆಮ್ಮಾಡಿ ದೇವನು ಸಾಮಂತನಾಗಿ ಆಳುತ್ತಿದ್ದರು. ಕ್ರಿಸ್ತ ಶಕ 1130 ಭಾಲ್ಕಿ ಕಲಚುರಿನ ಬಿಜ್ಜಳನ ಆಳ್ವಿಕೆಗೆ ಒಳಪಟ್ಟಿತ್ತು. 12ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಶರಣರ ಕ್ರಾಂತಿಯ ಪ್ರಭಾವ ಪರಿಣಾಮ ಭಾಲ್ಕಿಯ ಮೇಲೆಯೂ ಆಗಿದೆ.

**"ಭಾಲ್ಕಿ ಯು ಧರ್ಮ ನ್ಯಾಯಗಳಲ್ಲಿ ನಿಷ್ಟೆಯುಳ್ಳ ಸ್ವಾತಂತ್ರ್ಯ ಪ್ರಿಯರಾದ ಜನರ ನೆಲೆಯಾಗಿತ್ತು"**

ಇಲ್ಲಿ ದೊರೆಯುವ ಅನೇಕ ವೀರಗಲ್ಲು ಗಳಿಂದ ಈ ಕ್ಷೇತ್ರದ ಪರಿಚಯವಾಗುತ್ತದೆ.

ಅವುಗಳಲ್ಲೊಂದು ಕಲ್ಲೇಶ್ವರ ದೇವಾಲಯದ ಗೋಡೆಯಲ್ಲಿ ಶಿವಲೆಂಕ ನೊಬ್ಬನು ವೈಷ್ಣವ ಕ್ಷತ್ರಿಯ ನೊಂದಿಗೆ ಹೋರಾಡಿ ಶಿವ ದೇವಾಲಯವನ್ನು ರಕ್ಷಿಸಿ ವೀರಮರಣವನ್ನು ಪಡೆದಿರುವ ವೀರಗಲ್ಲು ಇದೆ.

ಭಾಲ್ಕಿಯ ಚನ್ನಬಸವೇಶ್ವರ ಮಹಾವಿದ್ಯಾಲಯದಲ್ಲಿ ಸಂರಕ್ಷಿಸಲಾದ ವೀರಗಲ್ಲಿನ ಲ್ಲಿ ಅಶ್ವ ಸೈನಿಕನೊಬ್ಬನು ಪದಾತಿಗಳೊಂದಿಗೆ ಹೋರಾಡಿ ಕೆಲವರನ್ನು ಕೊಂದು ವೀರ ಮರಣ ಪಡೆದ ಒಂದು ವೀರಗಲ್ಲು ಇದೆ.

*ಭಾಲ್ಕಿಯ ವಿದ್ಯುತ್ಶಕ್ತಿ ನಿಗಮ ಕಚೇರಿಯ ಹಿಂದಿನ ಬಯಲಿನಲ್ಲಿ ಸುಮಾರು ಹತ್ತನೇ ಶತಮಾನದ ಮಾಸ್ತಿಗಲ್ಲು ಇದೆ. ಇದು ಭಾಲ್ಕಿಯ ದಲಿತ ಮನೆಯೊಂದಕ್ಕೆ ಸೇರಿದೆ.

**"ಈದ್ಗಾ ಮೈದಾನದ ಹತ್ತಿರ ಒಂದು ಸತಿಯ ಗುಡಿ ಇದೆ. ಇದು ಬಹುಮನಿ ಸುಲ್ತಾನರ ಕಾಲಕ್ಕೆ ಸೇರಿದ್ದು, ಮರಾಠ ಸಮುದಾಯಕ್ಕೆ ಸಂಬಂಧಿಸಿದಂತೆ ತಿಳಿದುಬರುತ್ತದೆ."**

## "ಭೂ ಕೈಲಾಸ ಶಿವಪುರಿ ಭಾಲ್ಕಿ"

ಕ್ರಿಸ್ತ ಶಕೆಯ ಆರಂಭದಲ್ಲಿ ದವರಿಗೂ ಇದು ದ್ರಾವಿಡ ಜನಾಂಗದ ನೆಲೆಯಾಗಿತ್ತು. ಶಿವಭಕ್ತಿಯ ಆಗರವಾಗಿತ್ತು. ಈ ಪಟ್ಟಣದಲ್ಲಿ ಹೆಜ್ಜೆಹೆಜ್ಜೆಗೂ ಶಿವಲಿಂಗಾ ಶಿವನ ದೇವಸ್ಥಾನಗಳಿದ್ದವು. ಈ ಊರಿನಲ್ಲಿ ಯಾರು ಚಪ್ಪಲಿಗಳನ್ನು ಧರಿಸುವಂತಿರಲಿಲ್ಲ. ಊರಿನ ಅಗಸೆಗೆ ಬರುತ್ತಿದ್ದಂತೆಯೇ ಎಲ್ಲರೂ ಕಾಲಿನಲ್ಲಿರುವ ಚಪ್ಪಲಿಗಳನ್ನು ಕಳಚಿ ತೋಳಲ್ಲಿ ಇಟ್ಟುಕೊಂಡು ಬರಬೇಕಾಗಿತ್ತು.

ಭಾಲ್ಕಿಯಲ್ಲಿ ದೊರೆಯುವ ಚಾಲುಕ್ಯರ ಕಾಲದ ನೂರಾರು ಜಖಂ ಗೊಂಡಿರುವ ಭಗ್ನಗೊಂಡಿರುವ ದೊಡ್ಡ ದೊಡ್ಡ ಶಿವಲಿಂಗಗಳು ಪಾಳುಬಿದ್ದಿರುವ ಶಿವ ದೇವಾಲಯಗಳು ಇದಕ್ಕೆ ಸಾಕ್ಷಿ. ಇಲ್ಲಿನ ಭಾಲ್ಕೇಶ್ವರ ಕುಂಭೇಶ್ವರ ದೇವಾಲಯ ಗಳು ಇಂದಿಗೂ ಕಾಣಬಹುದಾಗಿದೆ.

ಇಲ್ಲಿ ಬಾರಸೂರ್ (ಎಂದರೆ 12 ಈಶ್ವರ) ಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ

ಶ್ರೀ ಬಾಲ್ಕೇಶ್ವರ, ಶ್ರೀ ಅಡಕೇಶ್ವರ, ಶ್ರೀ ರಾಮೇಶ್ವರ, ಶ್ರೀ ಬೇಳ್ಳೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ಸಾಳಂಕೇಶ್ವರ, ಶ್ರೀ ಮಹಾಂತೇಶ್ವರ, ಶ್ರೀ ಧರ್ಮೇಶ್ವರ, ಶ್ರೀ ಕುಂಭೇಶ್ವರ, ಶ್ರೀ ನೀಲಕಂಠೇಶ್ವರ, ಶ್ರೀ ಕಲ್ಲೇಶ್ವರ, ಶ್ರೀ ಖಡಕೇಶ್ವರ, ಶ್ರೀ ಉಳಾಂಕೇಶ್ವರ, ಶ್ರೀ ಸಂಗಮೇಶ್ವರಗಳು ಪ್ರಸಿದ್ಧವಾಗಿವೆ.

## "ಶಿವನನ್ನು ಕುಣಿಸಿದ ಕುಂಬಾರ ಗುಂಡಯ್ಯ"

ಭಾಲ್ಕಿಯ ಕುಂಭೇಶ್ವರನ ಭಕ್ತನಾದ ಕುಂಬಾರ ಗುಂಡಯ್ಯನು ತನ್ನ ಕುಲಕಸುಬು ಆಗಿರುವ ಮಡಿಕೆ ಮಾಡುವ ಕಾಯಕವನ್ನೆ ಶಿವಪೂಜೆ ಎಂದು ತಿಳಿದು ಕಾಯಕ ನಿರತರಾಗಿದ್ದರು. ಕೈಯಲ್ಲಿನ ಕೊಡತಿಯಿಂದ ಮಡಕೆಯನ್ನು ತಟ್ಟುತ್ತಾ ಶಿವಭಜನ ಯಲ್ಲಿ ನರ್ತಿಸ ತೊಡಗಿದ್ದಾಗ ಅವನ ಹೃದಯದಲ್ಲಿ ಪ್ರಾಣಲಿಂಗವು ನರ್ತಿಸುತ್ತಿತ್ತು ಎಂದು ಹೇಳಲಾಗುತ್ತದೆ. ಭಾಲ್ಕಿಯ ಕುಂಭೇಶ್ವರ ದೇವಾಲಯದಲ್ಲಿ ಕುಂಬಾರ ಗುಂಡಯ್ಯ ರ ವಿಗ್ರಹ ಹಾಗೂ ಸಮಾಧಿಗಳಿವೆ. ಅವರ ಸ್ಮರಣಾರ್ಥವಾಗಿ ಭಾಲ್ಕಿಯ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರು ಕುಂಬಾರ ಗುಂಡಯ್ಯ ಕಲ್ಯಾಣ ಮಂಟಪ ನಿರ್ಮಿಸಿದ್ದಾರೆ.

## "ಭಾಲ್ಕಿಯ ಕೋಟೆ"

ಭಾಲ್ಕಿಯ ಕೋಟೆಯು ಚಿಕ್ಕದಾಗಿದ್ದರೂ ಭದ್ರವಾಗಿದೆ. ತೋಪುಗಳನ್ನು ಬಳಸುವ ಉದ್ದೇಶದಿಂದ ತಳಪಾಯದಿಂದಲೇ ಕೋಟೆಯಲ್ಲಿ ಆರು ಕೊತ್ತಲಗಳನ್ನು ಕಟ್ಟಿಕೊಂಡು ಹೋಗಲಾಗಿದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಯು ಈ ಕೋಟೆಯಲ್ಲಿ ತೋಪುಗಳನ್ನು ಶ್ರೀ ಮದ್ದು ಗುಂಡುಗಳನ್ನು ನಗಾರಿಗಳನ್ನು ಇಡಲಾಗಿತ್ತು. ಕೋಟೆಯ ಮೇಲೆ ಒಂದು ಕೈಗಾಡಿ ಓಡಾಡುವಷ್ಟು ಸ್ಥಳಾವಕಾಶವಿದೆ. ಕೋಟೆಯ ಗೋಡೆಯಲ್ಲಿ ಎಲ್ಲಾ ದಿಕ್ಕುಗಳಿಗೂ ಗುಂಡು ಹಾರಿಸಲು ಬರುವಂತೆ ತಿಂಡಿಗಳನ್ನು ಬಳಸಲಾಗಿದೆ. ಕೆಳಗಿನಿಂದ ಮೇಲೇರಿ ಬರದಂತೆ ಬೆಂಕಿ ಬಿಸಿನೀರು ಗಳನ್ನು ಸುರಿಯಲು ಕೆಳಮುಖವಾಗಿ ಇರುವ ಕಿಂಡಿಗಳು ಕೂಡ ಇವೆ. ಈ ಕೋಟೆಯನ್ನು ಚಂದ್ರಸೇನ ಜಾಧವ ಎಂಬ ಮರಾಠ ಸಾಮಂತನ ಕ್ರಿಸ್ತಶಕ 1714 ರಿಂದ 1724 ರ ಅವಧಿಯಲ್ಲಿ ಕಟ್ಟಿಸಿದನು.

## "ಭಾಲ್ಕಿಯ ಅಗಸೆಗಳು"

ಮರಾಠ ಸಾಮಂತರ ಕಾಲದಲ್ಲಿಯೇ ಭಾಲ್ಕಿಯ ಗ್ರಾಮದ ನಾಲ್ಕು ದಿಕ್ಕುಗಳಿಗೂ 4 ಅಗಸೆ ಬಾಗಿಲುಗಳು



ನಿರ್ಮಾಣಗೊಂಡಿರುವುದು ಕಾಣುತ್ತದೆ.

1. ಈಶಾನ್ಯಕ್ಕೆ ಬೀದರ ಬೇಸ್,
2. ವಾಯುವ್ಯ ಕ್ಕೆ ಕಾಟಿ ಬೇಸ್,
3. ಪಶ್ಚಿಮಕ್ಕೆ ಹುಲಸೂರ ಬೇಸ್
4. ದಾಡಗಿ ಬೇಸ್

ಜನವರ್ಗ ಭಾಲ್ಕಿಯಲ್ಲಿ ಬೇಡಜಂಗಮರು, ಅಯ್ಯೋನೊರು, ಸ್ವಾಮಿಗಳು, ಜಂಗಮರು, ವೀರಶೈವ ಲಿಂಗಾಯತರು, ಲಿಂಗಾಯತರು, ಮರಾಠಿಗರು, ಬ್ರಾಹ್ಮಣರು, ಕುರುಬರು, ಹರಿಜನರು, ಲಂಬಾಣಿಗರು, ಮುಸ್ಲಿಮರು, ಕ್ರೈಸ್ತರು, ಮಾರ್ವಾಡಿಗಳು, ಒಡ್ಡರು, ಗೊಂದಲಿಗರು ಮೊದಲಾದ ಜನಾಂಗದವರು ವಾಸಿಸುತ್ತಿದ್ದಾರೆ. ಇಲ್ಲಿ ಕನ್ನಡ, ಮರಾಠಿ, ತೆಲುಗು, ಹಿಂದಿ, ಲಮ್ಮಾಣಿ ಭಾಷೆಗಳು ಚಾಲ್ತಿಯಲ್ಲಿವೆ.

## "ಬಸವಾದಿ ಶರಣರ ಆಡಳಿತ ವ್ಯವಸ್ಥೆ"

ನಿಜಾಮನು ಕ್ರಿಸ್ತಶಕ 1724 ರಲ್ಲಿ ತನ್ನ ಸ್ವಾತಂತ್ರ್ಯ ರಾಜ್ಯವನ್ನು ಸ್ಥಾಪಿಸಿದ ನಂತರ ಬಾಲಕಿಯ ಆಡಳಿತ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆ ಮಾಡಿದಂತೆ ತೋರುತ್ತದೆ. ನಿಜಾಮರ ಕಾಲದಲ್ಲಿ ಭಾಲ್ಕಿ ಪೈಗಾ ಕಂದಾಯ ಘಟಕವನ್ನಾಗಿ ಮಾಡಿ ಇದಕ್ಕೆ ಒಬ್ಬ ನವಾಬನ ನೇಮಿಸಲಾಗಿತ್ತು. ಖುರ್ಷಿದ್ ಝಾ ಎನ್ನುವವನು ಇಲ್ಲಿಯ ಕೊನೆಯ ನವಾಬ ನಾಗಿದ್ದನು. ನಿಜಾಮನು ಭಾಲ್ಕಿಯ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಲಿಂಗಾಯತರನ್ನು ದೇಶಮುಖ ರನ್ನಾಗಿ ನೇಮಿಸಿದನು. ಈ ನಂತರ ಮರಾಠಾ ಪಟೇಲ ರನ್ನು ತೆಗೆದು ಲಿಂಗಾಯತ ಪಟೇಲರನ್ನು ಕೂಡ ನೇಮಿಸಲಾಯಿತು. ಇದರಿಂದ ಭಾಲ್ಕಿಯಲ್ಲಿ ವೀರಶೈವಧರ್ಮವು ಬಲಗೊಂಡಿತು.

## "ರಾಮ ದೇವಸ್ಥಾನ"

ಬಾಲಾಜಿ ದೇವಸ್ಥಾನ ಎಂದೂ ಕರೆಯುತ್ತಾರೆ, ಇದು ಪಟ್ಟಣದ ಗಂಜ್ ಪ್ರದೇಶದಲ್ಲಿದೆ. ಈ ದೇವಾಲಯವನ್ನು 1945 ರಲ್ಲಿ ಸಂತ ಮಹಂತ್ ಶ್ರೀ ಪ್ರೇಮದಾಸ್ ಬಾಬಾ ನಿರ್ಮಿಸಿದರು ಮತ್ತು 1980 ರಲ್ಲಿ ಮಾರ್ವಾಡಿ ಸಮಾಜದ ಮಾರ್ಗದರ್ಶನದಲ್ಲಿ ಪುನರ್ನಿರ್ಮಿಸಲಾಯಿತು.

## "ರಾಮೇಶ್ವರ ಟೇಕಡಿ"

ಬೆಟ್ಟದ ಮೇಲೆ ಇದೆ (ಟೆಕಡೀ–ಮರಾಠಿಯಲ್ಲಿ ಬೆಟ್ಟ) ಹೊಸ ಪಟ್ಟಣ ಕೇಂದ್ರದಿಂದ ಒಂದೆರಡು ಕಿಲೋಮೀಟರ್ ಈಶಾನ್ಯದಲ್ಲಿ, ಸುತ್ತಮುತ್ತಲಿನ ಬಯಲು ಪ್ರದೇಶಗಳ ವಿಹಂಗಮ ನೋಟವನ್ನು ನೀಡುವ ಐತಿಹಾಸಿಕ ಕೋಟೆಯಂತಹ ರಚನೆಯಾಗಿದೆ. ಇದು ದೇವಸ್ಥಾನವನ್ನು ಕೂಡ ಆಯೋಜಿಸುತ್ತದೆ.

## "ಭಾಲ್ಕಿ ಟ್ಯಾಂಕ್(ಕೆರೆ)"

ಮಳೆನೀರು ಕೊಯ್ಲುಗಾಗಿ ರಚಿಸಲಾದ ಕೃತಕ ಸರೋವರ, ಮತ್ತು ಕೆಲವು ಅದ್ಭುತ ಚಳಿಗಾಲದ ಸಮಯದಲ್ಲಿ ಸೂರ್ಯಾಸ್ತದ ನೋಟ ಆಕರ್ಷಣೀಯ ಬಿಂದು. ಈ ಕೆರೆಯು ಇಂಗ್ಲಿಷ್ ಅಕ್ಷರದ ಚ ಆಕೃತಿಯಲ್ಲಿದೆ. ಇದರ ಸುತ್ತ ಮುತ್ತಲು ರಸ್ತೆಯನ್ನು ನಿರ್ಮಿಸಿ ವಾಯುವಿಹಾರಕ್ಕಾಗಿ ಭಾಲ್ಕಿಯ ಜನರಿಗೆ (ಈಶ್ವರ ಖಂಡ್ರೆ ಯವರು ಶಾಸಕರಾಗಿದ್ದಾಗ) ಅನುವುಮಾಡಿಕೊಡಲಾಗಿದೆ.

## "ಹಳೆಯ ಪಟ್ಟಣ"

ಇದು ಕೋಟೆಯಿಂದ ರಕ್ಷಿಸಲ್ಪಟ್ಟ ಐತಿಹಾಸಿಕ ಭಾಲ್ಕಿ ಪಟ್ಟಣವಾಗಿದೆ. ಹಳೆಯ ಪಟ್ಟಣವು ಮಧ್ಯಕಾಲೀನ ಡೆಕ್ಕನ್ ಕೋಟೆಯ ಪಟ್ಟಣದ ಒಂದು ವಿಶಿಷ್ಟ ಉದಾಹರಣೆಯಾಗಿದೆ, ಹಳೆಯ ಶೈಲಿಯ ವಸತಿ ಮನೆಗಳು, ಈಗ ಆಧುನಿಕ ಅಗತ್ಯಗಳಿಗೆ ತಕ್ಕಂತೆ ಮಾರ್ಪಡಿಸಲಾಗಿದೆ. ಶ್ರೀ ಚೆನ್ನಬಸವ ಪಟ್ಟದೇವರು ಆರಂಭಿಸಿದ ಐತಿಹಾಸಿಕ ಹಿರೇಮಠ ಸಂಸ್ಥಾನವು ಹಳೆಯ ಪಟ್ಟಣದಲ್ಲಿದೆ.

## "ಭಾಲ್ಕಿಯ ಹಿರೇಮಠ ಸಾಂಸ್ಕೃತಿಕ ಹಿರಿಮೆ".

ಭಾಲ್ಕಿ ಹಿರೇಮಠದ ಮೂಲಪುರುಷರಾದ ಪೂಜ್ಯ ಶ್ರೀ ಮ.ಘ.ಚ. ಚನ್ನಬಸವೇಶ್ವರ ಪಟ್ಟದೇವರು ಶತಾಯುಷಿಗಳು ನಡೆದಾಡುವ ದೇವರು ಈ ಭಾಗದಲ್ಲಿ ಪ್ರಸಿದ್ಧರಾಗಿದ್ದಾರೆ. ಇವರು ಮಾಡಿದ ಜನಪರ ಕಾರ್ಯಗಳನ್ನು ನೋಡಿ ಗುಲ್ಬರ್ಗ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರದಾನ ಮಾಡಿತು. ಇವರ ಉತ್ತರಾಧಿಕಾರಿಯಾಗಿ ಪೂಜ್ಯ ಶ್ರೀ ಮ ಘ ಚ ಬಸವಲಿಂಗ ಪಟ್ಟದೇವರು 1985ರಿಂದ ಈ ಮಠದ ಪಟ್ಟ ಅಧ್ಯಕ್ಷರಾಗಿ ತಮ್ಮ ಗುರುಗಳ ಕಾರ್ಯಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವರ ಉತ್ತರಾಧಿಕಾರಿಯಾಗಿ ಪೂಜ್ಯ ಶ್ರೀ ಗುರುಬಸವ ಪಟ್ಟದೇವರು ಗುರುಗಳ ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ ಸಾಗುತ್ತಿದ್ದಾರೆ.

ಕನ್ನಡ ನಾಡು–ನುಡಿಯ ಬಗ್ಗೆ ಸಾಕಷ್ಟು ಚರ್ಚೆ ವಿಚಾರ–ವಿನಿಮಯ ಗಳು ನಡೆದಿವೆ. ಎಲ್ಲಾ ವಿಚಾರಗಳ ಮಧ್ಯೆಯೂ ಕೆಲವು ಆತಂಕ ನೋವುಗಳು ನಮ್ಮ ಮನ ಕಲಕುತ್ತವೆ. ಆದರೆ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಚನ್ನಬಸವ ಪಟ್ಟದೇವರು ಗಡಿಭಾಗದಲ್ಲಿ ಕನ್ನಡ ಸಂಸ್ಕೃತಿ ಉಳಿಸಿ ಬೆಳೆಸುವ ಕಾರ್ಯ ಮಾಡಿದ್ದು ಮಾದರಿಯಾಗಿದೆ. ಸ್ವಾತಂತ್ರ್ಯ ಪೂರ್ವ ಹೈದರಾಬಾದ್ ನಿಜಾಮ ಆಡಳಿತದ ಬೀದರ ಜಿಲ್ಲೆಯಲ್ಲಿ ಅನ್ಯಭಾಷಾ ದಬ್ಬಾಳಿಕೆಯಿಂದ ಕನ್ನಡ ನಲುಗಿತ್ತು. ಉರ್ದು ರಾಜ್ಯಭಾಷೆಯಾಗಿ ಮೆರೆಯುತ್ತಿತ್ತು. ಕನ್ನಡ ಮಾತನಾಡುವುದು ಅಪರಾಧವೆಂಬಂತೆ ಬಿಂಬಿಸಲಾಗುತ್ತಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಈ ಭಾಗದ ಜನರಿಗೆ ಕನ್ನಡ ಅಭ್ಯಾಸವನ್ನು ಮಾಡಿ ಹೊರಗಡೆ ಉರ್ದು ಬೋರ್ಡ್ ಹಾಕಿ ಒಳಗಡೆ ಕನ್ನಡವನ್ನು ಕಲಿಸಿದ ಕೀರ್ತಿ ಚನ್ನಬಸವ ಪಟ್ಟದೇವರಿಗೆ ಸಲ್ಲುತ್ತದೆ.

ಮಠ ಎಂಬ ಶಬ್ದಕ್ಕೆ ಉದಾಹರಣೆಯಂತೆ ಈ ಭಾಲ್ಕಿ ಮಠವು ಸಾಮಾಜಿಕ ಧಾರ್ಮಿಕ ಶೈಕ್ಷಣಿಕವಾಗಿ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಗಡಿ ಭಾಗದುದ್ದಕ್ಕೂ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಬಡಮಕ್ಕಳಿಗೆ ಶಿಕ್ಷಣವನ್ನು ಒದಗಿಸುತ್ತಾ ಹಾಗೂ ಅನಾಥ ಮಕ್ಕಳಿಗೆ ಆಶ್ರಯವನ್ನು ನೀಡುತ್ತಾ ಬಂದಿದೆ. ಚನ್ನಬಸವೇಶ್ವರ ಗುರುಕುಲದಿಂದ ಭಾಲ್ಕಿಯ ಪಟ್ಟಣಕ್ಕೆ ರಾಜ್ಯ ಮಟ್ಟದಲ್ಲಿ ಮನ್ನಣೆ ದೊರಕಿದೆ.

ಈ ಸಂಸ್ಥೆಯಲ್ಲಿ ಕಲಿತ ಅನೇಕ ಮಕ್ಕಳು ದೊಡ್ಡ ದೊಡ್ಡ ಹುದ್ದೆಗಳಿಗೆ ಹೋಗಿ ನಾಡಿನ ಹಾಗೂ ಗುರುಗಳ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಮಠವೆಂದರೆ ಕೇವಲ ಪೂಜೆ ಪುನಸ್ಕಾರಗಳಲ್ಲಿ ಕಾಯಕ ತತ್ವ ಸಮರಸ ಜೀವನ ಜೊತೆಜೊತೆಗೆ ಸಮಾಜದಲ್ಲಿ ಹೇಗೆ ಬದುಕಬೇಕು ಎಂದು ಕಲುಹಿಸಿದ ಶ್ರೇಷ್ಠ ಮಠ.

## ಭೀಮಣ್ಣಖಂಡ್ರೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಭಾಲ್ಕಿ

ಕರ್ನಾಟಕ ರಾಜ್ಯದ ಬೀದರ್ ಜಿಲ್ಲೆಯ ಭೀಮಣ್ಣ ಖಂಡ್ರೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಭಾಲ್ಕಿ (ಹಿಂದೆ ರೂರಲ್ ಎಂಜಿನಿಯರಿಂಗ್ ಕಾಲೇಜು, ಭಾಲ್ಕಿ ಎಂದು ಕರೆಯಲಾಗುತ್ತಿತ್ತು), ಕರ್ನಾಟಕದ ಉತ್ತರ ತುದಿಯಲ್ಲಿ 1982 ಸೆಪ್ಟೆಂಬರ್ ನಲ್ಲಿ ಸ್ಥಾಪನೆಯಾಗಿದ್ದು ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲಿಯೇ ಅತ್ಯುತ್ತಮ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದಾಗಿದೆ. ಭಾರತದ ಇದು ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜಿನ ಸಂಪೂರ್ಣ ಗುಣಲಕ್ಷಣಗಳನ್ನು ಪಡೆದುಕೊಂಡಿದೆ, ಅಲ್ಲಿ ಸುಮಾರು 50% ವಿದ್ಯಾರ್ಥಿಗಳು ಕರ್ನಾಟಕದವರು ಮತ್ತು ಉಳಿದ 50% ಭಾರತದ ಎಲ್ಲ ಭಾಗಗಳಿಂದ ಅಂದರೆ ಬಿಹಾರ, ಜಾರ್ಖಂಡ್, ದೆಹಲಿ, ಯುಪಿ, ಪಂಜಾಬ್ ಅನೇಕ ಕಡೆಯಿಂದ ವಿಧ್ಯಾರ್ಥಿಗಳು ಬಂದು ಶಿಕ್ಷಣವನ್ನು ಪಡೆಯುತಾರೆ.

ವಿಸ್ತಾರೆವಾದ ಕ್ಯಾಂಪಸ್ 35 ಎಕರೆ ವಿಸ್ತಾರವಾಗಿದ್ದು 70000 ಮೀ 2 ವಿಸ್ತೀರ್ಣದಲ್ಲಿ ಸುಸಜ್ಜಿತ ಪ್ರಯೋಗಾಲಯಗಳು, ಕಾರ್ಯಾಗಾರಗಳು, ಡ್ರಾಯಿಂಗ್ ಹಾಲ್ಗಳು, ಸೆಮಿನಾರ್ ಹಾಲ್ಗಳು, 58,000 ಪುಸ್ತಕಗಳನ್ನು ಹೊಂದಿರುವ ದೊಡ್ಡ ಗ್ರಂಥಾಲಯ ಮತ್ತು 1500 ಕ್ಕೂ ಹೆಚ್ಚು ಇ–ಜರ್ನಲ್ಗಳು, ಉಪನ್ಯಾಸ ಸಭಾಂಗಣಗಳು, ಡಿಜಿಟಲ್ ಕ್ಲಾಸ್ ಕೊಠಡಿಗಳು, ಕಂಪ್ಯೂಟರ್ ಸೆಂಟರ್ , ವಿಭಾಗೀಯ ಕಂಪ್ಯೂಟರ್ ಕೇಂದ್ರಗಳು, ಬ್ರಾಡ್ಬ್ಯಾಂಡ್ ಅಂತರ್ಜಾಲ ಸಂಪರ್ಕದೊಂದಿಗೆ ಬ್ರೌಸಿಂಗ್ ಕೇಂದ್ರಗಳು, ಸುಮಾರು 700 ಹುಡುಗರಿಗೆ 03 ಹುಡುಗರ ಹಾಸ್ಟೆಲ್ಗಳು ಮತ್ತು 350 ಹುಡುಗಿಯರು, 02 ಹಾಸ್ಟೆಲ್, ಕ್ಯಾಂಟೀನ್, ಬ್ಯಾಂಕ್, ಜಿಮ್ನಾಷಿಯಂ, ಕ್ರೀಡಾ ಸೌಕರ್ಯಗಳಿಗೆ 02 ಬಾಲಕಿಯರ ಹಾಸ್ಟೆಲ್ಗಳು.

## "ಭಾಲ್ಕಿಯ ಪಟ್ಟಣದ ಶಾಸಕರು."

1951ರಲ್ಲಿ ಬಳವಂತರಾವ್ ಖಾನಾಪುರ , 1957 ರಲ್ಲಿ ಭೀಮಣ್ಣ ಖಂಡ್ರೆ, 1972 ರಲ್ಲಿ ಸುಭಾಷ ಅಷ್ಟುರೆ, 1989 ರಲ್ಲಿ ಕಲ್ಯಾಣರಾವ ಮೊಳಕೆರೆ, 1992 ರಲ್ಲಿ ಡಾ. ವಿಜಯಕುಮಾರ ಖಂಡ್ರೆ, 2002 ರಲ್ಲಿ ಪ್ರಕಾಶ ಖಂಡ್ರೆ, 2008 ರಿಂದ ಇಲ್ಲಿಯವರೆಗೆ 3 ಬಾರಿ ಸತತ ಈಶ್ವರ ಖಂಡ್ರೆ ಶಾಸಕರಾಗಿದ್ದಾರೆ.

ಭಾಲ್ಕಿಯಲ್ಲಿ ಮಣ್ಣು ಪರೀಕ್ಷಾ ಕೇಂದ್ರ ಇದೆ. ರೈತರಿಗೆ ಇದರಿಂದ ಅನೇಕ ಅನುಕೂಲವಾಗಿದೆ.

## ಕಲೆ ಮತ್ತು ಸಾಹಿತ್ಯ.

ಭಾಲ್ಕಿಯ ಹಿರೇಮಠ ಸಂಸ್ಥಾನ ಸುಮಾರು 800 ವರ್ಷಗಳ ಇತಿಹಾಸ ಹೊಂದಿದೆ. ಅನೇಕ ಶಾಖಾ ಮಠಗಳನ್ನು ಹೊಂದಿದ್ದು ಅವುಗಳಲ್ಲಿ ಕಮಲನಗರ, ಆಂದ್ರಪ್ರದೇಶ ದ ಕಾರಮುಂಗಿ, ಹಾಗೂ ಮೋರ್ಗಿ ಮಠಗಳು ಪ್ರಮುಖವಾಗಿವೆ. ಹಿರೇಮಠ ದಲ್ಲಿ ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯವನ್ನು ಆರಂಭಿಸಿ ಉಚಿತ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇಲ್ಲಿ ಅನೇಕ ಬಡ ಮಕ್ಕಳಿಗೆ ಶಿಕ್ಷಣದ ಜೊತೆಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

## ಶಿಕ್ಷಣ ಸಂಸ್ಥೆಗಳು

ವಿದ್ಯಾಭ್ಯಾಸ ಭಾಲ್ಕಿ ತಾಲೂಕಿನಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಆರಂಭವಾಗಿವೆ.

ಶಾಂತಿವರ್ಧಕ ಶಿಕ್ಷಣ ಸಂಸ್ಥೆ, ಕಿಸಾನ್ ಶಿಕ್ಷಣ ಪ್ರಸಾರಕ ಮಂಡಳಿ, ಸತ್ಯನಿಕೇತನ ವಿದ್ಯಾ ಸಂಸ್ಥೆ, ಹಿರೇಮಠ ವಿದ್ಯಾಪೀಠ, ಶ್ರೀ ಗುರು ಪ್ರಸನ್ನ, ಪಂಚಶೀಲ ಹೀಗೆ ಅನೇಕ ಶಿಕ್ಷಣ ಸಂಸ್ಥೆ ಪ್ರಸಿದ್ಧವಾಗಿವೆ.ಇಲ್ಲಿ ಪ್ರಾಥಮಿಕ , ಪ್ರೌಢ , ಪದವಿ ಪೂರ್ವ, ಪದವಿ, ಎಂಜಿನಿಯರಿಂಗ್, ಪಾಲಿಟೆಕ್ನಿಕ್, ಕೈಗಾರಿಕಾ ತರಬೇತಿ ಕೇಂದ್ರ , ಶಿಕ್ಷಣ ಕೇಂದ್ರಗಳು, ನರ್ಸಿಂಗ್ ಕಾಲೇಜು, ಪ್ಯಾರಾ ಮೆಡಿಕಲ ಕಾಲೇಜು ಇವೆ.

## ಕೈಗಾರಿಕೆಗಳು.

ಭಾಲ್ಕಿಯಲ್ಲಿ 10ಕ್ಕಿಂತ ನೋಂದಣಿ ಕಾರ್ಖಾನೆಗಳು, ಎಂಜಿನಿಯರಿಂಗ್ ಕಾರ್ಖಾನೆಗಳು ಇದ್ದು ಅನೇಕ ಜನರಿಗೆ ಉದ್ಯೋಗ ಅವಕಾಶವನ್ನು ಒದಗಿಸಿವೆ. ಇಲ್ಲಿ ಸಣ್ಣ ಅತಿಸಣ್ಣ ಕೈಗಾರಿಕೆಗಳು ಇವೆ. 100ಕ್ಕಿಂತ ಹೆಚ್ಚು ಸಣ್ಣ ಅತಿಸಣ್ಣ ಕಾರ್ಖಾನೆಗಳು, 30ಕ್ಕಿಂತ ಹೆಚ್ಚು ಕೃಷಿ ಅವಲಂಬಿತ ಕೈಗಾರಿಕೆಗಳು, ಅರಣ್ಯ ಅವಲಂಬಿತ ಕೈಗಾರಿಕೆಗಳು, ರಾಸಾಯನಿಕ ಅವಲಂಬಿತ ಕೈಗಾರಿಕೆಗಳು, ಚರ್ಮೋದ್ಯೋಗ ಕೈಗಾರಿಕೆಗಳು ಇವೆ. ಅಗರಬತ್ತಿ ತಯಾರಿಕಾ ಕೇಂದ್ರ, ಮೋಟಾರ್ ವೈಂಡಿಂಗ್, ಐಸ್ ಕ್ಯಾಂಡಿ, ಲೆದರ್ ಸುಟ್ ಕೇಸ್ ಬ್ಯಾಗ್ ಮತ್ತು ಕವರ್ಸ್ ಹೀಗೆ ಅನೇಕ ಕೈಗಾರಿಕೆಗಳು ಇವೆ.

**–ಶಾಂತಯ್ಯ ಕೆ. ಸ್ವಾಮಿ**
ಉಚ್ಚ ತಾ. ಭಾಲ್ಕಿ ಜಿ. ಬೀದರ

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16

**ಕನ್ನಡದ ಸೊಲ್ಲೆತ್ತಿದರೆ ಕತ್ತು ಮುರಿಸಿಕೊಳ್ಳುವ ಕಾಲ ಅದಾಗಿತ್ತು. ಉರ್ದು ಪ್ರಭಾವದ ಅಂದಿನ ವಾತಾವರಣದಲ್ಲಿ ಪೂಜ್ಯರು ಕನ್ನಡ ಪ್ರಸಾರ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ ಮಾಡಿದ್ದು ಅಪ್ಪಗಳ ಬಹುದೊಡ್ಡ ಸಾಧನೆ. ಶ್ರೀಗಳು ಕನ್ನಡದ ಉಸಿರಿಗಾಗಿ ಕನ್ನಡಕ್ಕೆ ಜೀವ ತುಂಬುತ್ತ ಬೀದರನ ಮರುಭೂಮಿಯಲ್ಲಿ ಓಯಸಿಸ್ನಂತೆ ಕನ್ನಡ ಭಾಷೆ ಪರಿಸರವನ್ನು ಹೆಚ್ಚಿಸುತ್ತಾ ಸದಾ ಹಸಿರನ್ನಾಗಿ ಮಾಡಿದರು. ಕನ್ನಡಕ್ಕಾಗಿ ಕೈ ಎತ್ತು ಅದು ಕಲ್ಪವೃಕ್ಷವಾಗುತ್ತದೆ ಎಂದು ಆಡಿದ ಕುವೆಂಪು ಅವರ ವಾಣಿಯನ್ನು ಪೂಜ್ಯರು ಆಚರಣೆಯಲ್ಲಿ ತಂದಿದ್ದರು.**

# ಕಲ್ಯಾಣ ಕರ್ನಾಟಕದಲ್ಲಿ ಕನ್ನಡ ಬೀಜ ಬಿತ್ತಿದ

## ಡಾ॥ಚನ್ನಬಸವ ಪಟ್ಟದೇವರು.

ಪರಮ ಪೂಜ್ಯ ಶ್ರೀ ಮದ್ ಘನಲಿಂಗ ಚಕ್ರವರ್ತಿ ಡಾ. ಚನ್ನಬಸವ ಪಟ್ಟದೇವರು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾಗಿದ್ದರು. ಕರ್ನಾಟಕದ ಕಿರೀಟದಂತಿರುವ ಬೀದರ್ ಜಿಲ್ಲೆಯ ಕಿರೀಟ ರತ್ನದಂತಿರುವ ಔರಾದ ತಾಲೂಕಿನ ಕಮಲನಗರ ಪೂಜ್ಯರ ಜನ್ಮಸ್ಥಳವಾಗಿತ್ತು. (ಈಗಿನ ಕಮಲನಗರ ತಾಲ್ಲೂಕು). ಲಿಂಗಾಯತ ಧರ್ಮವನ್ನು ಪಾಲಿಸುವ ಬುಳ್ಳಾ ಮನೆತನದ ರಾಚಪ್ಪ ಮತ್ತು ಸಂಗಮ್ಮ ಎಂಬ ಸಾತ್ವಿಕ ದಂಪತಿಗಳಿದ್ದರು.

ಕಾಯಕಜೀವಿಗಳಾಗಿದ್ದ ಈ ದಂಪತಿಗಳ ಪುಣ್ಯ ಗರ್ಭದಲ್ಲಿ ದಿನಾಂಕ 22–12–1890ರಲ್ಲಿ ಜನಿಸಿದರು ಡಾ.ಚನ್ನಬಸವ ಪಟ್ಟದೇವರು. ಅವರ ಮೊದಲಿನ ಹೆಸರು ಮಹಾರುದ್ರಪ್ಪ. ಶ್ರೀಗಳಿಗೆ 5 ವರ್ಷ ತುಂಬಿರುವಾಗಲೇ ತಂದೆ–ತಾಯಿಗಳು ಲಿಂಗೈಕ್ಯರಾದರು. ಮಹಾರುದ್ರಪ್ಪನಿಗೆ ಬಂಧು ಬಳಗವೆಲ್ಲ ದೇವರೇ ಆಗಿದ್ದರು.

### ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ

ಬೀದರ್ ಜಿಲ್ಲೆ ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ನಿಜಾಮ ಸರಕಾರದ ಆಡಳಿತ ಭಾಷೆ ಉರ್ದುವಾಗಿತ್ತು. ಉರ್ದು ಕಲಿತರೆ ಮಾತ್ರ ಸರ್ಕಾರಿ ನೌಕರಿಗಳು ಸಿಗುತ್ತಿದ್ದವು. ಇನ್ನೊಂದು ಕಡೆ ಮರಾಠಿ ಭಾಷೆಯ ಪ್ರಭಾವ. ಉರ್ದು ಮರಾಠಿಗಳ ನಡುವೆ ಕನ್ನಡ ಬಡವಾಗಿತ್ತು. 85 ವರ್ಷಗಳ ಹಿಂದೆ ಹೈದ್ರಾಬಾದ್ ಕರ್ನಾಟಕವು (ಇಂದಿನ ಕಲ್ಯಾಣ ಕರ್ನಾಟಕ) ಅಂದಿನ ನಿಜಾಮ್ ಸರಕಾರದ ಆಡಳಿತಕ್ಕೆ ಒಳಪಟ್ಟಿತ್ತು. ವಿದ್ಯಾರ್ಥಿಗಳು ಕಾಲೇಜಿನ ಕಟ್ಟೆ ಹತ್ತಬೇಕಾದರೆ ತಲೆಮೇಲೆ ರೂಮಿ ಟೋಪಿ ಮೈಮೇಲೆ ಶೇರವಾನಿ ಪಾಯಿಜಾಮುಗಳನ್ನು ಧರಿಸಬೇಕಾಗಿತ್ತು.

ಕನ್ನಡದ ಸೊಲ್ಲೆತ್ತಿದರೆ ಕತ್ತು ಮುರಿಸಿಕೊಳ್ಳುವ ಕಾಲ ಅದಾಗಿತ್ತು. ಉರ್ದು ಪ್ರಭಾವದ ಅಂದಿನ ವಾತಾವರಣದಲ್ಲಿ ಪೂಜ್ಯರು ಕನ್ನಡ ಪ್ರಸಾರ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ ಮಾಡಿದ್ದು ಅಪ್ಪಗಳ ಬಹುದೊಡ್ಡ ಸಾಧನೆ. ಶ್ರೀಗಳು ಕನ್ನಡದ ಉಸಿರಿಗಾಗಿ ಕನ್ನಡಕ್ಕೆ ಜೀವ ತುಂಬುತ್ತ ಬೀದರನ ಮರುಭೂಮಿಯಲ್ಲಿ ಓಯಸಿಸ್ನಂತೆ ಕನ್ನಡ ಭಾಷೆ ಪರಿಸರವನ್ನು ಹೆಚ್ಚಿಸುತ್ತಾ ಸದಾ ಹಸಿರನ್ನಾಗಿ ಮಾಡಿದರು. ಕನ್ನಡವೆಂದರೆ ಬಸವ, ಬಸವ ಎಂದರೆ ಕನ್ನಡ ಇವರ ಬಾಳ ಮಂತ್ರವಾಗಿತ್ತು.

ಕನ್ನಡ ದೇಶದಲ್ಲಿ ಕನ್ನಡವೇ ನಮ್ಮ ಹೃದಯದ ಭಾಷೆ. ಅಪ್ಪ ಬಸವಣ್ಣ ನಮ್ಮ ಹೃದಯ ಸೇರಬೇಕೆಂದರೆ ಕನ್ನಡ ಕಲಿಯಲೇಬೇಕು. ಕನ್ನಡ ಬೇರೆಯಲ್ಲ, ಬಸವ ಬೇರೆಯಲ್ಲ. ಕನ್ನಡವೆಂದರೆ ಬಸವ, ಬಸವನೆಂದರೆ ಕನ್ನಡ, ಇಂತಹ ಅನೇಕ ನುಡಿಗಳನ್ನು ಹಾಡು ಕಟ್ಟಿ ಹಾಡುತ್ತಿದ್ದ ಆಪ್ಪಗಳ ಹೃದಯ ನಿರಂತರವಾಗಿ ಕನ್ನಡಕ್ಕಾಗಿ ಹೋರಾಡುತಿತ್ತು. ಊರೂರು ತಿರುಗಿ ಜನರಿಗೆ ಕನ್ನಡದ ಬಗ್ಗೆ ತಿಳಿಹೇಳಿ ಕನ್ನಡ ಪ್ರೇಮಿಗಳನ್ನಾಗಿ ಮಾಡಿ ವಿದ್ಯಾರ್ಥಿಗಳನ್ನು ಯುವಕರನ್ನು ಕರೆದುಕೊಂಡು ಹೋಗಿ ರೈಲ್ವೇ ರೋಕೋ ಮಾಡಿದರು. ರೈಲ್ವೆ ಹಳಿಗಳ ಮೇಲೆ ಕನ್ನಡದ ಬಾವುಟ ಹಿಡಿದುಕೊಂಡು ಕೂತಾಗ ಕನ್ನಡಪರ ಜಯಘೋಷಗಳು ಮುಗಿಲು ಮುಟ್ಟಿದ್ದವು.

ಕನ್ನಡಕ್ಕಾಗಿ ಕೈ ಎತ್ತು ಅದು ಕಲ್ಪವೃಕ್ಷವಾಗುತ್ತದೆ ಎಂದು ಆಡಿದ ಕುವೆಂಪು ಅವರ ವಾಣಿಯನ್ನು ಪೂಜ್ಯರು ಆಚರಣೆಯಲ್ಲಿ ತಂದಿದ್ದರು. ಕನ್ನಡ, ವಚನಶಾಸ್ತ್ರ, ಶರಣರು ಈ ಮೂರು ಅಪ್ಪಗಳ ದೃಷ್ಟಿಯಲ್ಲಿ ಸಮಾನ ಪದಗಳು. ಈ ಪದಗಳು ಅಪ್ಪಗಳಿಗೆ ತ್ರಿಕರಣಗಳಾಗಿದ್ದವು.

ಕಲಿತರೆ ವಚನಶಾಸ್ತ್ರ ಅರಿವಿಗೆ ಬರುತ್ತದೆ ಅರಿವು ಪಡೆದ ಮನುಷ್ಯರೆಲ್ಲೊ ಶರಣರೇ ಇಂಥ ಅರಿವುಳ್ಳ ಶರಣರಿಂದ ರಾಷ್ಟ್ರದ ಏಳಿಗೆಯಾಗುತ್ತದೆ. ಸರ್ವಾಂಗ ಸುಂದರ ರಾಷ್ಟ್ರ ಕಟ್ಟುವಲ್ಲಿಯು ಕನ್ನಡದ ಅವಶ್ಯಕತೆ ಇದೆ ಎಂದರು. ಶ್ರೀಗಳು ಬೀದರ್ ಜಿಲ್ಲೆಯಲ್ಲಿ ರಾತ್ರಿಯನ್ನೇ ಹಗಲು ಮಾಡಿ ಕನ್ನಡ ಪರ ಕೆಲಸ ಮಾಡಿದರು.

ಕನ್ನಡದಂಗಳದಲ್ಲಿ ಪರಕೀಯರು ಚೆಲ್ಲಿದ ಅನ್ಯಭಾಷೆಯ ಕಸವನ್ನು ಗುಡಿಸಿ ಹಸನುಗೊಳಿಸಿದರು. ಕನ್ನಡದ ಬಾವುಟ ಎತ್ತಿಹಿಡಿದು ಕನ್ನಡಿಗರನ್ನು ಜಾಗೃತಗೊಳಿಸಿದರು. ಕನ್ನಡವನ್ನು ತಮ್ಮ ಪ್ರಾಣದಂತೆ ರಕ್ಷಿಸಿ ಕನ್ನಡಿಗರಿಗೆ ಸ್ವಾಭಿಮಾನದ ದೀಕ್ಷೆ ನೀಡಿದರು. 1936ರಲ್ಲಿ ನಿಜಾಮನ ಅಟ್ಟಹಾಸದ ಆಡಳಿತದಲ್ಲಿ ಹೊರಗೆ ಉರ್ದು ಪಾಠಶಾಲೆ ಎಂದು ಫಲಕ ಹಾಕಿ ಒಳಗೆ ಕನ್ನಡ ಕಲಿಸಿದ ಧೀರ ಚೇತನರು.

ಕ್ರಿ. ಶ. 1936ರಲ್ಲಿ ಆಂಧ್ರಪ್ರದೇಶದ ನಾರಾಯಣಖೇಡ ತಾಲೂಕಿನ ಮೋರಗಿಯಲ್ಲಿ ಶಾಂತಿವರ್ಧಕ ಗುರುಕುಲಾಶ್ರಮ ಶಾಲೆ ಸ್ಥಾಪಿಸಿದರು. ಶ್ರೀ ನಾಗಶೆಟ್ಟೆಪ್ಪ ಶೆಟಕಾರ ನಾರಾಯಣಖೇಡ ಅಧ್ಯಕ್ಷರಾಗಿದ್ದರು. ಈ ಮೋರಗಿ ಶಾಲೆ ಆರಂಭವಾದ ದ್ದಿನಿಂದ ಶ್ರೀ ಹನುಮಂತರಾವ್ ಮ್ಯಾನೇಜರ್ ಅವರು ಭಾಲ್ಕಿ ಶ್ರೀಗಳ ಜೊತೆಯಲ್ಲಿದ್ದರು.

ಅವರು ಗೊಂದಗ್ಗೆ ಊರಿನವರು. ಅವರ ಪತ್ನಿ ಶ್ರೀಮತಿ ಕಲ್ಲಮ್ಮ. ಮೋರಗಿಯಲ್ಲಿ ನಾಲ್ಕನೆಯ ವರ್ಗದ ತನಕ ಶಾಲೆಯಿತ್ತು. 100 ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಅವರಲ್ಲಿ ಮೇನಕೆರೆಯ ವಿ. ಎನ್. ಪಾಟೀಲ್ ಇಲ್ಲಿಯ ವಿದ್ಯಾರ್ಥಿಯಾಗಿದ್ದರು. (ಅವರು ವಿಧಾನಸಭಾ ಸದಸ್ಯರಾಗಿದ್ದರು ಪ್ರಸಿದ್ಧ ಕಮ್ಯುನಿಸ್ಟ್ ಮುಂದಾಳು ವಾಗಿದ್ದರು.)


ಹೈದರಾಬಾದ್ ಕರ್ನಾಟಕದಲ್ಲಿ ಕೇವಲ ಉರ್ದು ಶಿಕ್ಷಣದ ಹೊರತು ಮತ್ತಾವ ಭಾಷೆಯ ಶಿಕ್ಷಣವು ಇರಲಿಲ್ಲ. ಜನತೆ ಕನ್ನಡ ಕಲಿಯಬೇಕೆಂದರೆ ಹೊರಗಡೆ ಉರ್ದು ಪಾಠಶಾಲೆ ಎಂದು ಬರೆಯಿಸಿ ತರಗತಿಗಳಲ್ಲಿ ಕನ್ನಡ ಕಲಿಸುತ್ತಿದ್ದರು. ವಿದ್ಯಾರ್ಥಿಗಳ ಪ್ರಸಾದಕ್ಕಾಗಿ "ಶಾಂತಿವರ್ಧಕ ಮುಷ್ಟಿ ಫಂಡ್" ಸಂಗ್ರಹಿಸಿದರು.

ಮೊರಗಿಯಲ್ಲಿ ಮುಷ್ಟಿ ಫಂಡ್ ನಿಂದ ತಂದ ಧಾನ್ಯ ಜೋಳ ಗೋಧಿಯಿಂದ ಹಿಟ್ಟು ನುಚ್ಚು ಬಿಸುವುದಕ್ಕೆ ಎರಡು ಕಣ್ಣಿನಿಂದ ಕುರುಡರಾದ ಪಿರೋಜಿ ಮತ್ತು ಅಬ್ದುಲ್ಲಾ ಅವರು ಬೀಸುವ ಕಲ್ಲಿನಿಂದ ಕೈಯಲ್ಲೇ ಬೀಸುತ್ತಿದ್ದರು.

ಮೋರಗಿ ಅಲ್ಲಿ ಕೊಪ್ಪಳದ ಭಾನಾಪುರ ಶಾಸ್ತ್ರಿಗಳು ಮುಖ್ಯೋಪಾಧ್ಯಾಯರಾಗಿದ್ದರು. ಸಂಗಪ್ಪ ಮಾಳಗೆ ವೆಂಕಟರಾವ್ ಕಮಲನಗರ, ಮಾಧವರಾವ್ ಪಾಟೀಲ್ ಕಮಲನಗರ, ಸಿದ್ಧವೀರಯ್ಯನವರು ಶಿಕ್ಷಕರಾಗಿದ್ದರು. ನೀರಿನ ಅಭಾವದಿಂದ ಮೋರಗಿ ಶಾಲೆಯನ್ನು ಸಂಗಮ ಗ್ರಾಮಕ್ಕೆ ವರ್ಗಾಯಿಸಲಾಯಿತು.

ಭಾಲ್ಕಿಶ್ರೀಗಳು, ಮೆನೇಜರ್ ಹನುಮಂತರಾಯರು ಇಲ್ಲಿಯ ಶಾಲೆಯ ನಿರ್ಮಾಣಕ್ಕಾಗಿ ಕಲ್ಲು ಹೊತ್ತಿ ರೇತಿ ಎತ್ತಿ ಗುದ್ದಲಿ ಸಲಕೆಯನ್ನು ಹಿಡಿದು ಕೆಲಸ ಮಾಡಿದರು. ಅನೇಕ ಮಾವಿನ ಸಸಿಗಳನ್ನು ನೆಟ್ಟಿದ್ದರು. ಸಂಗಮ ಶಾಲೆಗೆ ಸರಕಾರದ ಮಾನ್ಯತೆ ಇರಲಿಲ್ಲ. ಸಂಗಮದಲ್ಲಿ ಐದನೇ ವರ್ಗದವರೆಗೆ ಕನ್ನಡ ಓದಿದ ವಿದ್ಯಾರ್ಥಿಗಳಿಗೆ ಉದಗೀರ, ಜಹಿರಾಬಾದ್, ಬೀದರ್ ಪ್ರೌಢಶಾಲೆಗಳಲ್ಲಿ ಪ್ರವೇಶಕ್ಕೆ ಅನುಮತಿ ಸಿಗಲಿಲ್ಲ.

ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣಕ್ಕಾಗಿ ಇಲ್ಲಿಯ ಮಕ್ಕಳನ್ನು ಅನುಮತಿ ಪಡೆದು ಲಾತೂರ್ ನಲ್ಲಿ ಮಾರವಾಡ ರಾಜಸ್ಥಾನಿ ಹೈಸ್ಕೂಲಿಗೆ ಸೇರಿಸಿದರು. ಕ್ರಿ.ಶ.1943–44ರಲ್ಲಿ ಲಾತೂರಿನಲ್ಲಿ ಮಹಾರಾಜರ ಮಠದಲ್ಲಿ ವಿದ್ಯಾರ್ಥಿಗಳ ಊಟ ನಡೆಯುತ್ತಿತ್ತು. ಲಾತೂರಿನಲ್ಲಿ ಕಲಿತು ಪ್ರಸಿದ್ಧರಾದವರಲ್ಲಿ ರಾಯಚೂರಿನ ಶಾಂತರಸರು ಒಬ್ಬರು.



### "ಲಾತೂರಿನ ರಾಜಸ್ಥಾನಿ ಮಾರವಾಡಿ ಹೈಸ್ಕೂಲ್ "

ಸಂಗಮದಲ್ಲಿ ಐದನೇ ವರ್ಗದವರೆಗೆ ಕನ್ನಡ ಓದಿದ ವಿಧ್ಯಾರ್ಥಿಗಳಿಗೆ ಉದಗೀರ, ಜಹಿರಾಬಾದ್, ಬೀದರ್ ಪ್ರೌಢಶಾಲೆಗಳಲ್ಲಿ ಪ್ರವೇಶಕ್ಕೆ ಅನುಮತಿ ಸಿಗಲಿಲ್ಲ. ಇದು ಹೊಸ ಸಮಸ್ಯೆಯಾಗಿ ಉದ್ಭವವಾಯಿತು.

ಆ ಕಾಲಕ್ಕೆ ಲಾತೂರಿನ ಮಾರವಾಡಿ ರಾಜಸ್ಥಾನಿ ಸಂಗಮದಲ್ಲಿ ಅಥವಾ ಅದರ ಶಾಖಾ ಶಾಲೆಗಳಿಂದ ಬಂದ ವಿಧ್ಯಾರ್ಥಿಗಳಿಗೆ ಪ್ರವೇಶ ದೊರಕಿಸಲು ಸ್ವಾಮಿಗಳು ಮಾಡಿದ ಪ್ರಯತ್ನಕ್ಕೆ ಫಲ ಸಿಕ್ಕಿತು. 40 ಜನ ವಿಧ್ಯಾರ್ಥಿಗಳಿಗೆ ಪ್ರವೇಶ ದೊರೆಯಿತು. ಈ ವಿಧ್ಯಾರ್ಥಿಗಳಿಗೆ ಜನರಿಂದ ಚಂದಾ ಮಾಡಿಕೊಂಡು ಫ್ರೀ ಬೋರ್ಡಿಂಗ್ ಆರಂಭಿಸಿದರು.

ಈ ಶಾಲೆಯಲ್ಲಿ ಕನ್ನಡ ಎರಡನೇಯ ಭಾಷೆಯಾಗಿ ಕಲಿಯಲು ಅವಕಾಶವಿತ್ತು. ಮಧ್ಯಾಹ್ನದ ಊಟ ಕಂತಿಭಿಕ್ಷೆಯಿಂದ ಮುಕ್ತಾಯಗೊಂಡು ಸಂಜೆಯ ಊಟದ ಸಲುವಾಗಿ ಬೋರ್ಡಿಂಗ್ ನಲ್ಲಿ ಅಡಿಗೆ ತಯಾರಾಗುತ್ತಿತ್ತು. ಕನ್ನಡ ವಿಧ್ಯಾರ್ಥಿಗಳಿಗೆ ಮಾರವಾಡಿ ರಾಜಸ್ಥಾನಿ ಪ್ರೌಢ ಶಾಲೆ ಒಂದು ವರದಾನವಾಯಿತು.

### "ಸಂಗಮದಲ್ಲಿ ಶಾಂತಿವರ್ಧಕ ಶಾಲೆ."

1943–44 ರಲ್ಲಿ ಸಂಗಮದಲ್ಲಿ ಶಾಲೆ ನಡೆಸಬೇಕೆಂದಾಗ ಸಾರ್ವಜನಿಕರಿಂದ ಹೇಳತೀರದ ಸಹಕಾರ ದೊರೆಯಿತು. ಇದು ಭಾಲ್ಕಿ ಶ್ರೀಗಳ ನಿರಪೇಕ್ಷಭಾವದ ಫಲ. ವೀರಭದ್ರಪ್ಪ ಮಾಶಟ್ಟೆ ಯವರು 24 ಎಕರೆ ಭೂಮಿಯನ್ನು ಕೊಡುತ್ತಾ ಶಾಲೆಗೆ ಶಾಂತಿವರ್ಧಕ ಆಳಂದಿ ಶಾಲೆ ಎಂಬ ಹೆಸರನ್ನು ಇಡಲು ಸೂಚಿಸಿದರು. ಇದು ಸ್ವಾಮಿಗಳಿಗೆ ಒಪ್ಪಿತವಾಗಲಿಲ್ಲ.

ಕೊನೆಗೆ ಲಾಕೆ ಸಂಗಯ್ಯನವರು ಮೂರು ಎಕರೆ ಭೂಮಿಯನ್ನು ಕೊಟ್ಟರು. ಬಳವಂತ ಶೇಳಕ್ಯಾ ಮುಂತಾದವರೆಲ್ಲ 175 ತಗಡುಗಳನ್ನು ಕೊಟ್ಟರು. ಮಾಧೂರಾಯ್ ಪಟೇಲರು 8 ತಗಡು ಕೊಟ್ಟರು. ಮೋರಗಿಯಿಂದ ಸಂಗಮಕ್ಕೆ ಬಂದ ಕೂಡಲೆ ಪಟ್ಟದೇವರು ವಿದ್ಯಾರ್ಥಿಗಳೊಡನೆ ಠಿಕಾಣಿ ಹೂಡಿದರು. ಕೊನೆಗೂ ಲಾಕೇ ಸಂಗಯ್ಯರ ಮನೆಯಲ್ಲಿ ಪಾಠಶಾಲೆಯು ಗುಡಿಯಲ್ಲಿ ಬೋರ್ಡಿಂಗ ನಡೆದವು. ಇದಕ್ಕೆ ಅಯ್ಯನವರು ವಿರೋಧಿಸಿದರು.

ಪ್ರಭುರಾವ ವಕೀಲರು ಮೊದಲಾದವರು ಬಂದು ಜಾಗೆಯ ವ್ಯವಸ್ಥೆಯನ್ನು ಮಾಡಿದರು. ಖ್ಯಾಡದ ನಾಗಶೆಟ್ಟಿ ಗುರುಲಿಂಗಪ್ಪ ಗೌಳೆಯವರು 44 ಎಕರೆ ಕೊಟ್ಟರು. ಅದೇ 175 ತಗಡುಗಳಿಂದ ಪ್ರಾರಂಭವಾದ ಶಾಲೆ ಹನ್ನೆರಡು ವರ್ಷಗಳ ವರೆಗೆ ಅವ್ಯಾಹತವಾಗಿ ನಡೆಯಿತು.


ಶಾಲೆಯ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಸಲಿಕೆ ಹಿಡಿದು ಕಲ್ಲು ಮರುಳು ಎತ್ತಿ ಪಾಯಾ ಅಗೆದು ತಾವು ಎಂತಹ ಕಠಿಣ ಶಾರೀರಿಕ ಕಾರ್ಯಕ್ಕೂ ಸೈ ಎನಿಸಿಕೊಂಡರು. ಗೋಪಿಕಿಶನ ಮಾರವಾಡಿ ಯವರು 3 ಖೋಲಿಗಳನ್ನು ದುಬಲಗುಂಡಿಯವರು, ನಾರಾಯಣಖೇಡದ ಶೆಟಕಾರರು ಒಂದು , ಜಹಿರಾಬಾದ ಕೋರಿ ಶಾಂತಪ್ಪ 1 ಖೋಲಿಯನ್ನು ,

ಮೀತಾರೆಯವರು ಒಂದು ಬಾಗಿಲನ್ನು ಕೊಟ್ಟರು. ಶ್ರೀ ಸಿದ್ಧವೀರಯ್ಯ ಸ್ವಾಮಿಗಳು ಬೆಂದೇಬೆಂಬಳಿ ಸಂಗಮ ಶಾಲೆಯ ಮುಖ್ಯ ಶಿಕ್ಷಕರಾಗಿದ್ದರು. ಎರಡು ನದಿಗಳ ಸಂಗಮದಲ್ಲಿ ಸ್ಥಾಪಿಸಲ್ಪಟ್ಟ ಈ ಶಾಲೆಗೆ ಪ್ರಕೃತಿಯ ಸುಂದರ ಪರಿಸರ ಅದರಲ್ಲೂ ಮಾವಿನಗಿಡಗಳ ತೋಪು ಒಂದು ವಿಶೇಷವಾದ ಮೆರಗನ್ನು ಕೊಟ್ಟಿದ್ದವು. ಆಮೇಲೆ ಬೀದರ ಭುಮರೆಡ್ಡಿ ಕಾಲೇಜಿನ ಮುಖ್ಯ

ಲೆಕ್ಕಪತ್ರಾಧಿಕಾರಿಗಳಾಗಿದ್ದ ಶ್ರೀ ಭಗವತಿಯವರು ಪ್ರಾರಂಭದ ವರ್ಷಗಳಲ್ಲಿ ಸಂಗಮ ಶಾಲೆಯ ಮುಖ್ಯ ಶಿಕ್ಷಕರಾಗಿ, ಕನ್ನಡ ಕಾವ್ಯದ ಜೈಮಿನಿ ಭಾರತ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು ಕೈಗೊಂಡ ಶೈಕ್ಷಣಿಕ ಕಾರ್ಯಗಳು.

ಹರಿಶ್ಚಂದ್ರ ಕಾವ್ಯಗಳ ಸ್ವಾರಸ್ಯವನ್ನು ವಿದ್ಯಾರ್ಥಿಗಳಿಗೆ ಉಣಬಡಿಸಿದರು.ಈ ಶಾಲೆಯಲ್ಲಿ 5ನೇ ವರ್ಗದವರಿಗೆ ಶಿಕ್ಷಣ ಕೊಡಿಸಲಾಗುತಿತು.

70 ರಿಂದೆ 75 ಜನ ವಿದ್ಯಾರ್ಥಿಗಳಿದ್ದರು. ಈ ಜಿಲ್ಲೆಯ ವಿಶೇಷ ಆಕರ್ಷಣೆಯೆಂದರೆ ಬೇರೆಬೇರೆ ಜಿಲ್ಲೆಗಳಿಂದಲೂ ಕೂಡ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಸಲುವಾಗಿ ಬರತೊಡಗಿದ್ದರು. ವಿಶೇಷವಾಗಿ ಯಾದಗಿರಿಯಿಂದ ಬೆಂಡೆಬೆಂಬಳಿಯಿಂದ ಎಂಟು ಹತ್ತು ಜನ ವಿದ್ಯಾರ್ಥಿಗಳು ಬಂದಿದ್ದರಿಂದ ಸಂಗಮ ಪಾಠಶಾಲೆಯ ಕೀರ್ತಿ ಸುತ್ತಮುತ್ತಲಿನ ನಾಡಿನಲ್ಲೆಲ್ಲಾ ಸ್ಪಷ್ಟವಾಗುತ್ತದೆ.




ದೂರದ ಉಸ್ಮಾನಾಬಾದ್, ನಾರಾಯಣಖೇಡ, ನಾಂದೇಡ ದೆಗಲೂರುಗಳಿಂದಲೂ ವರ್ಗಣಿಯು(ದೇಣಿಗೆ) ಬರುತ್ತಿತ್ತು. ವಿದ್ಯಾರ್ಥಿಗಳು ಬರುತ್ತಿದ್ದರು. ಶಿಕ್ಷಕರ ಸಂಬಳ ಹಾಗೂ ವಿದ್ಯಾರ್ಥಿಗಳ ಊಟದ ಖರ್ಚಿಗಾಗಿ ಹಣವನ್ನು ವರ್ಗಣಿ ರೂಪದಲ್ಲಿ ಸಂಗ್ರಹಿಸಿದರು.

ಚಂದಾ ವಸೂಲಿಗಾಗಿ ಬಳತದೇಶಿತರು, ಮಸಗಲ್

# ಕರುನಾಡ ಕಂದ

ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16


ಪಟ್ಟದೇವರು, ಹಣೆಗಾವ್ ಪಟ್ಟದೇವರು, ಭಾಲ್ಕಿಯ ಪಟ್ಟದೇವರಿಗೆ ಸಹಾಯಕರಾಗಿ ಅಶ್ವರೂಢರಾಗಿ ಖೇಡ, ಹುಲಸೂರು, ಚಾಂಡೇಶ್ವರ, ಹೊಳಸಮುದ್ರ, ತೋರಣ, ಸಾವಳಗಿ, ಆಳಂದಿ, ಡೋಣಗಾಪುರ, ಕಾಳಗಾಪುರ ಮುಂತಾದ ಊರುಗಳಲ್ಲಿ ಸಂಚರಿಸಿ ಭಕ್ತರು ಕೊಟ್ಟ ಧಾನ್ಯ ಕಂಥೆಗಳನ್ನು ಸಂಗ್ರಹಿಸುತ್ತ ನಡೆದರು.

ಈ ಕಾಲಕ್ಕೆ ಎಣ್ಣೆ ರಾಜನೆನಿಸಿಕೊಂಡಿದ್ದ ಬಿ.ವೀ. ಭೂಮರೆಡ್ಡಿಯವರು ಪ್ರತಿವರ್ಷ ಎರಡು ಡಬ್ಬಿ ಎಣ್ಣೆಯನ್ನು ದಾನವಾಗಿ ಕೊಡುತ್ತಿದ್ದರು. ಈ ಶಾಲೆಯಲ್ಲೂ ಕೂಡಾ ಧಾರ್ಮಿಕ ಶಿಕ್ಷಣಕ್ಕೆ ಪ್ರಾಶಸ್ತ್ಯವಿತ್ತು.

ಒಮ್ಮೆ ನದಿಗಳಿಗೆ ಮಹಾಪೂರ ಬಂದು ಶಾಲಾ ಕಟ್ಟಡದ ಸುತ್ತಲೂ ನೀರು ನಿಂತು ಬಿಟ್ಟಿತ್ತು. ನದಿಯ ಆಚೆಯ ದಡದಲ್ಲಿ ಉಳಿದ ವಿದ್ಯಾರ್ಥಿಯೊಬ್ಬ ಗಿಡದ ಮೇಲೆ ಮೂರು ದಿನಗಳವರೆಗೂ ಉಳಿದು ಮಹಾಪೂರ ಇಳಿದನಂತರ ನದಿ ದಾಟಿ ಬಂದ ರೋಮಾಂಚಕಾರಿ ಘಟನೆ ನಡೆಯಿತು. ನದಿ ದಾಟಿ ಬರಬೇಕಾದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗಹತ್ತಿದ್ದರಿಂದ ಸಂಗಮದಲ್ಲಿ ನಡೆಯುತ್ತಿದ್ದ ಶಾಲೆಯನ್ನು ಸ್ಥಳಾಂತರಿಸುವ ಪ್ರಶ್ನೆ ಎದ್ದುನಿಂತಿತು.

### "ಕಮಲನಗರ ಶಾಲೆ"

ಸಂಗಮದಲ್ಲಿ 5ನೇ 6ನೇ ತರಗತಿಯಲ್ಲಿದ್ದ ಮಕ್ಕಳು ಕಮಲನಗರಕ್ಕೆ ಬಂದು ಅಭ್ಯಾಸ ಮುಂದುವರೆಸಿದರು. ಶ್ರೀ ಶರಣಪ್ಪ ವಾರದ ಗುಲ್ಬರ್ಗ ಮೊದಲನೇ ಹೆಡ್ ಮಾಸ್ಟರ್ ಅವರು. ಇಲ್ಲಿ ಒಂದನೇ ತರಗತಿಯನ್ನು ಆರಂಭಿಸಿದರು. ಎಸ್.ಆರ್.ಪರಗೊಂಡೆ ಮುಖ್ಯೋಪಾಧ್ಯಾಯರು. ಕೋಷ್ಟಿ, ಕೋಟಿ ಎ.ಬಿ.ಸೊನ್ನದ ಹೀಗೆ 5 ಜನ ಶಿಕ್ಷಕರ ಜೊತೆ ಭಗವಂತಪ್ಪಾ ನೌಬಾದೆ ಚಪರಾಸಿಯಾಗಿ ಸೇರಿದರು.

ಇಲ್ಲಿಯೂ ಸಂಗಮದಂತೆ ಶಿಸ್ತು ಅಚ್ಚುಕಟ್ಟಾದ ಶಿಕ್ಷಣ ದೊರೆಯುತ್ತಿತ್ತು. ಇಲ್ಲಿಗೆ ವೀರಭದ್ರಪ್ಪ ಎಂಬ ಬೆಳಗಾವಿಯ ತಾಲೂಕು ಶಿಕ್ಷಣಾಧಿಕಾರಿಗಳು ತನಿಖೆಗೆ ಬಂದರು. ಶಾಲೆಯ ಶಿಸ್ತು ಪರಿಸರ ಕಂಡು ಸಂತೋಷಗೊಂಡರೂ ಸಹ ಅವರು ಶಿಕ್ಷಕರ ವೇತನ 30 ರೂ. ಇದ್ದುದು ಕಂಡು ಕಳವಳಗೊಂಡರು. ಅಪ್ಪಗಳು ಪಡುತ್ತಿದ್ದ ಶ್ರಮದ ಬಗ್ಗೆ ಭಾಲ್ಕಿಯಲ್ಲಿ ಯೆ ತಿಳಿದಿದ್ದ ಅವರು ನಿರೀಕ್ಷಣೆ ಮುಗಿದ ನಂತರ ಸಿಬ್ಬಂದಿ ವರ್ಗದ ಮೀಟಿಂಗ್ ತೆಗೆದುಕೊಂಡು ಅವರ ಮನಸ್ಸಿನಲ್ಲಿ ಮೂಡಿದ ಬೆಳಕನ್ನು ಮುಂದಿಟ್ಟರು.

ನಮ್ಮ ಮ್ಯಾನೇಜರ್ ಕಮಿಟಿಯ ಮುಂದೆ ಸರ್ಕಾರ ಸ್ಕೈಲ್ ಕೊಡಬೇಕು ಕೊಟ್ಟಿದ್ದರೆ ಶಿಕ್ಷಕರಿಗೂ ಲಾಭ ಸಂಸ್ಥೆಗೂ ಲಾಭ ಅದರಲ್ಲಿ ಕಡಿಮೆ ನೀವು ಕೊಟ್ಟರೆ ನಾವು ದುಡಿಯುತ್ತೇವೆ ಎಂದು ತಿಳಿಸಿ ಸರ್ಕಾರಿ ಸ್ಕೇಲ್ ಕೊಡುವಂತೆ ಠರಾವು ಪಾಸು ಮಾಡಿದರೆ ನಾನು ನನ್ನ ತನಿಖೆಯ ಇಂಥಾ ವರದಿಯಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯಲ್ಲಿ ವೇತನ ಕೊಡುತ್ತಿರುವರೆಂದು ತನಿಖಾವರದಿ ಸಲ್ಲಿಸುವುದಾಗಿ ಹೇಳಿದರು.

ಮುಂದೆ ಕಮಿಟಿ ಮೀಟಿಂಗ್ ಕರೆಯಲಾಯಿತು. ಕಮಿಟಿ ಮುಂದೆ ಈ ವರದಿ ಇಡಲಾಯಿತು. ವರದಿಯಂತೆ ಶಿಕ್ಷಕರಿಗೆ ಅವರವರ ಪದವಿಯಂತೆ ಸರ್ಕಾರಿ ಸ್ಕೇಲ್ ಕೊಡಲಾಯಿತು. ಮೊದಲು 2300 ರೂ. ಮಾತ್ರ ವರ್ಷಕ್ಕೆ ನಿಗದಿ ಆಗಿತ್ತು. ಅದನ್ನು 24,000ರೂ. ವರ್ಷಕ್ಕೆ ದೊರೆಯಿತು. ಹೀಗಾಗಿ ಶಿಕ್ಷಕರಿಗೂ ಹುಮ್ಮಸ್ಸು ಬಂದು ಶಾಲಾ ಅಭ್ಯಾಸವನ್ನು ಇನ್ನಷ್ಟು ಎತ್ತರಕ್ಕೆ ಒಯ್ದರು.

1957ರಲ್ಲಿ 7ನೆಯ ತರಗತಿಗೆ ಮನ್ನಣೆ ದೊರೆಯಿತು. ಬೋರ್ಡ್ ಪರೀಕ್ಷೆಯಲ್ಲಿ 90% ಫಲಿತಾಂಶ ಬಂದಿತು.

ಅದೇ ವರ್ಷ ಕಟ್ಟಡಕ್ಕಾಗಿ 6 ಎಕರೆ ಭೂಮಿ ಖರೀದಿಸಲಾಯಿತು. ಅದು ಕೇವಲ 600 ರೂಪಾಯಿಗಳಿಗೆ ಮಾತ್ರ. ನಾಗಶೆಟ್ಟಿ ಮಾಲಿ ಪಾಟೀಲರ ಸಂಪೂರ್ಣ ಸಹಕಾರದಿಂದ ಈ ಕೆಲಸ ನೆರವೇರಿತು. ಕಟ್ಟಡಕ್ಕಾಗಿ ಸರ್ಕಾರದಿಂದ 10,000 ಧನಸಹಾಯ ದೊರೆಯಿತು.

ನಕ್ಷೆ ಹಾಕಲು ಬೀದರನಿಂದ ಆಗಮಿಸಿದ ಇಂಜಿನಿಯರ್ ಪ್ರಕಾರ ಉತ್ತರಕ್ಕೆ ಮುಖಮಾಡಿ ಕಟ್ಟಡ ತಯಾರಾಗಬೇಕೆಂದು ಇತ್ತು. ಆದರೆ ಅಪ್ಪಾಜಿಯವರಿಗೆ ಅದು ಸರಿ ಹೊಂದಲಿಲ್ಲ. ಅದನ್ನು ತಿರಸ್ಕರಿಸಿದ ಅಪ್ಪಾಜಿ ಗ್ರಾಮಕ್ಕೂ ಮುಖವಿಲ್ಲದ ರಸ್ತೆಗೂ ಮುಖವಿಲ್ಲದ ಕಟ್ಟಡದ ಕಟ್ಟಬೇಕು ಎಂದು ಕೇಳಿದರು. ಅದಕ್ಕೆ ತುಂಬಾ ಒರಟಾಗಿ ಮಾತನಾಡಿದ ಇಂಜಿನಿಯರ್ ರನ್ನು ತೆಗೆದು ಹಾಕಿ ತೊಲಗಲು ಹೇಳಿ, ನಾನು ಸ್ವಾಮಿ, ನನ್ನ ಜೋಳಿಗೆ ಗಟ್ಟಿಯಾಗಿದೆ, ಭಕ್ತರಿಂದ ಹಣ ಜಮಾಯಿಸಿ ನನ್ನಿಚ್ಛೆಯಂತೆ ಕಟ್ಟಡ ಕಟ್ಟುವೆ ನೀನು ತೊಲಗು ಇಲ್ಲಿಂದ ಎಂದು ಬೈದರು.

ಮುಂದೆ ಬೀದರನ ಖಾಸಗಿ ಗುತ್ತಿಗೆದಾರರಾದ ಲಿಂಗಪ್ಪನವರಿಂದ ನಕ್ಷೆ ತಯಾರಿಸಲಾಯಿತು. ಕೋಟಿ ಕೋಟಿ ಕನ್ನಡಿಗರ ಜನಪ್ರಿಯ ನಾಯಕ ಶ್ರೀ ನಿಜಲಿಂಗಪ್ಪ ಸಿದ್ಧವ್ವನಹಳ್ಳಿಯವರಿಗೆ ಅಡಿಗಲ್ಲು ಸಮಾರಂಭಕ್ಕೆ ಆಹ್ವಾನಿಸಲಾಯಿತು. ಅವರ ಜೊತೆ ಮೇಲುಕೋಟೆ, ಹಳ್ಳಿಕೇರಿ ಗುದ್ಲೆಪ್ಪ ವಿರುಪಾಕ್ಷಪ್ಪನವರು ಬಂದಿದ್ದರು. ವಿಜ್ರಂಭಣೆಯಿಂದ ಅಡಿಗಲ್ಲು ಸಮಾರಂಭವನ್ನು ನಿಜಲಿಂಗಪ್ಪ ನೆರವೇರಿಸಿಕೊಟ್ಟರು.

ಆಗ ಅವರಿಗೆ ಸನ್ಮಾನ ಪತ್ರ ಬಂದಿತು ಅಪ್ಪಾಜಿಯವರು ಕನ್ನಡಿಗರ ನೆಚ್ಚಿನ ಮುಖ್ಯಮಂತ್ರಿ ಯಾಗಲೆಂದು ಹಾರೈಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ರೈಲ್ವೆ ರೋಕೊ ಆಂದೋಲನ ಅಪ್ಪಾಜಿಯ ನೇತೃತ್ವದಲ್ಲಿ ನಡೆಯಿತು. ಅಪ್ಪಾಜಿ ಶಿಕ್ಷಕ ಹಾಗೂ ಮಕ್ಕಳೊಂದಿಗೆ ಭಾಗಿಯಾದರು. ಆಂದೋಲನ ಸಂಪೂರ್ಣ ಯಶಸ್ವಿಯಾಯಿತು.

ಮುಂದೆ 1954 ರಲ್ಲಿ ಶ್ರೀನಿವಾಸ್ ಮದನೂರು ಅವರ ಸಹಾಯದಿಂದ ಸಂಗಮ ಶಾಲೆಗೆ ಸರಕಾರದ ಅನುಮತಿ ದೊರೆಯಿತು. 1956 ರ ಶಾಲೆ 1958 ರಲ್ಲಿ ಹೈಸ್ಕೂಲ್ ಆಗಿ 1968 ರಲ್ಲಿ ಹೈಯರ್ ಸೆಕೆಂಡರಿ ಸ್ಕೂಲ್ ಆಗಿ ನಂತರ ಜೂನಿಯರ್ ಕಾಲೇಜ್ ಆಗಿ ಪರಿವರ್ತನೆಗೊಂಡಿತು.

ವೀ.ಎಮ್. ಪಾಟೀಲ ತೆಂಗಿನಕಾಯಿ ಹಾಗೂ ಎಸ್ ಪಿ ಪಾಟೀಲ ರಂತಹ ನಿಷ್ಣಾತ ಮುಖ್ಯಶಿಕ್ಷಕರ ನೇತೃತ್ವದಲ್ಲಿ ಈ ಜೂನಿಯರ್ ಕಾಲೇಜು ಅಖಂಡವಾಗಿ ವಿದ್ಯಾದಾನ ಮಾಡುತ್ತ ಬಂದಿದೆ. ಸ್ವಾಮಿಗಳ ಪಾಠ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು 1952ರಲ್ಲಿ ಪ್ರಥಮವಾಗಿ ಎಚ್.ಎಸ್.ಸಿ ಪರೀಕ್ಷೆ ಪಾಸಾದರು. ಕನ್ನಡದಲ್ಲಿ ಮೆಟ್ರಿಕ್ ವರೆಗೆ ಉಚ್ಚ ಶಿಕ್ಷಣ ಪಡೆದವರು ಬೀದರ್ ಜಿಲ್ಲೆಯಲ್ಲಿ ಈ ಶಾಲೆಯ ವಿದ್ಯಾರ್ಥಿಗಳೇ ಮೊದಲಾಗಿದ್ದರು.

ಪೂಜ್ಯ ಅಪ್ಪಾಜಿ ಅವರು ಬೀದರ್ ಜಿಲ್ಲೆಯಲ್ಲಿ ಉರ್ದು ಮರಾಠಿ ಮಾಧ್ಯಮಗಳ ಬದಲಾಗಿ ಕನ್ನಡವನ್ನು ತನ್ನ ಶಿಕ್ಷಣ ಮಾಧ್ಯಮವನ್ನಾಗಿ ಆರಿಸಿಕೊಳ್ಳಲು ಸಹ ಮಾಡಿದ ಮೇರುವ್ಯಕ್ತಿತ್ವ.

ನಂತರ ಭಾಲ್ಕಿಯಲ್ಲಿ ಅಕ್ಕಮಹಾದೇವಿ ಹೈಸ್ಕೂಲನ್ನು, 1969 ರಲ್ಲಿ ಬೀದರನಲ್ಲಿ ಅಕ್ಕಮಹಾದೇವಿ ಕಾಲೇಜನ್ನು ಆರಂಭಿಸಿದರು. 1968ರಲ್ಲಿ ಭಾಲ್ಕಿಯಲ್ಲಿ ಒಂದು ಡಿಗ್ರಿ ಕಾಲೇಜನ್ನು ಆರಂಭಿಸಿದರು. ಆಗ ಪೂಜ್ಯರ ವಿದ್ಯಾರ್ಥಿ ಬಳಗ 700ರ ಗಡಿ ದಾಟಿತು. ಹೇಗೆ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ಅವರ ನೇತೃತ್ವದಲ್ಲಿ ಈ ಭಾಗದಲ್ಲಿ ಶೈಕ್ಷಣಿಕ ಪ್ರಗತಿ ಸಾಕಷ್ಟು ಹೆಚ್ಚಾಯಿತು.

ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಅಪ್ಪಾಜಿಯವರು ತಮ್ಮನ್ನು ತಾವು ಎಂದು ಸಂಸ್ಥಾಪಕ ನೆನ್ನದೆ ಸೇವಕನೆಂದು ಹೇಳಿಕೊಳ್ಳುತ್ತಿದ್ದರು. ಅವರು ನಿರಂತರವಾಗಿ ತೆರೆಮರೆಯಲ್ಲಿಯೇ ಉಳಿದು ಕನ್ನಡದ ರಕ್ಷಣೆಗಾಗಿ ರಕ್ಷಾ ಕವಚದಂತೆ ನಿಂತು ಹೋರಾಡಿದರು.

### "ಸ್ತ್ರೀ ಉದ್ಧಾರಕ"

ಪೂಜ್ಯ ಚನ್ನಬಸವ ಪಟ್ಟದೇವರು ಸ್ತ್ರೀಯರು ಸಾಮಾಜಿಕವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಧಾರ್ಮಿಕವಾಗಿ ಮುಂದೆ ಬರಬೇಕೆಂಬ ಮಹದೋದ್ದೇಶವನ್ನು ಹೊಂದಿದ್ದರು. ಸ್ತ್ರೀಯರ ಶ್ರೇಯೋಭಿವೃದ್ಧಿಗಾಗಿ ಕನ್ಯಾಶಾಲೆ , ಕಾಲೇಜು, ಭಾಲ್ಕಿಯಲ್ಲಿ ಅಕ್ಕಮಹಾದೇವಿ ಕಾಲೇಜು ಬೀದರನಲ್ಲಿ ಅಕ್ಕಮಹಾದೇವಿ ಕಾಲೇಜು ಆರಂಭಿಸಿದ್ದರು. ಅಕ್ಕಮಹಾದೇವಿ ಗಂಗಾಂಬಿಕೆ ನೀಲಾಂಬಿಕೆ ಅವರಂತೆ ಹೆಣ್ಣುಮಕ್ಕಳು ಅಂತರಂಗದ ಜ್ಞಾನವನ್ನು ಪಡೆದು ಜ್ಯೋತಿಯಂತೆ ಬೆಳಗಬೇಕು ಎಂಬುದು ಅವರ ಆಸೆಯಾಗಿತ್ತು.

ಶರಣೆಯರ ಬೆಳವಣಿಗೆಗಾಗಿ ನೀಲಾಂಬಿಕಾ ಆಶ್ರಮ ಸ್ಥಾಪಿಸಿದರು.

### "ಪತ್ರಿಕಾ ಪ್ರೇಮಿ"

ಪೂಜ್ಯರು ಅಪಾರ ಪತ್ರಿಕಾ ಪ್ರೇಮಿಗಳಾಗಿದ್ದರು. ಬಾಲ್ಯದಲ್ಲಿ ಅವರು ಮೈಸೂರು ಸ್ಟಾರ್ ಪತ್ರಿಕೆ ಓದಿದವರು, ಸಂಗ್ರಾಮ ಪತ್ರಿಕೆ, ಸಾವಧಾನ ಪತ್ರಿಕೆ, ಪರಂಜ್ಯೋತಿ ಪತ್ರಿಕೆ ಹೀಗೆ ಅನೇಕ ಪತ್ರಿಕೆಗಳನ್ನು ಓದುತ್ತಿದ್ದರು. ಅವರಿಗೆ ಪತ್ರಿಕೆಯ ಸಾಮರ್ಥ್ಯ ಗೊತ್ತಿತ್ತು. ಆದ್ದರಿಂದ ಅವರು ಭಾಲ್ಕಿ ಹಿರೇಮಠದಿಂದ 1 ಡಿಸೆಂಬರ್ 1971 ರಲ್ಲಿ ಶಾಂತಿಕಿರಣ ಪತ್ರಿಕೆಯನ್ನು ಪ್ರಾರಂಭಿಸಿದರು.

ಅದರ ಮೂಲಕ ಕನ್ನಡ ಶರಣರ ಚರಿತ್ರೆ ಮತ್ತು ವಚನ ಸಾಹಿತ್ಯದ ಪ್ರಸಾರವಾಗಬೇಕೆಂದು, ಜನಮನದ ಮೌಢ್ಯ ನಿವಾರಣೆ ಆಗಬೇಕೆಂಬುದು ಅವರ ಉದ್ದೇಶವಾಗಿತ್ತು. ಶಾಂತಿ ಕಿರಣ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಡಾ.ಜಿ.ಬಿ ವಿಸಾಜಿ ಅವರು ಕಾರ್ಯನಿರ್ವಹಿಸುತ್ತಿದ್ದರು

ಕನ್ನಡ ತಾಯಿಯ ಬೀದರ ಕಿರೀಟಕ್ಕೆ ಶಾಂತಿಯ ಗರಿಯನಿಟ್ಟದ್ದರು. ಸಿದ್ಧರಾಮನಂತೆ ಗುದ್ದಲಿ ಹಿಡಿದು ಸತ್ಕಾಯಕ ಯೋಗಿಯಾದರು. ಜ್ಯೋತಿಯಂತೆ ಕಾಂತಿಯ ನೀಡಿದ ಶ್ರೀ ಚನ್ನಬಸವರಿವರು. ಬಾಲ್ಕಿ ನಾಡಿನ ಗುಡಿಯಲ್ಲಿ ಮೆರೆಸಿದ ಕನ್ನಡ ಪಟ್ಟದೇವರಿವರು.

### "ಪ್ರಶಸ್ತಿ":

ಕ್ರಿ.ಶ.1987ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ(ಕನ್ನಡ  ಭಾಷೆಯ ಸೇವೆಗಾಗಿ) ಭಾಲ್ಕಿಯ ತಹಶೀಲ್ದಾರ್ ಶ್ರೀ ಕಾಶಿನಾಥರಾವ್ ಗೋಕಳೇ ಪ್ರಶಸ್ತಿ ಪ್ರದಾನ ಮಾಡಿದರು.

### "ಲಿಂಗೈಕ್ಯ":

ಪೂಜ್ಯ ಡಾ. ಚನ್ನಬಸವ ಪಟ್ಟದೇವರು ಶತಾಯುಷಿಗಳಾಗಿ ಬಾಳಿ 22–4–1999 ರಲ್ಲಿ ಲಿಂಗೈಕ್ಯರಾದರು. ಅವರ ನಿಧನದ ನಂತರ ಬೀದರ್ ಜಿಲ್ಲೆಯ ಧಾರ್ಮಿಕ ಕ್ಷೇತ್ರದ ಹೆಮ್ಮರವೊಂದು ಉರುಳಿ ಬಿದ್ದಂತಾಯಿತು.""

### "ಡಾ. ಬಸವಲಿಂಗ ಪಟ್ಟದೇವರು"




ಪರಮ ಪೂಜ್ಯ ಡಾ: ಚನ್ನಬಸವ ಪಟ್ಟದೇವರ ಹಾಗೂ ಶ್ರೀ ಮಠಕ್ಕೆ ಸಮರ್ಥ ಉತ್ತರಾಧಿಕಾರಿಯಾಗಿ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರನ್ನು ಗುರುತಿಸಿ ನಮಗೆ ಬಿಟ್ಟು ಹೋದದ್ದು ದೊಡ್ಡ ಅಪ್ಪಗಳ ಬಹುದೊಡ್ಡ ಕೊಡುಗೆ. ನಂತರ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರು

ಅವರು ಸಹ ಹಿರೇಮಠ ಸಂಸ್ಥಾನ ವಿದ್ಯಾಪೀಠ ಸಂಸ್ಥೆಯನ್ನು ತೆಗೆದು ಗಡಿನಾಡಿನಲ್ಲಿ ಕಾರಾಮುಂಗಿ, ಖಂಡಾಳ, ಸ್ವಂತೆ, ಭಾಲ್ಕಿ, ಕಂದಗುಳ, ಬೀದರ, ಸಂತಪೂರ, ಔರಾದ, ಸಂಗಮ, ಕಾಸರತುಗಾವ್, ಕಮಲನಗರ ಹೀಗೆ ಗಡಿನಾಡಿನಲ್ಲಿ ಕನ್ನಡದ ಬೀಜ ಬಿತ್ತಿ ಕನ್ನಡ ಶಾಲೆಯನ್ನು ತೆಗೆದಿದ್ದಾರೆ.

### ಹಾನಗಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯ

ಡಾ. ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯ, ಬೀದರ

ಅನುಭವ ಮಂಟಪ ಗುರುಕುಲ ಪ್ರಾಥಮಿಕ ಶಾಲೆ ಕಾರಾಮುಂಗಿ ಮತ್ತು ಬಸವ ಗುರುಕುಲ್ ಪ್ರಾಥಮಿಕ ಶಾಲೆ ಮೋರ್ಗಿ.

ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿ ಶಾಲೆ ಕರಡ್ಯಾಳ. ಈ ಶಾಲೆ ರಾಜ್ಯ ಮಟ್ಟದಲ್ಲಿ ಉನ್ನತ ಸಾಧನೆ  ಮಾಡಿ ದೇಶಕ್ಕೆ ಪ್ರಸಿದ್ಧಿ ಪಡೆದಿದೆ.

ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಪ್ರಥಮ ಅಧ್ಯಕ್ಷರು ಶ್ರೀ ಅಪ್ಪಾರಾವ್ ಶೆಟಕಾರ (1936–41).

ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯನ್ನು ಆರಂಭಿಸುವಾಗ ಮೋರಗಿ ಯಲ್ಲಿ ಅವರ ಬೆನ್ನಿಗೆ ನಿಂತ ಮೊದಲ ವ್ಯಕ್ತಿ ಅಪ್ಪಾರಾವ್ ಶೇಟಕಾರ್.

ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಎರಡನೇ ಅಧ್ಯಕ್ಷರಾಗಿ ಶ್ರೀ ಗೋಪಿ ಕಿಶನ್ ಪರಶುರಾಮ ಮಾಲಾಣಿ (1941–48)

ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಖೇಡ್ ಗ್ರಾಮದವರಾದ ಇವರು ವ್ಯಾಪಾರ ನಿಮಿತ್ಯ ಹೈದ್ರಾಬಾದ್ ನಲ್ಲಿ ನೆಲೆಸಿದ್ದರು. ಇವರ ಜಮೀನು ಈಗಲೂ ಖೆಡ್ ಗ್ರಾಮದಲ್ಲಿದೆ. ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರ ಪರಮ ಶಿಷ್ಯರಾದ ಇವರು ಅಪ್ಪಾಜಿಯವರ ಶೈಕ್ಷಣಿಕ ಕಾರ್ಯಕ್ಕೆ ಕೈಜೋಡಿಸಿದರು. ಇವರ ಅಧ್ಯಕ್ಷತೆಯಲ್ಲಿ ಮೋರಗಿ ಯಲ್ಲಿನ ಶಾಲೆಯನ್ನು ಸಂಗಮಕ್ಕೆ ಸ್ಥಳಾಂತರಿಸಲಾಯಿತು.

ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಮೂರನೇ ಅಧ್ಯಕ್ಷರು ಶ್ರೀ ಆರ್ ವಿ ಬಿಡಪ್ಪ ನವರು (1952–63).

ಇವರ ಪಾತ್ರ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಉನ್ನತಮಟ್ಟಕ್ಕೆ ಹೋಗಲು ತುಂಬಾ ಪ್ರಮುಖವಾದದ್ದು. ರಜಾಕಾರರ ಹಾವಳಿಯ ಸಮಯದಲ್ಲಿ ನಿಂತಿದ್ದ ಶಾಲೆಯನ್ನು ಪುನರ ಆರಂಭಿಸಬೇಕೆಂದು ಅಪ್ಪಾಜಿಯವರು ಪಣತೊಟ್ಟು ನಿಂತಾಗ ಅವರ ಬೆನ್ನಿಗೆ ನಿಂತು ಮನ ಧನ ಎಲ್ಲದರಲ್ಲೂ ಸಹಾಯ ಮಾಡಿದ ಶರಣ ಆರ್. ವಿ. ಬಿಡಪ್ಪನವರು. ತಮ್ಮ 10 ವರ್ಷದ ಕಾಲಾವಧಿಯಲ್ಲಿ ಅನೇಕ ಉತ್ತಮ ಕಾರ್ಯಗಳನ್ನು ಮಾಡುತ್ತಾ ಬಂದಿದ್ದರು.

ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ನಾಲ್ಕನೆಯ ಅಧ್ಯಕ್ಷರಾಗಿ ಶ್ರೀಯುತ ಭೀಮಣ್ಣ ಖಂಡ್ರೆ ಬಾಲ್ಕಿ ಅವರು (1963–93)

30 ವರ್ಷಗಳ ಕಾಲ ಸುದೀರ್ಘವಾಗಿ ಅಪ್ಪಾಜಿಯವರಿಗೆ ಬಲವಾಗಿ ನಿಂತು ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಶಿಕ್ಷಕರಿಗೆ ಸರಕಾರದಿಂದ ಬರುವ ಹಣ ಬರಲು ವಿಳಂಬವಾದಾಗ, ಕೊರತೆಯಾದಾಗ ತಾವು ವಾರಗಟ್ಟಲೆ ಉಪವಾಸವಿದ್ದು ಹಣ ವ್ಯವಸ್ಥೆಯನ್ನು ಮಾಡಿದ ಮಹಾನ್ ವ್ಯಕ್ತಿ.

ಪೂಜ್ಯರ ಅಖಂಡ ಆಶೀರ್ವಾದದಿಂದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನು ಉನ್ನತೋನ್ನತ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಇವರಿಗೆ ಸಲ್ಲುತ್ತದೆ. ಪದವಿ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಬೀದರನಲ್ಲಿ ಮಹಿಳಾ ಕಾಲೇಜು ಇವೆಲ್ಲವೂಗಳಲ್ಲಿ ಇವರ ಪಾತ್ರ ಮಹತ್ವದ್ದು.

1963 ರಲ್ಲಿ ಡಾ. ಭೀಮಣ್ಣ ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ, ಮಾಜಿ ಸಾರಿಗೆ ಸಚಿವ, ಗುಣಮಟ್ಟದ ಶಿಕ್ಷಣವನ್ನು ಪ್ರದೇಶಕ್ಕೆ ಹತ್ತಿರ ತರುವ ಪ್ರಾಥಮಿಕ ಉದ್ದೇಶದೊಂದಿಗೆ ಕರ್ನಾಟಕದ ಭಾಲ್ಕಿಯ ಹಿರೇಮಠ ಸಂಸ್ಥಾನದ ಸಂತೆ ಪರಮ ಪೂಜ್ಯ ಶ್ರೀ ಮಾ.ಘಾ.ಚಾ.ಡಾ.ಚನ್ನಬಸವ ಪಟ್ಟದ್ದೇವರು ಅವರ ಆಶೀರ್ವಾದ, ಪ್ರೋತ್ಸಾಹ ಮತ್ತು ಕ್ರಿಯಾಶೀಲ ಪ್ರೋತ್ಸಾಹದಿಂದ ಈ ಪ್ರಯತ್ನವು ಮಾಜಿ ಸಾರಿಗೆ ಸಚಿವ ಡಾ.ಭೀಮಣ್ಣ ಖಂಡ್ರೆ ಅವರ ಸಮರ್ಥ ಚುಕ್ಕಾಣಿ ಹಿಡಿದಿಟ್ಟುಕೊಂಡು ಶಕ್ತಿಯುತವಾಗಿ ಬೆಳೆಯಿತು.

ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಐದನೆಯ ಅಧ್ಯಕ್ಷರು ಶ್ರೀಯುತ ಈಶ್ವರ ಖಂಡ್ರೆ ಅವರು. (1993–ಇಲ್ಲಿಯವರೆಗೆ).

ಭೀಮಣ್ಣ ಖಂಡ್ರೆ ಅವರ ನಂತರ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನು ರಾಜ್ಯಮಟ್ಟದಲ್ಲಿ ಅಲ್ಲದೆ ದೇಶಮಟ್ಟದಲ್ಲಿ ಕೀರ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ಅನೇಕ ಮಹತ್ವದ ಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ.

ಭೀಮಣ್ಣ ಖಂಡ್ರೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಭಾಲ್ಕಿ
ಹರಳಯ್ಯ ಪಾಲಿಟೆಕ್ನಿಕ್, ಭಾಲ್ಕಿ
ಕೈಗಾರಿಕಾ ತರಬೇತಿ ಸಂಸ್ಥೆ, ಭಾಲ್ಕಿ
ಕೈಗಾರಿಕಾ ತರಬೇತಿ ಸಂಸ್ಥೆ, ಕಮಲನಗರ
ಚನ್ನಬಸವೇಶ್ವರ ಪದವಿ ಕಾಲೇಜು, ಭಾಲ್ಕಿ
ಚನ್ನಬಸವೇಶ್ವರ ಪದವಿ ಪೂರ್ವ ಕಾಲೇಜು, ಭಾಲ್ಕಿ
ಅಕ್ಕಮಹಾದೇವಿ ಬಾಲಕಿಯರ ಸಂಯುಕ್ತ ಜೂನಿಯರ್ ಕಾಲೇಜು, ಭಾಲ್ಕಿ
ಅಕ್ಕಮಹಾದೇವಿ ಮಹಿಳಾ ಪದವಿ ಕಾಲೇಜು, ಬೀದರ್
ಅಕ್ಕಮಹಾದೇವಿ ಮಹಿಳಾ ಪದವಿ ಪೂರ್ವ ಕಾಲೇಜು ಬೀದರ್,
ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆ ಬೀದರ್
ಸಿದ್ರಾಮೇಶ್ವರ ಪ್ರಥಮ ದರ್ಜೆ ಪದವಿ ಕಾಲೇಜು ಕಮಲನಗರ.
ಎಸ್ವಿಇ ಸಂಯುಕ್ತ ಜೂನಿಯರ್ ಕಾಲೇಜು, ಕಮಲನಗರ
ಚನ್ನಬಸವೇಶ್ವರ ಪ್ರಾಥಮಿಕ ಶಾಲೆ, ಕಮಲನಗರ
ಎಸ್.ವಿ.ಇ.ಯ ಬಿ.ಎಡ್. ಕಾಲೇಜು, ಬೀದರ್
SVE ಯ D.Ed. ಕಾಲೇಜು (ಕನ್ನಡ), ಬೀದರ್
SVE ಯ D.Ed.ಕಾಲೇಜು(ಮರಾಠಿ), ಔರಾದ್
SVE ಯ D.Ed .ಕಾಲೇಜು (ಕನ್ನಡ), ಭಾಲ್ಕಿ
SVE ಯ D.Ed. ಕಾಲೇಜು(ಮರಾಠಿ), ಭಾಲ್ಕಿ
ಚನ್ನಬಸವೇಶ್ವರ ಆರ್.ಜಿ. ಕೇಂದ್ರ, ಭಾಲ್ಕಿ
ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆ, ಭಾಲ್ಕಿ.

ಹೀಗೆ ಈ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ.

**–ಚಂದನ ಶಾಂತಯ್ಯ ಸ್ವಾಮಿ**
ಉಚ್ಚಾ ತಾ. ಭಾಲ್ಕಿ ಜಿ. ಬೀದರ
9241978575

### ಕರುನಾಡ ಕಂದ

ಹೇ ಕರುನಾಡ ಕಂದ,
ನಿನ್ನ ಹೆಸರೇ ಚಂದ.

ಎತ್ತರ, ಮುಗಿಲೆತ್ತರ ನೀ ಬೆಳೆಯಬೇಕು
ಕರುನಾಡ ಮನೆ ಮನೆಯ ಬೆಳಕಾಗಬೇಕು ನೀ

ಆಕಾಶ ದೀಪವಾಗಿ ಕತ್ತಲೆಯ ತೊಡೆಯ ಬಾ,
ನರಕಾಸುರನ ಸುಟ್ಟು ನಾಶ ಮಾಡಲು ಬಾ

ಬಡವರನು  ದಲಿತರನು ಮೇಲೆತ್ತಿ ಬದುಕೋಣ
ಬಡಿವಾರ ಮಾಡುವವರ ಕೆಳಗೆ ತುಳಿಯ ಬಾ

ಅನ್ಯಾಯ ಮಾಡುವವರ ಹೆಡೆಮುರಿ ಕಟ್ಟಿ
ರಾಮರಾಜ್ಯ ಎಲ್ಲೆಲ್ಲೂ ಬರುವಂತೆ ಮಾಡು ಬಾ

ಕರುನಾಡ ಕಂದನಿಗೆ ಜಯವಾಗಲಿ,
ನೀ ಕಂಡ ಕನಸೆಲ್ಲಾ ನನಸಾಗಲಿ.

**–ಅಂಬುಜಾಕ್ಷಿ ನಾಗರಕಟ್ಟಿ**

## ನಕಲಿಗಳಿದ್ದಾರೆ ಎಚ್ಚರ.

**ಕೆಲ ದಿನಗಳ ಹಿಂದೆ ರಾಜ್ಯ ಮಟ್ಟದ ದಿನ ಪತ್ರಿಕೆಯೊಂದರಲ್ಲಿ ಗ್ರಾಮೀಣ ಪಶುಸಂಗೋಪನಾ ನಿಗಮ ನಿಯಮಿತ ಕಊ.ಟಊ  ವತಿಯಿಂದ ಗ್ರಾಮ ಪಂಚಾಯತಿಗೆ ಒಬ್ಬರಂತೆ ಕಾರ್ಯಕರ್ತರ ನೇಮಕ ಮಾಡಿಕೊಳ್ಳಲಾಗುತ್ತಿದೆ ಎನ್ನುವ ಜಾಹೀರಾತನ್ನು ನಂಬಿ ಸಾವಿರಾರು ಜನ ನಿರುದ್ಯೋಗಿ ಯುವಕ–ಯುವತಿಯರು ಪೂರ್ವಾಪರ ವಿಚಾರಿಸದೆ ಸಂಬಂಧಿಸಿದ ಇಲಾಖೆಯ ವೆಬ್ ಸೈಟ್ ಕೂಡಾ ಪರಿಶೀಲನೆ ಕೂಡಾ ಮಾಡದೆ ಆ ಜಾಹೀರಾತಿನಲ್ಲಿ ಕೊಟ್ಟಿದ್ದ ವೆಬ್ ಸೈಟ್ ಲಿ ತಮ್ಮ ಅಗತ್ಯ ದಾಖಲೆಗಳನ್ನು ಅಪ್ಲೋಡ್ ಮಾಡಿ 750 ರೂಪಾಯಿಗಳ ಆನ್ಲೈನ್ ಪೇಮೆಂಟ್ ಕೂಡಾ ಮಾಡಿ ಅವರಿಂದ ಬರುವ ರಿಪ್ಲೈ ಗಾಗಿ ಕಾಯುತ್ತಾ ಕುಳಿತಿದ್ದರು ಆ ಜಾಹಿರಾತಿನಲ್ಲಿ ಇದ್ದ ಕೊನೆಯ ದಿನಾಂಕ 25–8–2021 ಆದರೆ ಈಗಲೂ ಕೂಡಾ ಅರ್ಜಿ ಓಪೆನ್ ಇದೆ.**

**ಯಾವುದೇ ಇಲಾಖೆಯ ಅರ್ಜಿ ಕರೆದಾಗ ಹತ್ತಿರದ ಆ ಇಲಾಖೆಯ ಕಚೇರಿಗೆ ಒಮ್ಮೆ ಭೇಟಿ ನೀಡಿ ಅಥವಾ ಅಧಿಕೃತ ವೆಬ್ ಸೈಟ್ ಪರಿಶೀಲನೆ ನಡೆಸಿ ನಂತರ ಮುಂದುವರೆದರೆ ಒಳ್ಳೆಯದು ಎನ್ನುವುದು ನನ್ನ ಅಭಿಪ್ರಾಯ ಹಾಗೆಯೇ ಹಣಕ್ಕಾಗಿ ಜಾಹೀರಾತು ಹಾಕುವ ಯಾವುದೇ ಮಾಧ್ಯಮಗಳಾಗಲಿ ಈ ರೀತಿಯ ಜಾಹೀರಾತು ತೆಗೆದುಕೊಳ್ಳುವಾಗ ಒಂದಷ್ಟು ಅದರ ಮಾಹಿತಿ ತಿಳಿದು ಹಾಕುವುದು ಕೂಡಾ ಮಾಧ್ಯಮದ ಜವಾಬ್ದಾರಿ ಆಗಿದೆ.ಇಂತಹ ಯಾವುದೇ ಜಾಹಿರಾತು ನಿಮ್ಮ ಕಣ್ಣಿಗೆ ಕಂಡಲ್ಲಿ ಅದಕ್ಕೆ ಅರ್ಜಿ ಹಾಕುವಾಗ ನಿಮ್ಮ ದಾಖಲೆಗಳು ಹಾಗೂ ಆನ್ಲೈನ್ ಪೇಮೆಂಟ್ ಮಾಡುವ ಮೊದಲು ಒಮ್ಮೆ ಕೂಲಂಕುಷವಾಗಿ ಯೋಚಿಸಿ.**

**–ಸಂ**

ಕರುನಾಡ ಕಂದ
ಸಂಪುಟ–1 । ಸಂಚಿಕೆ–2
ದಿನಾಂಕ: 15–11–2021 । ಪುಟಗಳು: 16

# ಪೂರ್ವ ಜನ್ಮದ ಫಲ

ಶ್ರೀ ಕೃಷ್ಣ ಕಂಸನನ್ನು ಕೊಂದ ನಂತರ ತನ್ನ ಮಾತಾ ಪಿತೃಗಳಾದ ವಾಸುದೇವ ಮತ್ತು ದೇವಕಿಯನ್ನು ಬಿಡುಗಡೆ ಮಾಡಲು ಅಲ್ಲಿನ ಸೆರೆಮನೆಗೆ ಹೋದ.

ತಾಯಿ ದೇವಕಿ ಉತ್ಸಾಹದಿಂದ ಕೇಳಿದಳು...

ಮಗು... ನೀನೇ ದೇವರು ಮತ್ತು ನಿನಗೆ ದೈವಿಕ ಶಕ್ತಿಗಳಿವೆ. ಹಾಗಾದರೆ ಕಂಸನನ್ನು ಕೊಂದು ನಮ್ಮನ್ನು ಬಿಡುಗಡೆ ಮಾಡಲು ನೀನು ಹದಿನಾಲ್ಕು ವರ್ಷ ಏಕೆ ಕಾಯುತ್ತಿದ್ದೆ ?

ಶ್ರೀಕೃಷ್ಣ ಉತ್ತರಿಸಿದ..

ದೇವಸ್ವರೂಪಿ ತಾಯಿಯೆ ನನ್ನನ್ನು ಕ್ಷಮಿಸಿ. ಆದರೆ ಕಳೆದ ಜನ್ಮದಲ್ಲಿ ಹದಿನಾಲ್ಕು ವರ್ಷಗಳ ಕಾಲ ನೀನು ನನ್ನನ್ನು ಕಾಡಿಗೆ ಏಕೆ ಕಳುಹಿಸಿದೆ?

ದೇವಕಿಯು ಆಶ್ಚರ್ಯಚಕಿತಳಾಗಿ ಕೃಷ್ಣ, ಇದು ಹೇಗೆ ಸಾಧ್ಯ? ನೀನು ಯಾಕೆ ಹೀಗೆ ಹೇಳುತ್ತಿದ್ದೀ..?

ಕೃಷ್ಣನು ಉತ್ತರಿಸಿದ...ಅಮ್ಮಾ ನಿಮ್ಮ ಹಿಂದಿನ ಜನ್ಮದ ಬಗ್ಗೆ ನಿಮಗೆ ಏನೂ ನೆನಪಿಲ್ಲ. ಆದರೆ ನಿಮ್ಮ ಹಿಂದಿನ ಜನ್ಮದಲ್ಲಿ ನೀವು ಕೈಕೇಯಿಯಾಗಿದ್ದೀರಿ ಮತ್ತು ನಿಮ್ಮ ಪತಿ ದಶರಥನಾಗಿದ್ದ.

ದೇವಕಿಯು ಆಶ್ಚರ್ಯಚಕಿತಳಾದಳು ಮತ್ತು ಕುತೂಹಲದಿಂದ ಕೇಳಿದಳು

ಹಾಗಾದರೆ ಈಗ ಕೌಸಲ್ಯ ಯಾರು?

ಶ್ರೀ ಕೃಷ್ಣ ನಗುತ್ತ ಉತ್ತರಿಸಿದ...ತಾಯಿ ಯಶೋದಾ. ಹದಿನಾಲ್ಕು ವರ್ಷಗಳ ತಾಯಿಯ ಪ್ರೀತಿಯು ಅವಳ ಹಿಂದಿನ ಜನ್ಮದಲ್ಲಿ ನಿನ್ನಿಂದಾಗಿ ವಂಚಿತವಾಯಿತು. ಅದನ್ನು ಅವಳು ಈ ಜೀವನದಲ್ಲಿ ಪಡೆದುಕೊಂಡಿದ್ದಾಳೆ.

ನೆನಪಿಡಿ.

ಪ್ರತಿಯೊಬ್ಬರೂ ತಮ್ಮ ಕರ್ಮದ ಫಲವನ್ನು ಅನುಭವಿಸಬೇಕು. ದೇವತೆಗಳು ಕೂಡ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇನ್ನು ನೀವು ಯಾವ ಕರ್ಮವನ್ನು ಸಂಪಾದಿಸಬೇಕು ಎಂಬುದರ ಮೇಲೆ ಕಣ್ಣಿಡಿ.



## ಸಮಾಜ ಸೇವೆಗಾಗಿ ಪ್ರಶಸ್ತಿ

ಆಹಾ! ನಿನ್ನೆಯಿಂದ ಪದ್ಮಪ್ರಶಸ್ತಿ ಪುರಸ್ಕೃತರ ವಿವರಣೆಯನ್ನು ಓದಿ, ಚಿತ್ರವನ್ನು ನೋಡಿ, ಅವರ ಮಾತುಗಳನ್ನು ಕೇಳಿ ಕೇಳಿ ಪುನೀತನಾಗುತ್ತಿದ್ದೇನೆ. ರಾಜ್ದೀಪ್ ಸರ್ದೇಸಾಯಿ, ಬುರ್ಖಾ ದತ್ ನಂಥ ಜೋಕರ್ ಗಳಿಗೆ ಕೊಡಲಾಗುತ್ತಿದ್ದ ಪದ್ಮಪ್ರಶಸ್ತಿಗಳೆಲ್ಲ ದೇಶದ ಯಾವ್ಯಾವುದೋ ಮೂಲೆಗಳಲ್ಲಿರುವ ಸಾಮಾನ್ಯರಲ್ಲಿ ಸಾಮಾನ್ಯರಂತಿರುವ ನಿಜವಾದ ಸಾಧಕರನ್ನು ಹುಡುಕಿ ಹುಡುಕಿ ಕೊಡಲಾಗುತ್ತಿರುವ ಈ ಸಂದರ್ಭದಲ್ಲಿ ಭಾರತದ ನಿಜವಾದ ಆದರ್ಶ ಹಾಗೂ ಸತ್ತ್ವವನ್ನು ಈ ಪುರಸ್ಕೃತರ ಮೂಲಕ ಅರಿತು ಪುಳಕಿತನಾಗುತ್ತಿದ್ದೇನೆ.

ನಿನ್ನೆಯ ಪ್ರಶಸ್ತಿ ಪುರಸ್ಕೃತರ ಸಾಲಿನಲ್ಲಿ ಹಣ್ಣು ಮಾರಿ ಶಾಲೆ ಕಟ್ಟಿದವರು, ಗಂಡೋ ಹೆಣ್ಣೋ ಎಂಬ ಅಪಮಾನಕರ ಮಾತನ್ನು ಕೇಳಿಸಿಕೊಳ್ಳುತ್ತಲೇ ಸಾಧನೆ ಮಾಡಿದ ಜೋಗಿತಿ, ಅಂಕೋಲೆಯ ಯಾವುದೋ ಕಾಡಿನಲ್ಲೇ ಜೀವನವಿಡೀ ಅದೆಷ್ಟೋ ಸಾವಿರ ಗಿಡಗಳನ್ನು ನೆಟ್ಟು ಪೋಷಿಸಿದ ಹಾಲಕ್ಕಿಯಮ್ಮ, ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಅನಾಥ ಹೆಣಗಳನ್ನು ಸುಟ್ಟು ಮುಕ್ತಿ ದೊರಕಿಸಿದ ಷರೀಫಜ್ಜ, ಧರ್ಮಕಾರ್ಯದ ಯತಿಗಳು, ವಿಜ್ಞಾನಿಗಳು, ಶಾಸ್ತ್ರಜ್ಞರು, ದಿವ್ಯಾಂಗ ಸಾಧಕರು ಸೇರಿದಂತೆ
ನಮ್ಮ ಒಂದಿಡೀ ಜೀವನಕ್ಕೆ ಸ್ಫೂರ್ತಿ ತುಂಬಬಲ್ಲ ರತ್ನಗಳೇ ಸೇರಿದ್ದವು.

ಇವರಲ್ಲಿ ಹೆಚ್ಚಿನವರು ತಮ್ಮ ಕಾರ್ಯಕ್ಷೇತ್ರದ ಹೊರತಾಗಿ ಮತ್ತೇನನ್ನೂ ಕಂಡವರೂ ಅಲ್ಲ, ಬಯಸಿದವರೂ ಅಲ್ಲ. ತಮ್ಮ ಪಾಡಿಗೆ ತಾವು ಕರ್ತವ್ಯವೆಂಬಂತೆ ರಾಷ್ಟ್ರಸೇವೆಯನ್ನು ಮಾಡುತ್ತ ಇದ್ದವರು ಇವರೆಲ್ಲ. ನಮ್ಮ ಅಂಕೋಲೆಯ ತುಳಸಿಯಮ್ಮನ ಪತ್ರಕರ್ತರೊಂದಿಗಿನ ಮುಗ್ಧ ಮಾತುಗಳನ್ನಂತೂ ಹತ್ತಕ್ಕೂ ಹೆಚ್ಚು ಸಲ ಕೇಳಿ ಕೇಳಿ ಮನಸ್ಸು ತುಂಬಿಕೊಂಡಿದ್ದೇನೆ. ನಮ್ಮೆಲ್ಲರ ಮನೆಯಲ್ಲಿನ ಅಜ್ಜಿಯೇ ರಾಷ್ಟ್ರಪತಿಯೆದುರು ನಿಂತಿದ್ದಾಳೇನೋ ಅನ್ನಿಸುವಂಥ ಆಪ್ತತೆ ಅವಳಲ್ಲಿ.

ಸೂಟು ಬೂಟಿನ 'ದೊಡ್ಡಸ್ತಿಕೆ'ಯ ಬಂಗಲೆಯಾಗಿದ್ದ ರಾಷ್ಟ್ರಪತಿ ಭವನವೀಗ ಬರಿಗಾಲಿನ ಸಂತರನ್ನೂ ಬಿಗಿದಪ್ಪಿ ಬರಮಾಡಿಕೊಳ್ಳುತ್ತಿದೆಯಲ್ಲ! ಭಾರತದ ನಿಜವಾದ ಸತ್ತ್ವವನ್ನು ಗುರುತಿಸುತ್ತಿದೆಯಲ್ಲ. ಇವತ್ತಿಡೀ ಇಂಥದೊಂದು ತೃಪ್ತಭಾವ ಮನಸ್ಸನ್ನೆಲ್ಲ ಆವರಿಸಿದೆ.

ಸಿನಿಮಾದವರನ್ನು ಬಿಟ್ಟು ಈ ಪಟ್ಟಿಯಲ್ಲಿರುವ ಉಳಿದೆಲ್ಲವರೂ ಅಜ್ಞಾತರೂ, ನಿಜವಾದ ಸಾಧಕರೂ, ಸಮಾಜ ಸೇವೆಗಾಗಿ ತನ್ನನ್ನು ಅರ್ಪಿಸಿಕೊಂಡವರೂ ಆಗಿದ್ದಾರೆ. ಇಂಥವರನ್ನೆಲ್ಲ ಗುರುತಿಸಿ ರಾಷ್ಟ್ರಪತಿ ಭವನಕ್ಕೆ ಗೌರವಪೂರ್ವಕವಾಗಿ ಕರೆಸಿಕೊಂಡು ಪುರಸ್ಕರಿಸುವ ಒಂದು ಅರ್ಥಪೂರ್ಣ ಪರಂಪರೆಯನ್ನು ಹಾಕಿಕೊಟ್ಟಿರುವ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಅನಂತ ಧನ್ಯವಾದಗಳು.

–ವಿಶ್ವನಾಥ್ ಸುಂಕಸಾಲ

## ಅಧಿಕಾರಿಗಳ ನಿರ್ಲಕ್ಷ

**ಮಾಜಿ ಸಾರಿಗೆ ಸಚಿವರ ಕ್ಷೇತ್ರದಲ್ಲ ಬಸ್ಸಗಾಗಿ ಪರದಾಟ**



ಕೊಕಟನೂರ: ಬಸ್ ಕಿಕ್ಕಿರಿದು ತುಂಬಿ ಬಾಗಿಲಿಗೆ ಜೋತುಬಿದ್ದುವಿದ್ಯಾರ್ಥಿಗಳು ಪ್ರಯಾಣಮಾಡುತ್ತಿರುವುದು

ಈ ಗ್ರಾಮದಲ್ಲಿ ದೃಶ್ಯಗಳು ಸರ್ವೆ ಸಾಮಾನ್ಯ ಎನ್ನುವಂತಾಗಿದೆ ಸುಮಾರಾಗಿ ಒಂದು ಬಸ್ಸಿನಲ್ಲಿ 65 ರಿಂದ 70ರ ಒಳಗೆ ಜನ ಪ್ರಯಾಣ ಮಾಡಬಹುದು, ಆದರೆ ಗ್ರಾಮದಲ್ಲಿ ಕೆ.ಎಸ್.ಆರ್.ಟಿ ಬಸ್ ನಲ್ಲಿ ಸರಿ ಸುಮಾರು 120 ಹೆಚ್ಚೂ ಜನರು ಪ್ರಯಾಣ ಮಾಡಿ ಜೀವ ಭಯದಲ್ಲಿ ತಮ್ಮ ಮನೆ ಹಾಗೂ ಗ್ರಾಮಗಳಿಗೆ ಸೇರುವ ದೃಶ್ಯ ಸಾಮಾನ್ಯ ಸಂಗತಿ ಎನುವಂತಾಗಿದೆ. ಈ ಹಿಂದೆ ಮಾಜಿ ಸಾರಿಗೆ ಸಚಿವ ಲಕ್ಷ್ಮಣ್ ಸವದಿಯವರು ಸಚಿವರಿದ್ದ ಸಮಯದಲ್ಲಿ ಅಧಿಕಾರಿಗಳು ಅವರ ಭಯದಲ್ಲಿ ಸರಿಯಾಗಿ ನಡೆದುಕೊಳ್ಳುತ್ತಿದ್ದರು ಆದರೆ ಈಗ ಆ ಪರಿಸ್ಥಿತಿ ಇಲ್ಲವಾಗಿದೆ ಎಂದು ಸಾರ್ವಜನಿಕರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಗ್ರಾಮದಿಂದ ಯಲ್ಲಮ್ಮವಾಡಿ, ಸುಟ್ಟಟ್ಟಿ, ಝುಂಜರವಾಡ,ತುಂಗಳ, ಬುರ್ಲಟ್ಟಿ, ಕಟಗೇರಿ, ಸಾವಳಗಿ

ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಬಸ್ಸಿನಲ್ಲಿ ಪ್ರಯಾಣಿಕರು ಕಿಕ್ಕಿರಿದು ತುಂಬಿ ಅವರ ಪ್ರಾಣವನ್ನು ಲೆಕ್ಕಿಸದೆ ಪ್ರಯಾಣ ಮಾಡುತ್ತಾರೆ. ವಿಧ್ಯಾರ್ಥಿಗಳು ಬಸ್ ಬಾಗಿಲಿಗೆ ಜೋತುಬಿದ್ದು ಪ್ರಯಾಣ ಮಾಡುವುದನ್ನು ನೋಡಿದರೆ ಭಯ ಹುಟ್ಟಿಸುತ್ತದೆ. ಹಾಗಾದರೆ ವಿದ್ಯಾರ್ಥಿಗಳ ಜೀವಕ್ಕೆ ಬೆಲೆ ಇಲ್ಲವೆ?

ಗ್ರಾಮದಿಂದ ಸಾವಳಗಿ ಮಾರ್ಗವಾಗಿ ಪ್ರತಿದಿನ ಸಂಜೆ 5 ಗಂಟೆಗೆ ಹಾಗೂ ಝುಂಜರವಾಡ ಮಾರ್ಗವಾಗಿ ಪ್ರತಿದಿನ ಸಂಜೆ 6 ಗಂಟೆಗೆ ಬಸಗಳು ಹೊರಡುತ್ತವೆ. ಈ ಮಾರ್ಗವಾಗಿ ಹಲವು ಗ್ರಾಮಗಳು ಬರುವುದರಿಂದ ಸಾಮಾನ್ಯವಾಗಿ ಜನರು ಇದೇ ಬಸ್ಸುಗಳನ್ನು ಅವಲಂಬಿಸಿದ್ದಾರೆ. ಸಂಜೆ ಬಸ್ ಆಗಿದ್ರಿಂದ ವಿದ್ಯಾರ್ಥಿಗಳು ಪ್ರಯಾಣ ಮಾಡುವುದರಿಂದ ಈ ಬಸ್ ಸಂಪೂರ್ಣವಾಗಿ ತುಂಬಿಕೊಂಡು ಸಂಚರಿಸುತ್ತವೆ.

ತಜ್ಞರ ಕೋರೋನಾ ಮೂರನೆ ಅಲೆಯ ಬಗ್ಗೆ ಎಚ್ಚರಿಕೆ ನೀಡುತ್ತಿದ್ದಾರೆ: ಆದರೆ ಗ್ರಾಮದ ಬಸ್ ನಲ್ಲಿ ಸಮಾಜಿಕ ಅಂತರ್ ಎಂಬುವುದು ಮಾಯವಾಗಿದೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಗ್ರಾಮದಿಂದ ಮುಂದಿನ ಗ್ರಾಮಗಳವರೆಗೆ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಬೇಕು.

ವಿದ್ಯಾರ್ಥಿಗಳ ಆಗ್ರಹ: ಶಾಲಾ– ಕಾಲೇಜುಗಳು ಸಂಜೆ 4–45 ಗಂಟೆಗೆ ಬಿಡುತ್ತವೆ. ಬಸ್ಸಿನ ದಾರಿ ಕಾಯುತ್ತಾ 5–30 ಸಮಯದವರೆಗೆ ಕಾಯಬೇಕು, ಮನೆಗಳಿಗೆ ಸೇರುವಷ್ಟಿಗೆ ಕತ್ತಲಲಾಗುತ್ತಿದೆ ಆದ ಕಾರಣ ವಿಧ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಬಸ್ ಬಿಡಬೇಕು ಎನ್ನುವುದು ವಿದ್ಯಾರ್ಥಿಗಳ ಆಗ್ರಹವಾಗಿದೆ.




**KARUNADA KANDA**, Fortnightly, Published and Owned by Karibasappa Baligar, At & Post: Gunnal-583237, Tq: Yalaburga, Dist: Koppal. Printed at Vishwa Offset Printers and Publishers, Taluk Panchayat Complex, Koppal. Dist: Koppal-583231. Email: karunadakanda33@gmail.com, Ph:9986366909, 9742776385. KARKAN/2021/27600. Editor: Basavaraj Baligar